ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 19 ಭಾನುವಾರ 2023

₹4

ಸಂಪುಟ: 44 | ಸಂಚಿಕೆ: 212 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಸಂವಿಧಾನ, ಪ್ರಜಾಪ್ರಭುತ್ವ ವಿರೋಧಿ ಶಕ್ತಿ ದುರ್ಬಲಗೊಳಿಸಿ

ಸಮಾನತೆ ಸಮಾಜ ನಿರ್ಮಿಸುವುದೇ ಬಾಬೂಜಿಗೆ ಸಲ್ಲಿಸುವ ಗೌರವ

'ಆಧುನಿಕ ಭಾರತದ ನಿರ್ಮಾತೃ ಡಾ.ಬಾಬು ಜಗಜೀವನ್ ರಾಮ್' ಕೃತಿ ಬಿಡುಗಡೆಗೊಳಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು,ನ.18(ಪಿಎಂ)- ದೇಶದ ಸಂವಿಧಾನ, ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳನ್ನು ದುರ್ಬಲಗೊಳಿಸಿ, ಸಮಾನತೆಯ ಸಮಾಜ ನಿರ್ಮಿಸುವುದೇ ಡಾ.ಬಾಬು ಜಗಜೀವನ್‌ರಾಮ್ ಸೇರಿದಂತೆ ನಮ್ಮೆಲ್ಲಾ ಮಹನೀಯರಿಗೆ ಸಲ್ಲಿಸುವ ಗೌರವ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಗಾಂಧಿ ವಿಚಾರ ಪರಿಷತ್ತು ಮತ್ತು ಸೋಷಿಯಲ್ ಜಸ್ಟೀಸ್ ಫೌಂಡೇಷನ್ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಡಾ.ಹರೀಶ್‌ಕುಮಾರ್ ಅವರ 'ಆಧುನಿಕ ಭಾರತದ ನಿರ್ಮಾತೃ ಡಾ.ಬಾಬು ಜಗಜೀವನ್ ರಾಮ್' ಕೃತಿ ಮತ್ತು ಇವರದೇ ಸಂಗ್ರಹದ 'ಬಾಬೂಜಿ ಚಿತ್ರ ಸಂಪುಟ' ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಡಾ.ಬಾಬು ಜಗಜೀವನ್‌ರಾಮ್ (ಬಾಬೂಜಿ) ದೇಶ ಕಂಡ ಮುತ್ಸದ್ದಿ ರಾಜಕಾರಣಿ. ಅಪ್ರತಿಮ ದೇಶಪ್ರೇಮಿ, ಪ್ರಜಾಪ್ರಭುತ್ವ ವಾದಿ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅಂದು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲರಿಗೂ ಎಂತಹ ದೇಶ ನಮ್ಮದಾಗಬೇಕೆಂಬ ಕನಸ್ಸಿತ್ತು. ಅದಕ್ಕೆ ಪೂರಕವಾದ ಸಂವಿಧಾನವವನ್ನೂ ಡಾ.ಬಿ.ಆರ್.ಅಂಬೇಡ್ಕರ್ ರಚನೆ ಮಾಡಿ ಕೊಟ್ಟರು. ನಮ್ಮ ದೇಶದಲ್ಲಿ ಹಸಿವು, ಬಡತನ, ನಿರುದ್ಯೋಗ, ದಾರಿದ್ರ್ಯ, ಅನಕ್ಷರತೆ ಎಲ್ಲವೂ ತೊಲಗಿ, ಎಲ್ಲರಿಗೂ ಸಮಾನ ಅವಕಾಶವಿರುವ ಸಮಾನತೆ ಸಮಾಜ ನಿರ್ಮಿಸಬೇಕೆಂಬ ಕನಸ್ಸನ್ನು ಅಂಬೇಡ್ಕರ್, ನೆಹರು, ಬಾಬೂಜಿ ಸೇರಿದಂತೆ ನಮ್ಮೆಲ್ಲಾ ಮಹನೀಯರು ಹೊಂದಿದ್ದರು. ಅದಕ್ಕಾಗಿ ಅವರು ಪ್ರಯತ್ನವನ್ನೂ ಮಾಡಿದರು ಎಂದು ತಿಳಿಸಿದರು.

ಇಂದು ನಮಗೆ ಬೇಕಿರುವುದು ಅಂಬೇಡ್ಕರ್, ಗಾಂಧಿ, ಜಗಜೀವನರಾಮ್, ನೆಹರು ಆಶಯದ ಭಾರತವಾಗಿದೆ. ನಮಗೆ ಅವಕಾಶ ದೊರೆತಾಗ, ಅಂತಹ ರಾಜ್ಯ, ಭಾರತ ನಿರ್ಮಾಣದ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲಾ ಸರ್ಕಾರಗಳ ಉದ್ದೇಶ ಅದೇ ಆಗಿರಬೇಕು. ಸಂವಿಧಾನ ಪೀಠಿಕೆಯಲ್ಲಿನ ಆಶಯಗಳನ್ನು ಜಾರಿಯ ಪ್ರಯತ್ನ ಮಾಡಬೇಕು. ಆದರೆ ಇಂದು ಅನೇಕ ಶಕ್ತಿಗಳು ಅದಕ್ಕೆ ವಿರುದ್ಧವಾಗಿವೆ. ಅಂತಹ ಶಕ್ತಿಗಳ ವಿರುದ್ಧ ಹೋರಾಡುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಸಂವಿಧಾನ ಮತ್ತು ಪ್ರಜಾಪ್ರಭುತ್ವ ದುರ್ಬಲಗೊಳಿಸುವ ಶಕ್ತಿಗಳ ವಿರುದ್ಧವಾಗಿ ಹೋರಾಡಬೇಕಿದ್ದು, ಆ ಮೂಲಕ ಪ್ರಜಾಪ್ರಭುತ್ವ ಮತ್ತು ಸಂವಿಧಾನ ರಕ್ಷಣೆ ಮಾಡಬೇಕು. ಅದೇ ನಮ್ಮೆಲ್ಲಾ ಮಹನೀಯರಿಗೆ ಸಲ್ಲಿಸುವಂತಹ ಗೌರವ. ಇಂದು ಮಾತ್ರವಲ್ಲ, ಎಲ್ಲಾ ಕಾಲದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಇದ್ದವು. ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರ ಮತ್ತು ಈಗಲೂ ಇವೆ. ಅವುಗಳ ಶಕ್ತಿ ದುರ್ಬಲಗೊಳಿಸುವ ಕೆಲಸ ಮಾಡಬೇಕು. ಆ ಕೆಲಸವನ್ನು ನಾವೆಲ್ಲಾ ಮಾಡೋಣ ಎಂದರು.

ಭಾಷಣ ಮತ್ತು ಬರವಣಿಗೆ ಕಲೆ ಬಗ್ಗೆ ಸ್ವಾರಸ್ಯಕರ ಸಂಗತಿಯೊಂದನ್ನು ಹಂಚಿಕೊಂಡ ಸಿದ್ದರಾಮಯ್ಯ, ಜೆ.ಹೆಚ್.ಪಟೇಲ್ ಅವರ ವಿರುದ್ಧ ಆರೋಪ ಹೊಂದಿರುವ ವಿಮರ್ಶಾತ್ಮಕ ಬರವಣಿಗೆಯನ್ನು ಲಂಕೇಶ್ ಮಾಡಿದ್ದ ಸಂದರ್ಭವದು. ಅಂದು ಪಟೇಲರು ಬರವಣಿಗೆ ಮತ್ತು ಭಾಷಣ ಕಲೆ ಎರಡನ್ನೂ ಹೋಲಿಕೆ ಮಾಡಿ ಲಂಕೇಶ್‌ರಿಗೆ ಟಾಂಗ್ ಕೊಟ್ಟಿದ್ದರು. ಲಂಕೇಶ್ ನಿಮಗೆ ಬರೆಯಲು ಬರಬಹುದು. ಆದರೆ ನನಗೆ ಭಾಷಣ ಮಾಡಲು ಬರುತ್ತದೆ. ಭಾಷಣದ ಮೂಲಕ ನಿಮ್ಮ ತೇಜೋವಧೆ ಮಾಡುವ ಶಕ್ತಿ ನನಗಿದೆ ಎಂದು ಪಟೇಲರು ಉತ್ತರ ಕೊಟ್ಟಿದ್ದರು ಎಂದು ಹಳೆ ನೆನಪಿಗೆ ಜಾರಿದರು.

ಬಾಬಾ ಸಾಹೇಬರು, ಬಾಬೂಜಿ ವಿಂಗಡಿಸಿದರೆ ದಲಿತ ಸಮುದಾಯ ದುರ್ಬಲ

ಮೈಸೂರು,ನ.18(ಪಿಎಂ)- ದೇಶದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬೂಜಿ ಅವರನ್ನು ಬೇರೆ ಬೇರೆ ಮಾಡಿ, ದಲಿತರ ಒಗ್ಗಟ್ಟು ಮುರಿಯಲು ಮತ್ತು ಶ್ರೇಯೋಭಿವೃದ್ಧಿ ತಡೆಯಲು ಹುನ್ನಾರ ನಡೆಯುತ್ತಿದೆ. ಬಾಬೂಜಿ ಮತ್ತು ಬಾಬಾ ಸಾಹೇಬರನ್ನು ವಿಂಗಡಿಸಿ, ನೋಡಿದರೆ ದಲಿತ ಸಮುದಾಯ ದುರ್ಬಲವಾಗಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಎಚ್ಚರಿಸಿದರು.

ಮಾರ್ಮಿಕ ನುಡಿ: ಡಾ.ಯತೀಂದ್ರ ಸಿದ್ದರಾಮಯ್ಯ ಅತ್ಯಂತ ಸರಳ ವ್ಯಕ್ತಿತ್ವದವರು. ಆದರೆ ಇವರನ್ನು ಕಂಡರೇ ಬಹಳಷ್ಟು ಜನಕ್ಕೆ ಸ್ವಲ್ಪ ಉರಿ. ಜನಪರ, ಕಾನೂನು ಪರ ಕೆಲಸ ಮಾಡಿದರೆ ಅವರಿಗೆ ಆಗಲ್ಲ. ಹೊಟ್ಟೆ ಉರಿಗೂ ಸಂವಿಧಾನದಲ್ಲಿ ಅವಕಾಶವಿದ್ದು, ಅದಕ್ಕೇನೂ ಮಾಡಲಾಗದು ಎಂದು ಇತ್ತೀಚಿಗಿನ ಬೆಳವಣಿಗೆ ಹಿನ್ನೆಲೆಯಲ್ಲಿ ಡಾ.ಮಹದೇವಪ್ಪ, ಪರೋಕ್ಷವಾಗಿ ಮಾರ್ಮಿಕ ನುಡಿಗಳನ್ನಾಡಿದರು.

ಕೃತಿ ಕರ್ತೃ ಡಾ.ಹರೀಶ್‌ಕುಮಾರ್ ಮಾತನಾಡಿ, ಕಾಂಗ್ರೆಸ್‌ನೊಂದಿಗೆ ದಲಿತ, ರೈತ, ಕಾರ್ಮಿಕ ಸಂಘಟನೆಗಳು ಬೆಂಬಲವಾಗಿ ನಿಂತ ಹಿನ್ನೆಲೆಯಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಇತಿಹಾಸ ಸೃಷ್ಟಿಯಾಗಿದೆ. ಬಹುಶಃ ಮುಂದಿನ ವರ್ಷವೂ ಇದೇ ರೀತಿ ಎಚ್ಚೆತ್ತುಕೊಂಡರೆ, ಭಾರತ ನೆಲದಲ್ಲಿ ಕೋಮುವಾದಿಗಳು, ದ್ವೇಷ ಬಿತ್ತುವವರಿಗೆ ಜಾಗ ಇರುವುದಿಲ್ಲ. ಗಾಂಧಿ, ಅಂಬೇಡ್ಕರ್, ಬಾಬೂಜಿ, ಲೋಹಿಯಾ ಮತ್ತು ಜೆಪಿಯು ಆಶಯದ ಭಾರತ ನಿರ್ಮಾಣವಾಗಲು ಬಹಶಃ ಸಿದ್ದರಾಮಯ್ಯನವರು ಪ್ರಧಾನಿಯಾಗಬೇಕು ಎಂದು ಹೇಳಿದರು.

ಕೃತಿ ಕುರಿತು ಸಾಹಿತಿ ಪ್ರೊ.ಸಿ.ನಾಗಣ್ಣ ಮಾತನಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ನಿವೃತ್ತ ಪ್ರಾಧ್ಯಾಪಕಿ ಪ್ರೊ.ಅನುರಾಧ, ವಕೀಲ ಎನ್.ಶಿವಪ್ರಸಾದ್ ಮತ್ತಿತರರು ಹಾಜರಿದ್ದರು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 19 ಭಾನುವಾರ 2023

ಸಂಪುಟ: 44 | ಸಂಚಿಕೆ: 212 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..

₹4



ಇಂದು ವಿಶ್ವಕಪ್ ಕ್ರಿಕೆಟ್ ಫೈನಲ್ ಮಹಾಸಮರ

ಭಾರತ–ಆಸ್ಟ್ರೇಲಿಯಾ ಹಣಾಹಣಿ ಗೆಲುವು ನಮ್ಮದೇ...!



ಪ್ರಧಾನಿ ಮೋದಿ, ಗಣ್ಯರ ವೀಕ್ಷಣೆ



ಭಾನುವಾರ ನಡೆಯುವ ವಿಶ್ವಕಪ್ ಫೈನಲ್ ಪಂದ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ, ಆಸ್ಟ್ರೇಲಿಯಾದ ಉಪ ಪ್ರಧಾನಿ ರಿಚರ್ಡ್ ಮಾರ್ಲ್ಸ್, ಕೇಂದ್ರ ಗೃಹ ಸಚಿವ ಅಮಿತ್ ಶಾ, ಸೂಪರ್ ಸ್ಟಾರ್‌ಗಳಾದ ಅಮಿತಾಬ್ ಬಚ್ಚನ್, ರಜನಿಕಾಂತ್, ಕಮಲ್ ಹಾಸನ್, ಮೋಹನ್ ಲಾಲ್, ವೆಂಕಟೇಶ್, ರಾಮ್ ಚರಣ್, ಕ್ರಿಕೆಟ್ ದಿಗ್ಗಜರಾದ ಕಪಿಲ್ ದೇವ್, ಸಚಿನ್ ತೆಂಡೂಲ್ಕರ್, ಧೋನಿ, ಸೆಹ್ವಾಗ್, ಯುವರಾಜ್ ಸಿಂಗ್ ಸೇರಿದಂತೆ ಅತಿಗಣ್ಯ ವ್ಯಕ್ತಿಗಳು ಪಾಲ್ಗೊಳ್ಳಲಿದ್ದಾರೆ. ಪಂದ್ಯ ವೀಕ್ಷಣೆಗೆ ಆಸ್ಟ್ರೇಲಿಯಾ ಪ್ರಧಾನಿಗಳಿಗೂ ಮೋದಿ ಆಹ್ವಾನ ನೀಡಿದ್ದು, ಪಂದ್ಯ ವೀಕ್ಷಣೆಗೆ ಆಗಮಿಸಲಿದ್ದಾರೆ.

ಅಹಮದಾಬಾದ್, ನ.18– ವಿಶ್ವ ವಿಜೇತರನ್ನು ನಿರ್ಧರಿಸಲು ವಿಶ್ವದ ಅತೀ ದೊಡ್ಡ ನರೇಂದ್ರ ಮೋದಿ ಕ್ರೀಡಾಂಗಣ ಸಜ್ಜುಗೊಂಡಿದ್ದು, ನಾಳೆ (ಭಾನುವಾರ) ನಡೆಯುವ ಹೈವೋಲ್ಟೇಜ್ ಫೈನಲ್ ಪಂದ್ಯದಲ್ಲಿ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳು ವಿಶ್ವಕಪ್‌ಗಾಗಿ ಸೆಣಸಾಡಲಿವೆ.

ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿದ್ದು, ಪಂದ್ಯ ಕಣ್ತುಂಬಿಕೊಳ್ಳಲು ವಿಶ್ವ ಸೇರಿದಂತೆ ಭಾರತದ ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳು ತುದಿಗಾಲಿನಲ್ಲಿ ನಿಂತಿದ್ದಾರೆ. ಅಲ್ಲದೇ ಈ ಪಂದ್ಯಕ್ಕೆ ದಾಖಲೆಯ 1.30 ಲಕ್ಷ ಮಂದಿ ಪ್ರೇಕ್ಷಕರು ಪ್ರತ್ಯಕ್ಷ ಸಾಕ್ಷಿಯಾಗಲಿದ್ದಾರೆ. ಪ್ರಸಕ್ತ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಆಡಿರುವ ಎಲ್ಲಾ 10 ಪಂದ್ಯಗಳಲ್ಲಿ ಗೆಲುವು ಸಾಧಿಸಿ ಫೈನಲ್ ಪ್ರವೇಶಿಸಿದ್ದು, 1983 ಹಾಗೂ 2011ರ ಬಳಿಕ ಇದೀಗ ಭಾರತ ಮೂರನೇ ವಿಶ್ವಕಪ್ ಮುಡಿಗೇರಿಸಿಕೊಳ್ಳಲು ಎದುರು ನೋಡುತ್ತಿದೆ. ಅತ್ತ 1987, 1999, 2003, 2007 ಮತ್ತು 2015ರಲ್ಲಿ ವಿಶ್ವಕಪ್ ಮುಡಿಗೇರಿಸಿಕೊಂಡಿರುವ ಆಸೀಸ್ 6ನೇ ಬಾರಿಗೆ ಪ್ರಶಸ್ತಿ ಗೆಲ್ಲಲು ರಣತಂತ್ರ ರೂಪಿಸಿದೆ. ಬರೋಬ್ಬರಿ 20 ವರ್ಷಗಳ ಬಳಿಕ ಭಾರತ ಹಾಗೂ ಆಸ್ಟ್ರೇಲಿಯಾ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಸೆಣಸುತ್ತಿವೆ. 2003ರಲ್ಲಿ ●6ನೇ ಪುಟಕ್ಕೆ

ಸಮಯ: ಮಧ್ಯಾಹ್ನ 2 ಗಂಟೆಗೆ
ಸ್ಥಳ: ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣ, ಅಹಮದಾಬಾದ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಡಿಸ್ನಿ ಹಾಟ್‌ಸ್ಟಾರ್



"ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದಲ್ಲಿ ಭಾರತೀಯರ ಗೆಲುವನ್ನು ಸಂಭ್ರಮಿಸಲು ನಾನು ಎಲ್ಲರಂತೆ ಕಾತುರನಾಗಿದ್ದೇನೆ. ಬೌಲಿಂಗ್, ಬ್ಯಾಟಿಂಗ್, ಫೀಲ್ಡಿಂಗ್ ಎಲ್ಲಾ ವಿಭಾಗಗಳಲ್ಲೂ ನಮ್ಮದು ಒಂದು ಪರಿಪೂರ್ಣ ತಂಡವಾಗಿರುವುದರಿಂದ ಈ ಬಾರಿಯ ವಿಶ್ವಕಪ್ ಭಾರತದ ಮಡಿಲು ಸೇರುವುದು ನಿಶ್ಚಿತ' –ಸಿದ್ದರಾಮಯ್ಯ

ಭಾರತದ ಯಶಸ್ಸು ದ್ರಾವಿಡ್‌ಗೆ ಅರ್ಪಣೆ

"ಭಾರತ ತಂಡದ ಯಶಸ್ಸಿನ ಶ್ರೇಯಸ್ಸು ಮುಖ್ಯ ಕೋಚ್ ರಾಹುಲ್ ದ್ರಾವಿಡ್‌ಗೆ ಸಲ್ಲಬೇಕು. ತಂಡದ ಯಶಸ್ಸಿನ ಹಿಂದೆ ಕೋಚ್ ರಾಹುಲ್ ದ್ರಾವಿಡ್ ಅವರ ಪಾತ್ರ ಅಪಾರ. ತಂಡದ ಎಲ್ಲ ಆಟಗಾರರಿಗೂ ಸ್ವಾತಂತ್ರ ನೀಡಿದ್ದಾರೆ. ಆಟಗಾರರಿಗೆ ಬೇಕಾದ್ದನ್ನು ಮಾಡುವ ಅವಕಾಶ ಮಾಡಿಕೊಟ್ಟಿದ್ದಾರೆ. ತಂಡದ ಪ್ರತಿಯೊಬ್ಬ ಆಟಗಾರನಿಗೆ ಅವರದ್ದೇ ಜವಾಬ್ದಾರಿ ನೀಡಿದ್ದಾರೆ. ಇದರಿಂದ ಆಟಗಾರರಲ್ಲಿ ಸ್ಪಷ್ಟತೆ ಕಾಣಬಹುದು. ಸದಾ ಆಟಗಾರರ ಬೆಂಬಲಕ್ಕೆ ನಿಲ್ಲುತ್ತಾರೆ. 2022ರ ಟಿ20 ವಿಶ್ವಕಪ್ ಬಳಿಕ ಪ್ರತಿಯೊಬ್ಬ ಆಟಗಾರನಿಗೆ ಬೆಂಬಲ ನೀಡಿದ್ದಾರೆ.

ತಂಡದಲ್ಲಿ ರಾಹುಲ್ ದ್ರಾವಿಡ್ ಅವರ ಉಪಸ್ಥಿತಿಯಿಂದ ಡ್ರೆಸಿಂಗ್ ರೂಮ್‌ನಲ್ಲಿ ಶಾಂತಿ ನೆಲೆಸಿದೆ. ವಿಶ್ವಕಪ್‌ನ ಮೊದಲ ಪಂದ್ಯದಿಂದಲೂ ತಂಡದ ಡ್ರೆಸಿಂಗ್ ರೂಮ್ ಅತ್ಯಂತ ಪ್ರಶಾಂತವಾಗಿದೆ. ಒತ್ತಡದ ಪಂದ್ಯಗಳಲ್ಲೂ ನಮ್ಮ ಡ್ರೆಸಿಂಗ್ ರೂಮ್‌ನಲ್ಲಿ ಆತಂಕ ಮೂಡಿಲ್ಲ ಎಂದಿದ್ದಾರೆ. ಆಟಗಾರನಾಗಿ ರಾಹುಲ್ ದ್ರಾವಿಡ್ ಅವರಿಗೆ 2003ರ ವಿಶ್ವಕಪ್‌ನಲ್ಲಿ ಟ್ರೋಫಿ ಎತ್ತಿ ಹಿಡಿಯುವ ಅವಕಾಶ ಕೈತಪ್ಪಿತ್ತು. ಅದೇ ಆಸ್ಟ್ರೇಲಿಯಾ ಎದುರು ಸೇಡು ತೀರಿಸಿಕೊಳ್ಳುವ ಅವಕಾಶ ದ್ರಾವಿಡ್‌ಗೆ 2 ದಶಕಗಳ ಬಳಿಕ ಲಭ್ಯವಾಗಿದೆ. ಈ ಬಾರಿ ಆಟಗಾರನಾಗಿ ಅಲ್ಲ ಭಾರತ ತಂಡದ ಕೋಚ್ ಆಗಿ ವಿಶ್ವಕಪ್ ಗೆಲ್ಲಿಸಿಕೊಡುವ ಪ್ರಯತ್ನದಲ್ಲಿದ್ದಾರೆ.

–ರೋಹಿತ್ ಶರ್ಮಾ, ಭಾರತ ತಂಡದ ನಾಯಕ

ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯ ವೀಕ್ಷಣೆಗೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ವ್ಯವಸ್ಥೆ

ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ಮಧ್ಯೆ ನ.19 ರಂದು ಮಧ್ಯಾಹ್ನ 2 ಗಂಟೆಗೆ ನಡೆಯುವ ವಿಶ್ವಕಪ್ ಫೈನಲ್ ಪಂದ್ಯಾವಳಿ ವೀಕ್ಷಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಉಚಿತ ನೇರ ಪ್ರಸಾರವನ್ನು ಏರ್ಪಡಿಸಲಾಗಿದ್ದು, ಇದಕ್ಕಾಗಿ ಉತ್ತಮವಾದ ಎಲ್‌ಸಿಡಿ ಪರದೆ ಮತ್ತು ಸೌಂಡ್ ಸಿಸ್ಟಮ್ ಅಳವಡಿಸಲಾಗಿದೆ. ಕ್ರಿಕೆಟ್ ಪಂದ್ಯಾವಳಿಯ ವೀಕ್ಷಣೆಗೆ ಕ್ರೀಡಾಪಟುಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಪ್ರೇಕ್ಷಕರ ಬಾಯಿ ಮುಚ್ಚಿಸುವುದೇ ನಮ್ಮ ಗುರಿ

"ಆತಿಥೇಯರ ಎದುರು ಫೈನಲ್ ಆಡುತ್ತಿರುವ ಕಾರಣ ಕ್ರೀಡಾಂಗಣದಲ್ಲಿ ಪ್ರೇಕ್ಷಕರ ಬೆಂಬಲ ನೂರರಷ್ಟು ಆತಿಥೇಯರ ತಂಡದ ಪರವಾಗಿಯೇ ಇರಲಿದೆ. ಅಂತೆಯೇ ಈ ವಿಶ್ವಕಪ್ ಟೂರ್ನಿಯಲ್ಲಿ ಟೀಮ್ ಇಂಡಿಯಾ ಜಯದ ನಾಗಾಲೋಟದಲ್ಲಿ ಫೈನಲ್‌ಗೆ ತಲುಪಿದೆ. ಸಹಜವಾಗಿಯೇ ಅಭಿಮಾನಿಗಳ ಬೆಂಬಲ ಭಾರತ ತಂಡದ ಪರವಾಗಿ ಇರುತ್ತದೆ. ಹೀಗಾಗಿ ಕ್ರೀಡಾಂಗಣದಲ್ಲಿ ಸೇರಬಲ್ಲ 1.3 ಲಕ್ಷ ಮಂದಿ ಆತಿಥೇಯ ಪ್ರೇಕ್ಷಕರ ಬಾಯಿ ಮುಚ್ಚಿಸುವಂತಹ ಆಟವಾಡಿದರೆ ಅದಕ್ಕಿಂತಲೂ ತೃಪ್ತಿಕರ ಅನುಭವ ಮತ್ತೊಂದು ಇರಲ್ಲ. –ಪ್ಯಾಟ್ ಕಮಿನ್ಸ್, ಆಸ್ಟ್ರೇಲಿಯಾ ತಂಡದ ನಾಯಕ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾಜಿ ಸಿಎಂ ಕುಮಾರಸ್ವಾಮಿ ವರ್ಗಾವಣೆ ದಂಧೆ ಆರೋಪ

ರಾಜ್ಯ ಸರ್ಕಾರದ ವರ್ಚಸ್ಸಿಗೆ ಭಾರಿ ಧಕ್ಕೆ

- ಒಂದೆಡೆ ಪಂಚರಾಜ್ಯ ಚುನಾವಣೆ; ಇನ್ನೇನು ಲೋಕ ಸಮರವೂ ಸಮೀಪಿಸುತ್ತಿರುವ ವೇಳೆ ಆರೋಪದಿಂದ ಕಾಂಗ್ರೆಸ್ ಕಂಗಾಲು
- ಕುಮಾರಸ್ವಾಮಿ ವಿರುದ್ಧ ಮುಗಿಬಿದ್ದಿರುವ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಂಪುಟ ಸದಸ್ಯರು



ಬೆಂಗಳೂರು, ನ.18(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ವರ್ಗಾವಣೆ ದಂಧೆ ಆರೋಪ ಮಾಡಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಇಡೀ ಮಂತ್ರಿಮಂಡಲವೇ ಕೆರಳಿ ಕೆಂಡವಾಗಿದೆ.

ಸಿದ್ದರಾಮಯ್ಯ ಅವರ ಪುತ್ರ ಡಾ. ಯತೀಂದ್ರ ವರ್ಗಾವಣೆ ದಂಧೆಯಲ್ಲಿ ತೊಡಗಿದ್ದಾರೆಂದು ಕುಮಾರಸ್ವಾಮಿ ಅವರು ಕಳೆದ ಮೂರು ದಿನಗಳಿಂದ ಸತತವಾಗಿ ಆರೋಪ ಮಾಡುತ್ತಿರುವುದು ಸರ್ಕಾರದ ವರ್ಚಸ್ಸಿಗೆ ಧಕ್ಕೆ ತಂದಿದೆ. ಒಂದೆಡೆ ಪಂಚರಾಜ್ಯಗಳ ವಿಧಾನಸಭೆ ಚುನಾವಣೆ, ಮತ್ತೊಂದೆಡೆ ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು, ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಯೊಬ್ಬರು ಮಾಡಿರುವ ಗುರುತರ ಆರೋಪ ಜನರಿಗೆ ತಪ್ಪು ಸಂದೇಶ ರವಾನೆಯಾಗಲಿದೆ. ಇದರಿಂದ ಗ್ಯಾರಂಟಿ ಯೋಜನೆಗಳ ಜನಪ್ರಿಯತೆಯೂ ಮಂಕಾಗಲಿದೆ ಎಂಬ ಅಳುಕು.

ಭ್ರಷ್ಟಾಚಾರದ ವಿರುದ್ಧ ಸದಾ ಆರೋಪ ಮಾಡಿ ಅಧಿಕಾರಕ್ಕೆ ಬಂದಿರುವ ಸಿದ್ದರಾಮಯ್ಯ ಅವರ ವಿರುದ್ಧ ಇಂತಹ ಆರೋಪ ಬಂದಿರುವುದನ್ನು ಅವರ ಬೆಂಬಲಿಗರು ಸಹಿಸಲಾಗುತ್ತಿಲ್ಲ.

ಸಿದ್ದರಾಮಯ್ಯ ಮತ್ತು ಅವರ ಪುತ್ರ ಯತೀಂದ್ರ ಅವರ ವಿರುದ್ಧ ಕುಮಾರಸ್ವಾಮಿ ಅವರ ಆರೋಪವನ್ನು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ. ಅಲ್ಲದೆ, ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿ ಅವರಂತೂ ಒಂದೇ ದಿನ ಕುಮಾರಸ್ವಾಮಿ ವಿರುದ್ಧ ಮೂರು ಪ್ರತ್ಯೇಕ ಟ್ವೀಟ್ ಮಾಡಿ ಆರೋಪ ಅಲ್ಲಗಳೆದಿದ್ದಲ್ಲದೆ, ತಮ್ಮ ಮೇಲೆ ಬಂದಿರುವ ಆರೋಪವನ್ನು ತಳ್ಳಿ ಹಾಕಿದ್ದಾರೆ. ಸಿದ್ದರಾಮಯ್ಯ ಒಂದೆಡೆ ಕುಮಾರಸ್ವಾಮಿ ವಿರುದ್ಧ ಟೀಕಾಪ್ರಹಾರ ಮುಂದುವರೆಸಿದ್ದರೆ, ಮತ್ತೊಂದೆಡೆ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ವಿರುದ್ಧ ವಿಧಾನಸಭೆಯಲ್ಲೇ ಉತ್ತರ ಕೊಡುತ್ತೇವೆ ಎಂದಿದ್ದಾರೆ. ಕುಮಾರಸ್ವಾಮಿ ಅವರು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು, ಏನಾದರೂ ಮಾತನಾಡಿದರೆ, ●6ನೇ ಪುಟಕ್ಕೆ

ಪೊಲೀಸ್ ಇನ್‌ಸ್ಪೆಕ್ಟರ್ ವರ್ಗಾವಣೆ ಪಟ್ಟಿಯಲ್ಲಿ 'ವಿವೇಕಾನಂದ'!

- ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪುತ್ರ ಮಾಜಿ ಶಾಸಕ ಡಾ.ಯತೀಂದ್ರರ ಸಂಭಾಷಣೆಯಲ್ಲಿ ಪ್ರಸ್ತಾಪಿತ ಹೆಸರಿದು!
- ಸಂಭಾಷಣೆ ನಡೆದ 48 ಗಂಟೆಯೊಳಗೆ ಇನ್‌ಸ್ಪೆಕ್ಟರ್ ವರ್ಗಾವಣೆ ಪ್ರಕಟವಾದ ಬೆನ್ನಲ್ಲೇ ಮತ್ತೆ ಕೆದಕಿದ ಮಾಜಿ ಸಿಎಂ ಕುಮಾರಸ್ವಾಮಿ

ಬೆಂಗಳೂರು, ನ.18(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರ ನಡುವಿನ ಫೋನ್ ಸಂಭಾಷಣೆಯಲ್ಲಿ ಪ್ರಸ್ತಾಪಗೊಂಡಿದ್ದ 'ವಿವೇಕಾನಂದ' ಹೆಸರು ಕಳೆದ ರಾತ್ರಿ ಹೊರಬಿದ್ದ ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ಪಟ್ಟಿಯಲ್ಲಿ ಪ್ರತ್ಯಕ್ಷವಾಗಿರುವುದಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟೀಕಾಪ್ರಹಾರ ನಡೆಸಿರುವ ಅವರು, ಕರ್ನಾಟಕದ ಕಲೆಕ್ಷನ್ ಪ್ರಿನ್ಸ್ ವಿಡಿಯೋದಲ್ಲಿ ನುಸುಳಿದ್ದ ವಿವೇಕಾನಂದ 48 ಗಂಟೆಯೊಳಗೆ ವರ್ಗಾವಣೆ ಪಟ್ಟಿಯಲ್ಲಿ ಒಳನುಸುಳಿದ್ದು ಹೇಗೆ? ಎಂದು ಪ್ರಶ್ನೆ ಮಾಡಿದ್ದಾರೆ. ಬಾಯಿ ತೆರೆದರೆ ಭಗವದ್ಗೀತೆ, ನಾಲಿಗೆ ಮೇಲೆ ನೈತಿಕತೆಯ ನಾಟ್ಯ, ಮಾತಿ ಮಾತಿನಲ್ಲೂ ಮೌಲ್ಯಗಳದ್ದೇ ಮಂಥನ! ಕೊನೆಗೆ, ಝಣ ಝಣ ಕಾಂಚಾಣ. ಇದೇ ನೋಡಿ ಬಹಿರಂಗವಾದ ಸಿಎಂ ಸಾಹೇಬರ ಸದ್ಯದ ಅಂತರಂಗ ಶುದ್ಧಿ! ನಾಚಿಕೆ ಆಗಬೇಕು ಎಂದು ಕಿಡಿಕಾರಿದ್ದಾರೆ. ಕರ್ನಾಟಕದ ಕಲೆಕ್ಷನ್ ಪ್ರಿನ್ಸ್ ವಿಡಿಯೋದಲ್ಲಿ ನುಸುಳಿದ್ದ 'ವಿವೇಕಾನಂದ', 48 ಗಂಟೆಗಳ ಒಳಗಾಗಿಯೇ ಪೊಲೀಸ್ ಇನ್‌ಸ್ಪೆಕ್ಟರ್ ವರ್ಗಾವಣೆ ಪಟ್ಟಿಯಲ್ಲಿ ಒಳನುಸಳಿದ್ದು ಹೇಗೆ? ಒಂದು ಸರ್ಕಾರ, ವಿಸ್ಮಯಗಳ ಆಗರ! ಡೂಪ್ಲಿಕೇಟ್ ಸಿಎಂ–ಡಿಸಿಎಂ ಸಲಹೆ ಮೇರೆಗೆ ●6ನೇ ಪುಟಕ್ಕೆ

ನಮ್ಮ ಕುಟುಂಬ ಹಣಿಯಲು ಕುಮಾರಸ್ವಾಮಿ ಶತಪ್ರಯತ್ನ

- ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಆರೋಪ
- ವಿಡಿಯೋ ವೈರಲ್ ಬಳಿಕ ಡಾ.ಯತೀಂದ್ರ ಮೊದಲ ಪ್ರತಿಕ್ರಿಯೆ
- ವಿವೇಕಾನಂದ ಯಾರು ನನಗೆ ಗೊತ್ತಿಲ್ಲ
- ವರ್ಗಾವಣೆಗೂ ನನಗೂ ಸಂಬಂಧವಿಲ್ಲ
- ನನ್ನ ಹೆಸರು ಡ್ರ್ಯಾಗ್ ಮಾಡಬೇಡಿ
- ಹೆಚ್.ಡಿ.ಕುಮಾರಸ್ವಾಮಿಯದ್ದೂ ನೀಚ ರಾಜಕಾರಣ

ಮೈಸೂರು, ನ.18(ಬಿಎಲ್‌ಯು)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಯಾವುದಾದರು ಒಂದು ಪ್ರಕರಣದಲ್ಲಿ ನಮ್ಮ ಕುಟುಂಬವನ್ನು ಹಣಿಯಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರರೂ ಆದ ಮಾಜಿ ಶಾಸಕ ಡಾ.ಯತೀಂದ್ರ ಆರೋಪಿಸಿದ್ದಾರೆ.

ಮೈಸೂರಿನ ಕೀಳನಪುರದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ವರ್ಗಾವಣೆ ವಿಚಾರವಾಗಿ ಮಾತನಾಡಿದ್ದಾರೆಂಬ ವಿಡಿಯೋ ವೈರಲ್ ಆದ ನಂತರ ಮೊದಲ ಬಾರಿಗೆ ಡಾ.ಯತೀಂದ್ರ ಸ್ಪಷ್ಟನೆ ನೀಡಿದ್ದಾರೆ. ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ವಿಡಿಯೋ ವೈರಲ್ ಬಗ್ಗೆ ಸ್ಪಷ್ಟೀಕರಣ ಕೊಡುವ ಅಗತ್ಯವೇ ಇಲ್ಲ ಎಂದು ಹೇಳಿ, ನಂತರ ವಿವರಣೆ ನೀಡಿದರು. ವಿವೇಕಾನಂದ ಯಾರು, ಆತ ಯಾರು ಎಂದು ನನಗೆ



ಈಗಲೂ ಗೊತ್ತಿಲ್ಲ. ವಿವೇಕಾನಂದ ವರ್ಗಾವಣೆ ಎಲ್ಲಿಗೆ ಆಗಿದೆ, ಈ ಬಗ್ಗೆ ಆ ಕ್ಷೇತ್ರದ ಶಾಸಕರನ್ನು ಕೇಳಿ. ಅದಕ್ಕೂ ನನಗೂ ಸಂಬಂಧವಿಲ್ಲ. ನಾನು ಅಂದು ಮಾತನಾಡಿರುವುದು ಬಿಇಒ ವಿವೇಕಾನಂದ ಬಗ್ಗೆಯೇ ಹೊರತು, ಬೇರೆ ವಿವೇಕಾನಂದ ಕುರಿತಲ್ಲ. ಪೊಲೀಸರ ವರ್ಗಾವಣೆ ಬಗ್ಗೆ ನನಗೆ ಗೊತ್ತಿಲ್ಲ. ಅದಕ್ಕೂ ನನಗೂ ಸಂಬಂಧವಿಲ್ಲ ಎಂದು ಡಾ.ಯತೀಂದ್ರ ಸ್ಪಷ್ಟಪಡಿಸಿದರು. ನಮ್ಮ ತಂದೆ ಜೊತೆ ●9ನೇ ಪುಟಕ್ಕೆ

ನನಗೂ ಜೈಲಿಗೆ ಹೋಗಲು ತುಂಬಾ ಆಸೆ ಇತ್ತು...!

ಹೋರಾಟದ ದಿನಗಳನ್ನು ಮೆಲುಕು ಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ

- ಹೋರಾಟದಲ್ಲಿ ಜೈಲಿಗೆ ಹೋಗಲು ಸಿದ್ಧನಾಗಿದ್ದೆ
- ಆತಂಕ ಪಡದಂತೆ ಮನೆಯವರಿಗೂ ತಿಳಿಸಿದ್ದೆ
- ಕೆಲವೇಳೆ ಪೊಲೀಸರ ಕಣ್ತಪ್ಪಿಸಲು ಚಮತ್ಕಾರ

ಮೈಸೂರು, ನ.18(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಜೈಲಿಗೆ ಹೋಗಲು ತುಂಬಾ ಆಸೆ ಇತ್ತಂತೆ! ಸ್ವತಃ ಅವರೇ ಬಹಿರಂಗವಾಗಿ ಹೇಳಿಕೊಂಡಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಇಂದು ನಡೆದ ಪ.ಮಲ್ಲೇಶ್ ಅವರು ರಚಿಸಿರುವ 'ಬುದ್ಧ ನಾಗಾರ್ಜುನರ ಶೂನ್ಯಯಾನ' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ತಮ್ಮ ಹೋರಾಟದ ದಿನಗಳನ್ನು ಮೆಲುಕು ಹಾಕುತ್ತಾ ಈ ಮಾತು ಹೇಳಿದರು. ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ನಡೆಸಲು ಪ.ಮಲ್ಲೇಶ್, ಎ.ರಾಮಣ್ಣ, ವೇದಾಂತ ಹೆಮ್ಮಿಗೆ ನಾನು ಸೇರಿದಂತೆ ಇತರರು ಅಣಿಯಾಗಿದ್ದೆವು. ಈ ಬಾರಿ ಪ್ರತಿಭಟನೆ ಮಾಡಿದರೆ ಗ್ಯಾರಂಟಿ ಪೊಲೀಸರು ನಮ್ಮನ್ನು ಬಂಧಿಸುತ್ತಾರೆ ಎಂದು ಪ.ಮಲ್ಲೇಶ್ ಮೊದಲೇ ತಿಳಿಸಿದ್ದರು.

ಪ್ರತಿಭಟನೆ ಮಾಡುವಾಗ ಪೊಲೀಸರು ಜೈಲಿಗೆ ಕಳುಹಿಸಿದರೆ ಹೋಗಲು ನಾನು ಕೂಡ ಸಿದ್ಧನಾಗಿದ್ದೆ. ನಾನು ಆರು ತಿಂಗಳು ಜೈಲಿನಲ್ಲಿ ಇರುತ್ತೇನೆ. ನೀವು ಆತಂಕ ಪಡಬೇಡಿ ಎಂದು ಮನೆಯವರಿಗೆ



ಧೈರ್ಯ ಹೇಳಿ ವೀರಾವೇಶದಿಂದ ಬಂದಿದ್ದೆ.

ರಾಮಣ್ಣ, ವೇದಾಂತ ಹೆಮ್ಮಿಗೆ, ನಾನು ಸೇರಿದಂತೆ ಇತರರು ಕೆ.ಆರ್.ವೃತ್ತದಲ್ಲಿ ಪ್ರತಿಭಟನೆ ನಡೆಸುವಾಗ ಅಂದಿನ ದೇವರಾಜ ಠಾಣೆ ಇನ್‌ಸ್ಪೆಕ್ಟರ್ ಹಾಲಪ್ಪ ಸ್ಥಳಕ್ಕೆ ಬಂದರು. ಆದರೆ ಪ.ಮಲ್ಲೇಶ್ ಮತ್ತು ಇತರರು ಪೊಲೀಸರ ಕೈಗೆ ಸಿಕ್ಕದೆ ಬೋಟಿ ಬಜಾರ್ ಬಳಿ ಹೋಗಿ ಟೀ ಹೀರುತ್ತಾ ಕೂತರು. ಆ ವೇಳೆ ಕೈಗೆ ಸಿಕ್ಕ ನಮ್ಮನ್ನು ಪೊಲೀಸರು ವಶಕ್ಕೆ ಪಡೆದು, ಠಾಣೆಗೆ ಕರೆದೊಯ್ದರು. ಮೂವರನ್ನು ರಾತ್ರಿಯೆಲ್ಲಾ ಪೊಲೀಸ್ ಠಾಣೆಯಲ್ಲೇ ಕೂರಿಸಿದ್ದರು.

ಮಾರನೆ ದಿನ ಬೆಳಗ್ಗೆ ರಾಮಣ್ಣ ಹಾಗೂ ವೇದಾಂತ ಹೆಮ್ಮಿಗೆಯನ್ನು ಪೊಲೀಸರು ಜೈಲಿಗೆ ಕಳುಹಿಸಿದರು. ಆದರೆ ನನ್ನನ್ನು ಮಾತ್ರ ಬಿಡುಗಡೆ ಮಾಡಿ ಮನೆಗೆ ಹೋಗು ಅಂದರು. ಅಯ್ಯೋ, ನಾನು ಇವರ ಜೊತೆ ಜೈಲಿಗೆ ಹೋಗುತ್ತೇನೆ ಎಂದರೂ ಪೊಲೀಸರು ಒಪ್ಪದೇ ಸುಮ್ಮನೆ ಮನೆಗೆ ಹೋಗು ಎಂದರು. ಜೈಲಿಗೆ ಹೋಗಲು ತುಂಬಾ ಆಸೆ, ಉತ್ಸಾಹ ಇತ್ತು. ಆದರೆ ಪೊಲೀಸರು ಅಂದು ನನ್ನನ್ನು ಜೈಲಿಗೆ ಕಳುಹಿಸಲಿಲ್ಲ ಎಂದು ಸಿದ್ದರಾಮಯ್ಯ ಹಿಂದಿನ ಘಟನೆಯನ್ನು ಮೆಲುಕು ಹಾಕಿದರು. ಮತ್ತೊಂದು ●6ನೇ ಪುಟಕ್ಕೆ

ಬಿಜೆಪಿಯ ಬೆಳವಣಿಗೆಗಳ ಬಗ್ಗೆ ಕಾದು ನೋಡಿ

ಮೈಸೂರು, ನ.18(ಬಿಎಲ್‌ಯು) ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷರಾಗಿದ್ದಾರೆ, ಅಶೋಕ್ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಬಿಜೆಪಿಯಲ್ಲಿ ಇನ್ನು ಮುಂದೆ ಏನೇನು ಆಗುತ್ತೆ ಅಂತ ಸ್ವಲ್ಪ ದಿನ ಕಾದು ನೋಡಿ, ವೇಯ್ಟ್ ಅಂಡ್ ಸೀ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಮಿಕವಾಗಿ ನುಡಿದಿದ್ದಾರೆ.

ಅಶೋಕ್ ವಿರೋಧ ಪಕ್ಷದ ನಾಯಕನಾಗಿ ಘೋಷಣೆ ಮಾಡುವ ಸಭೆಯಿಂದ ಯತ್ನಾಳ್, ರಮೇಶ್ ಜಾರಕಿಹೊಳಿ, ಅರವಿಂದ್ ಬೆಲ್ಲದ್ ಯಾಕೆ ಎದ್ದು ಹೋದರು. ವಿಜಯೇಂದ್ರನನ್ನು ಬಿಜೆಪಿ ರಾಜ್ಯಾಧ್ಯಕ್ಷನನ್ನಾಗಿ ಹಾಗೂ ಅಶೋಕ್‌ನನ್ನು ವಿರೋಧ ಪಕ್ಷದ ನಾಯಕನನ್ನಾಗಿ ಮಾಡಿರುವುದು ಅವರಿಗೆ ಬೇಸರ ತರಿಸಿದೆ ಎಂದರು. ಸ್ವಲ್ಪ ದಿನ ಕಾದು ನೋಡಿ, ಬಿಜೆಪಿಯಲ್ಲಿ ಏನೇನು ಆಗುತ್ತೆ ಅಂತ ನಿಮಗೆ ಗೊತ್ತಾಗುತ್ತೆ ●6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ವೈದ್ಯರು : "ನಿಮ್ಮ ತೂಕ ಕಡಿಮೆಯಾಗಬೇಕಾದರೆ ಒಂದು ಹೊತ್ತಿನ ಊಟ ಬಿಡಬೇಕು"

ರೋಗಿ : "ಹಾಗಾದರೆ ನಾಳೆಯಿಂದ ಮೂರು ಸಲ ಮಾತ್ರ ಊಟ ಮಾಡ್ತೀನಿ"

ಮೈಸೂರು ಮಿತ್ರ

ಭಾನುವಾರ, 19 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಒಂದು ಕಾರ್ಯ ಸಾಧನೆಗೆ ಬಹುಜನ ಶ್ರಮಿಸಬೇಕಾಗುತ್ತದೆ. ಅದರ ಕೀರ್ತಿ ಮಾತ್ರ ಮುಖಂಡನೊಬ್ಬನಿಗೆ ಸಲ್ಲುತ್ತದೆ – ಭಗವಾನ್ ಬುದ್ಧ

ವೇದ ಸುಳ್ಳಾದರೂ { ಗಂಟು ಬಲವಾಯ್ತು,
ಗಾದೆ ಸುಳ್ಳಾಗದು { ನೆಂಟರು ಹೆಚ್ಚಿದರು

ನಿಮ್ಮ ಪತ್ರಗಳು

ಬೆಳಗುತ್ತಿವೆ ಪರಿಸರ ಸ್ನೇಹಿ ಎಲ್‌ಇಡಿ ವಿದ್ಯುತ್ ದೀಪಗಳು

ಮಾನ್ಯರೆ,



ಮೈಸೂರು ನಗರದಲ್ಲಿ ಪರಿಸರ ಸ್ನೇಹಿ ಎಲ್‌ಇಡಿ ವಿದ್ಯುತ್ ದೀಪಗಳನ್ನು ಅಳವಡಿಸುವ ವಿಷಯವಾಗಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ 14–11–2023 ರಂದು ಪ್ರಕಟವಾಗಿರುವ ವರದಿಯು ನಗರ ಪಾಲಿಕೆಯ ಕಾರ್ಯವನ್ನು ಶ್ಲಾಘಿಸುವಂತಹದ್ದು. ಈ ಯೋಜನೆಯ ನೋಡಲ್ ಅಧಿಕಾರಿ ಡಾ.ಸಾಯಿಶಂಕರ್ ಅವರನ್ನು ಹಾಗೂ ಅವರ ಕಾರ್ಯವೈಖರಿಯನ್ನು ಸಮೀಪದಿಂದ ಬಲ್ಲವನಾಗಿ ಸಾರ್ವಜನಿಕರಿಗೆ ತಿಳಿಯದ ಕೆಲವು ಸಂಗತಿಗಳನ್ನು ಹೇಳಲೇಬೇಕಿದೆ. ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಪಾಲಿಕೆಗೆ ಹೊರೆಯಾಗದಂತೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಎಲ್‌ಇಡಿ ದೀಪಗಳನ್ನು ಅಳವಡಿಸುವ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿ ಅನುಷ್ಠಾನಗೊಂಡಿರುವುದು ಮೈಸೂರು ಮಹಾನಗರ ಪಾಲಿಕೆಯೇ ಮೊದಲು!. ಸ್ಮಾರ್ಟ್ ಸಿಟಿ ಯೋಜನೆಯಡಿ ತುಮಕೂರು ಪಾಲಿಕೆ ಕೈಗೊಂಡಿದ್ದರೂ ಇನ್ನೂ ಪೂರ್ಣಗೊಂಡಿಲ್ಲ. ಇದರ ಜೊತೆಗೆ ಜಿಲ್ಲೆಯ ಎಂಟು ಪುರಸಭೆ, ನಗರಸಭೆಗಳ ವ್ಯಾಪ್ತಿಯ ಪಟ್ಟಣಗಳಲ್ಲಿಯೂ ಎಲ್‌ಇಡಿ ದೀಪಗಳನ್ನು ಅಳವಡಿಸುವ ಕಾಮಗಾರಿಗಳ ಪ್ರಕ್ರಿಯ ಚಾಲನೆಯಲ್ಲಿದೆ.

ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ದೀಪಗಳನ್ನು ಹೆಚ್ಚುವರಿಯಾಗಿ ಅಳವಡಿಸಲಾಗಿದ್ದರೂ ನಗರಪಾಲಿಕೆಗೆ ವಾರ್ಷಿಕ 14.80 ಕೋಟಿಯಷ್ಟು ಹಣ ಉಳಿತಾಯವಾಗುತ್ತಿರುವುದಲ್ಲದೆ ಶೇ.65–67ರಷ್ಟು ವಿದ್ಯುತ್ ಉಳಿತಾಯ ಆಗುತ್ತಿರುವುದು ಕೊರತೆ ಇರುವ ಈ ಸಂದರ್ಭದಲ್ಲಿ ಹಣಕ್ಕಿಂತಲೂ ಮಿಗಿಲಾದದ್ದು. ಕೇಂದ್ರೀಕೃತ ನಿಯಂತ್ರಣ ಕೊಠಡಿಯಿಂದ ದಿನದ ಇಪ್ಪತ್ತನಾಲ್ಕು ಗಂಟೆಗಳು ದೂರುಗಳನ್ನು ಸ್ವೀಕರಿಸಿ ಕ್ಷಣಾರ್ಧದಲ್ಲಿ ಬಗೆಹರಿಸುತ್ತಿದ್ದಾರೆ.

ಕೇಂದ್ರ ಸರ್ಕಾರದ ಆರ್ಥಿಕ ಇಲಾಖೆಯು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ)ದಲ್ಲಿ ಕೈಗೊಂಡ ಯೋಜನೆಗಳಲ್ಲಿ ಅತಿ ಹೆಚ್ಚು ವಿದ್ಯುತ್ ಉಳಿತಾಯ ಸಾಧಿಸಿರುವ ನಮ್ಮ ನಗರದ ಯೋಜನೆಯನ್ನು ಮಾದರಿಯಾಗಿ ತೆಗೆದುಕೊಂಡು ತಮ್ಮ ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಿರುವುದು ಮತ್ತೊಂದು ಹೆಗ್ಗಳಿಕೆ. ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಟೆಂಡರ್ ಕರೆದು ಕಾಮಗಾರಿ ಯಶಸ್ವಿಯಾಗಿ ಪೂರ್ಣಗೊಳಿಸುವವರೆಗೂ ಶ್ರಮಿಸಿದವರು ಹಲವರಿದ್ದರೂ ಮುಖ್ಯವಾಗಿ ವಿದ್ಯುತ್ ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದಿರುವ "ಶ್ರೀ ಸಾಯಿಶಂಕರ್" ಅವರು ಪ್ರಮುಖರು, ಯೋಜನೆಯ ಕುರಿತು ಅಪಾರ ಜ್ಞಾನ ಪಡೆದಿರುವ ಇವರು ಪಾಲಿಕೆಗೆ ಬಹುದೊಡ್ಡ ಆಸ್ತಿ.

ವಸ್ತುಪ್ರದರ್ಶನಕ್ಕೆ ಭೇಟಿ ನೀಡಿದರೆ ಯೋಜನೆಯ ಕುರಿತು ಸವಿಸ್ತಾರವಾದ ಮಾಹಿತಿಯುಳ್ಳ ಪ್ರದರ್ಶನವನ್ನು ನೋಡಿ ತಿಳಿದುಕೊಳ್ಳಬಹುದಾಗಿದೆ. ಒಟ್ಟಿನಲ್ಲಿ ನಮ್ಮ ಮೈಸೂರು ಮಹಾನಗರ ಪಾಲಿಕೆಯ ಈ ನಡೆ ಸಾರ್ವಜನಿಕರು ಮೆಚ್ಚುವಂತಹದ್ದು.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ನೀರು ಪೋಲಾಗುವುದನ್ನು ತಪ್ಪಿಸಿ




ಮಾನ್ಯರೆ,

ಕಾವೇರಿ ನೀರಿಗಾಗಿ ಹೋರಾಟ ದಿನನಿತ್ಯ ನಡೆಯುತ್ತಲೇ ಇದೆ. ಮಳೆ ಇಲ್ಲದೆ ಕುಡಿಯುವ ನೀರಿಗೆ ಸಮಸ್ಯೆಯಾಗಿದ್ದು, ಇಂತಹ ದುಸ್ಥಿತಿಯಲ್ಲಿ ಕುಡಿಯುವ ನೀರು ರಸ್ತೆಯಲ್ಲಿ ಹೊಳೆಯಂತೆ ಹರಿಯುತ್ತಿದೆ ಇದು ಮೈಸೂರು ನಗರದ ಪೊಲೀಸ್ ಕಮಿಷನರ್ ಮನೆಯ ಪಕ್ಕದ ರಸ್ತೆ. ಈ ಭಾಗದಲ್ಲಿ ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ–9 ಇದೆ. ಇದೇ ರಸ್ತೆಯು ಜ್ಯೋತಿನಗರ ಬಿ ಕಂಪನಿಗೆ ಸಂಪರ್ಕ ರಸ್ತೆಯಾಗಿದೆ. ಈ ರಸ್ತೆಯಲ್ಲಿ ಉದ್ದಕ್ಕೂ ನಾಲ್ಕು ಕಡೆ ನೀರು ಪೋಲಾಗುತ್ತಿದೆ. ಇದು ನಿನ್ನೆ ಮೊನ್ನೆಯ ಸಮಸ್ಯೆಯಲ್ಲ. ತಿಂಗಳಾನುಗಟ್ಟಲೆ ನೀರು ಪೋಲಾಗುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಈ ರಸ್ತೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ನಗರ ಪಾಲಿಕೆ ಅಧಿಕಾರಿಗಳು ಓಡಾಡುತ್ತಲೇ ಇರುತ್ತಾರೆ. ಆದರೂ ನಮ್ಮ ಅಧಿಕಾರಿಗಳು ಇದನ್ನು ನೋಡಿಯೂ, ಕಣ್ಣಿದ್ದೂ ಕುರುಡರಂತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇತ್ತ ಗಮನಹರಿಸಿ ನೀರು ಪೋಲಾಗುವುದನ್ನು ತಪ್ಪಿಸಬೇಕೆಂದು ಮನವಿ.

– ಮೈಕ್ ಪ್ರಕಾಶ್, ಮೈಸೂರು.

ಜಲ ಮಾಲಿನ್ಯ ತಪ್ಪಿಸಿ



ಮಾನ್ಯರೆ,

ಇಲ್ಲಿ ಹರಿಯುತ್ತಿರುವ ನೀರು ದೇವಲಾಪುರ ಗ್ರಾಮದ ಜೆಎಸ್‌ಎಸ್ ಪ್ರೌಢಶಾಲೆಯ ಪಕ್ಕದಲ್ಲಿರುವ ಅಡ್ಡಳ್ಳ ಹೆಸರಿನ ಮುಂದೆ ಕಪಿಲೆಗೆ ಸೇರುವ ಸಣ್ಣ ಕಿರು ತೊರೆ. ವರ್ಷದ ಏಳೆಂಟು ತಿಂಗಳ ಕಾಲ ಜನ ಜಾನುವಾರುಗಳಿಗೆ ನೀರು ಪೂರೈಸುತ್ತಿದ್ದ ಈ ಅಡ್ಡಳ್ಳ ಈಗ ವರ್ಷಪೂರ್ತಿ ಹರಿದರೂ ನೀರು ಉಪಯೋಗಿಸುವಂತಿಲ್ಲ. ಕಾರಣ ಮಲಿನ ಜಲ. ಹಡಜನ, ದೇವಲಾಪುರ, ಸೋಮೇಶ್ವರಪುರ, ಬಸಳ್ಳಿಹುಂಡಿ ಮುಂತಾದ ಅನೇಕ ಗ್ರಾಮಗಳಿಂದ ಕೊಳಚೆ ನೀರು ಅಡ್ಡಳ್ಳಕ್ಕೆ ಬಂದು ಸೇರುತ್ತಿದೆ. ದಯಮಾಡಿ ಜನಪ್ರತಿನಿಧಿಗಳು, ಗ್ರಾಮ ಪಂಚಾಯಿತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರು, ಅಧಿಕಾರಿಗಳು ಮತ್ತು ಗ್ರಾಮಸ್ಥರು ತಮ್ಮ ಊರಿನ ಕಲುಷಿತ ನೀರು ಅಡ್ಡಳ್ಳಕ್ಕೆ ಸೇರದಂತೆ ಕ್ರಮವಹಿಸಿ ಜಲ ಮಾಲಿನ್ಯ ನಿಯಂತ್ರಿಸಿ ಅಡ್ಡಳ್ಳ ಉಳಿಸಿ ಎಂದು ಪ್ರಾರ್ಥಿಸುತ್ತೇನೆ.

– ಜಗದೀಶ ಬಿ ಹೊಸೂರು, ಜೆಎಸ್‌ಎಸ್ ನಗರ, ಮೈಸೂರು.

ಸಕಾಲಿಕ



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

'ಸಾಮ್ರಾಟ್' ಅಶೋಕ್‌ಗೆ ಪಟ್ಟಾಭಿಷೇಕ; ಮತ್ತೊಮ್ಮೆ ಬಿಎಸ್‌ವೈ ಮೇಲುಗೈ



ಆರ್. ಅಶೋಕ್



ಬಿ.ಎಸ್. ಯಡಿಯೂರಪ್ಪ

ಬಿಜೆಪಿ ಮತ್ತು ಜೆಡಿಎಸ್ ಹೊಂದಾಣಿಕೆಯು ರಾಜ್ಯದಲ್ಲಿ ಪ್ರಮುಖ ಜಾತಿಗಳಾದ ಲಿಂಗಾಯಿತ, ಒಕ್ಕಲಿಗರ ಬಹು ವರ್ಷಗಳ ಕನಸು ನನಸಾದಂತಾಗಿದೆ. ರಾಜ್ಯದ ದಕ್ಷಿಣ ಭಾಗದಲ್ಲಿ ಒಕ್ಕಲಿಗರ ಸಾಮ್ರಾಜ್ಯ, ಉತ್ತರದಲ್ಲಿ ಲಿಂಗಾಯಿತರ ಪಾರುಪತ್ಯ ನೋಡಬೇಕು, ಈ ಬೇಸುಗೆಯ ಫಲಿತಾಂಶ. ಈ ರಾಜಕೀಯ ಬದಲಾವಣೆ, ಕಾಂಗ್ರೆಸ್ ಅನ್ನು ಬಡಿದೆಬ್ಬಿಸಿದಂತಾಗಿದೆ. ಉಳಿದೆಲ್ಲ ಜಾತಿ ಸಮುದಾಯಗಳು ಒಂದಾಗಿ ಕಾಂಗ್ರೆಸ್ ಜೊತೆ ನಿಂತರೂ ಆಶ್ಚರ್ಯವಿಲ್ಲ. ಹೀಗಾಗಿ ಈ ಸಾಲಿನ ಲೋಕಸಭಾ ಚುನಾವಣೆ ಸಮರದಂತಾಗಲಿದೆ.

ಅಂತೂ–ಇಂತೂ 6–7 ತಿಂಗಳ ನಂತರವಾದರೂ ಬಿಜೆಪಿ ವರಿಷ್ಠರು ಒಂದು ವಾರದ ಅಂತರದಲ್ಲಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಹಾಗೂ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿ ಆರ್.ಅಶೋಕ್ ಅವರನ್ನು ಆಯ್ಕೆ ಮಾಡುವ ಮೂಲಕ ಖಾಲಿಯಿದ್ದ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಸಫಲರಾಗಿದ್ದಾರೆ.

ಹೂತು ಹೋಗಿರುವ ಬಿಜೆಪಿ ರಥವನ್ನು ಸಮರ್ಥವಾಗಿ ಎಳೆಯುವುದು ಈ ಯುವ ಜೋಡಿಗಳಿಗೆ ಸವಾಲಾಗಿದೆ. ಶುಭ ಶುಕ್ರವಾರವೇ ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಒಮ್ಮತದಿಂದ ಆಯ್ಕೆಯಾದ ಮಾಜಿ ಡಿಸಿಎಂ ಅಶೋಕ್ ಬಿಜೆಪಿಯಲ್ಲಿ 'ಸಾಮ್ರಾಟ' ಇದ್ದಂತೆ.

ಈ ಯುವ ಜೋಡಿಯ ಆಯ್ಕೆ ಬಿಎಸ್‌ವೈ ಅವರ ಆಸೆಯಂತೆಯೇ ನಡೆದಿದೆ ಎಂಬುದರಲ್ಲಿ ಎರಡು ಮಾತಿಲ್ಲ. ವಿಜಯೇಂದ್ರ ಹಾಗೂ ಅಶೋಕ್, ಬಿಎಸ್‌ವೈ ಪಾಲಿಗೆ ಮಾತ್ರವಲ್ಲ ಪಕ್ಷಕ್ಕೆ ಎರಡು ಕಣ್ಣುಗಳಿದ್ದಂತೆ.

ಈಗ ಸಮಾಧಾನವಾಗಿ, ಶಾಂತಚಿತ್ತರಾಗಿ ಬಿಎಸ್‌ವೈ ಈ ಇಬ್ಬರ ಜತೆ ತಾವೂ ರಾಜ್ಯಾದ್ಯಂತ ಸುತ್ತಾಡಿ ಪಕ್ಷದ ಬಲವರ್ಧನೆ ಜೊತೆಗೆ ಲೋಕಸಭಾ ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನ ಗೆಲ್ಲುವ ನಂಬಿಕೆ ಹೊಂದಬಹುದು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ ವೇಳೆ ಬಿಎಸ್‌ವೈ ಅವರನ್ನು ನಿರ್ಲಕ್ಷಿಸುವ ಮೂಲಕ ರಾಜ್ಯದ ವಿಚಾರದಲ್ಲಿ ಕಡ್ಡಿ ಆಡಿಸಿದ್ದನ್ನು ಹೈಕಮಾಂಡ್ ತಿದ್ದಿಕೊಂಡಿದೆ. ಬಿಎಸ್‌ವೈ ಸಾಮರ್ಥ್ಯವೇನು ಎಂಬುದು ಮತ್ತದೇ ಹೈಕಮಾಂಡ್‌ಗೆ ಮನವರಿಕೆ ಆಗಿದೆ.

ಹೊಸ ಅಧ್ಯಕ್ಷ ಹಾಗೂ ನೂತನ ವಿಪಕ್ಷ ನಾಯಕರಾದ ವಿಜಯೇಂದ್ರ ಮತ್ತು ಅಶೋಕ್ ಜೋಡಿ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ರಾಜ್ಯದ ಮೂಲೆ ಮೂಲೆಯಲ್ಲೂ ಪ್ರವಾಸ ಮಾಡಿ ಪಕ್ಷವನ್ನು ಮತ್ತಷ್ಟು ಗಟ್ಟಿಗೊಳಿಸಬೇಕಾಗಿದೆ.

ಈಗ ಬಿಎಸ್‌ವೈ ಹೈಕಮಾಂಡ್ ವಿರುದ್ಧ ಚಕಾರ ಎತ್ತುವಂತಿಲ್ಲ. ತಮಗೆ ಬೇಕಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡು (ಹೈಕಮಾಂಡ್ ಸಮ್ಮತಿ ಪಡೆದು) ಬರುವ ಲೋಕಸಭಾ ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನ ಗೆಲ್ಲುವ ಹೊಣೆ ಹೊರಬೇಕು. ಜತೆಗೆ ತಮ್ಮ ಬಲಗೈ–ಎಡಗೈ ರೀತಿ ಇರುವ ಅಧ್ಯಕ್ಷ ಮತ್ತು ವಿಪಕ್ಷ ನಾಯಕನನ್ನು ಅವರ ಸಾಮರ್ಥ್ಯಕ್ಕೆ ತಕ್ಕಂತೆ ಬಳಸಿಕೊಂಡು ಶಕ್ತಿಪ್ರದರ್ಶನಕ್ಕೆ ಸಾಕ್ಷಿಯಾಗಬೇಕು.

ಇತ್ತ ಬಿಜೆಪಿ ಲೋಕಸಭಾ ಚುನಾವಣೆಯ ನೊಗ ಹೊರಲು ಇಬ್ಬರು ಸಾರಥಿಗಳನ್ನು ನೇಮಕ ಮಾಡಿದ್ದರೆ, ಅತ್ತ ಜೆಡಿಎಸ್, ಪಕ್ಷದ ಮಾಜಿ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರನ್ನು ಅಮಾನತು ಮಾಡಿ, ಅವರ ಬಾಯಿಗೆ ಬೀಗ ಹಾಕಿ, 'ಕೈ' ತೊಳೆದುಕೊಂಡಿದೆ. ಈ ರಾಜಕೀಯ ಬೆಳವಣಿಗೆಯಿಂದ ಬಿಜೆಪಿ ಮತ್ತು ಜೆಡಿಎಸ್‌ಗೆ ಅಲ್ಪಸಂಖ್ಯಾತರ ವೋಟ್ 'ತಿರುಪತಿ' ಆದಂತೆ. ಇಬ್ಬರ ಜಗಳದಲ್ಲಿ ಮೂರನೇಯವರಿಗೆ ಲಾಭ ಎಂಬಂತೆ ರಾಜ್ಯ ಕಾಂಗ್ರೆಸ್‌ಗೆ ಲಾಭವಂತೂ ಆಗಲಿದೆ. ಅಲ್ಪಸಂಖ್ಯಾತರು ಅನಿವಾರ್ಯವಾಗಿ ಕಾಂಗ್ರೆಸ್ ಬೆಂಬಲಿಸಬೇಕು. ಮತ್ತೆ ಸಿ.ಎಂ. ಇಬ್ರಾಹಿಂ ರಾಜಕೀಯವಾಗಿ 'ಅನಾಥ'ರಾಗಿ, ಮಾಡಿದುಣ್ಣೋ ಮಹರಾಯ ಎಂಬಂತಾಗಿದೆ ಈ ನಾಯಕನ ಅತಂತ್ರ ಸ್ಥಿತಿ.

'ಸಾಮ್ರಾಟ್' ಅಶೋಕ ಪಾಲಿಗೆ ವಿಪಕ್ಷ ನಾಯಕನ ಸ್ಥಾನ ಬಹುದೊಡ್ಡ ಹುದ್ದೆ. ಅದರಂತೆ ವಿಜಯೇಂದ್ರನಿಗೂ ನಿರೀಕ್ಷೆಗೂ ಮೀರಿದ ಅಧಿಕಾರ. ಅಶೋಕ ರಾಜ್ಯ ರಾಜಕೀಯಕ್ಕೆ ಹೊಸಬರೇನಲ್ಲ. ಮೊದಲು ಬೆಂಗಳೂರು ಉತ್ತರಹಳ್ಳಿ, ನಂತರ ಪದ್ಮನಾಭನಗರ ಕ್ಷೇತ್ರದಿಂದ ಸತತವಾಗಿ ಏಳು ಬಾರಿ ಜಯಭೇರಿ ಭಾರಿಸಿರುವ ಸೋಲಿಲ್ಲದ ಸರದಾರ.

ಆರ್‌ಎಸ್‌ಎಸ್ ಮೂಲದಿಂದ ಬಂದು, ಹಂತ ಹಂತವಾಗಿ ಬೆಳೆದು, ಬಿಜೆಪಿ ಸರ್ಕಾರದಲ್ಲಿ ಕೇವಲ ಮಂತ್ರಿಯಾಗಲ್ಲ, ಹತ್ತಾರು ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿ, ಸೈ ಎನಿಸಿಕೊಂಡು ಕೊನೆಗೆ ಡಿಸಿಎಂ ಪಟ್ಟಕ್ಕೇರಿದ ಕಟ್ಟಾಳು. ನೋಡಲು ಒರಟು ಸ್ವಭಾವದಂತೆ ಕಂಡರೂ ನಯ–ವಿನಯಕ್ಕೆ ಕೊರತೆ ಇಲ್ಲ. ಸಕ್ರಿಯ ರಾಜಕಾರಣಿಯಾಗಿ ಜನಮನ ಗೆದ್ದ ಕಿಲಾಡಿ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೈಕಮಾಂಡ್ ಆದೇಶದಂತೆ ಕನಕಪುರ ಹಾಗೂ ತಮ್ಮ ಕರ್ಮಭೂಮಿ ಪದ್ಮನಾಭನಗರ ಕ್ಷೇತ್ರ– ಎರಡೂ ಕಡೆ ಸ್ಪರ್ಧಿಸಿದ್ದರು. ಆದರೆ ಕರ್ಮಭೂಮಿಯಿಂದ ಕಾಲ್ತೆಗೆಯದೆ, ಕನಕಪುರಕ್ಕೆ ಕಾಲಿಡದೆ ಠೇವಣಿ ಕಳೆದುಕೊಳ್ಳುವಲ್ಲಿ ಯಶಸ್ವಿಯಾದ ಚಾಣಾಕ್ಷ. ಅತ್ತ ಹೈಕಮಾಂಡ್ ಆದೇಶ ಪಾಲಿಸಿದಂತೂ ಆಗಬೇಕು ಹಾಗೂ ಒಕ್ಕಲಿಗರ ಪ್ರಬಲ ನಾಯಕ ಹಾಗೂ ಡಿಸಿಎಂ ಎದುರು ಹಾಕಿ ಕೊಳ್ಳದೆ ಜಾಣ್ಮೆ ಪ್ರದರ್ಶಿಸಿದರು.

ಆದರೆ ಹೈಕಮಾಂಡ್ ಆದೇಶಕ್ಕೆ ಮಣೆ ಹಾಕಿ ಚಾಮರಾಜನಗರ, ಮೈಸೂರಿನ ವರುಣಾ ಕ್ಷೇತ್ರದಿಂದ ಸಿದ್ದರಾಮಯ್ಯನವರ ವಿರುದ್ಧ ಸ್ಪರ್ಧಿಸಿದ್ದ ಸೋಮಣ್ಣ ಸೋತು ಹೊರ ನಡೆದಂತಾಯಿತು. ಗೆಲ್ಲುವ ಚಿತ್ರಣವಿದ್ದ ಬೆಂಗಳೂರಿನ ಗೋವಿಂದರಾಜನಗರ ಕ್ಷೇತ್ರ ಬಿಟ್ಟದ್ದೇ ಅವರಿಗೆ ಮುಳುವಾಯಿತು.

ಹೈಕಮಾಂಡ್ ನಂಬಿದ್ದಕ್ಕೆ ವಿ. ಸೋಮಣ್ಣಗೆ ಬಹುಮಾನದ ಬದಲು ಅವಮಾನ ಮಾಡಿದೆ. ರಾಜ್ಯದಲ್ಲಿ ಬಿಎಸ್‌ವೈ ಬಿಟ್ಟರೆ ವಿ. ಸೋಮಣ್ಣ ಪ್ರಬಲ ಲಿಂಗಾಯತ ನಾಯಕನೆಂದು ವರಿಷ್ಠರಿಗೆ ಗೊತ್ತಿದ್ದೂ, ಈಗ ಅವರನ್ನು ಮೂಲೆ ಗುಂಪು ಮಾಡಿದ್ದು ಮಹಾಪರಾಧ.

ಇನ್ನೂ ಈ ಯುವ ಜೋಡಿಗೆ ಜೆಡಿಎಸ್ ಬೆಂಬಲ ಆನೆ ಬಲ ತಂದಿದೆ. ವಿಜಯೇಂದ್ರ, ಆರ್.ಅಶೋಕ್ ಜತೆಗೆ ಜೆಡಿಎಸ್ ಅಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಈ ತ್ರಿಮೂರ್ತಿಗಳ ರಾಜಕೀಯ ತಂತ್ರ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಚಮತ್ಕಾರ ಮಾಡಬೇಕಾಗಿದೆ. ರಾಜಕೀಯ ಪಿತಾಮಹ ಹೆಚ್.ಡಿ. ದೇವೇಗೌಡ ಮತ್ತು ಬಿಜೆಪಿಯ ಬೆನ್ನೆಲುಬು ಬಿಎಸ್‌ವೈ ಬಲ ಈ ತ್ರಿಮೂರ್ತಿ ಬೆನ್ನಿಗಿದೆ.

ಬಿಜೆಪಿ ಮತ್ತು ಜೆಡಿಎಸ್ ಹೊಂದಾಣಿಕೆಯು ರಾಜ್ಯದಲ್ಲಿ ಪ್ರಮುಖ ಜಾತಿಗಳಾದ ಲಿಂಗಾಯಿತ, ಒಕ್ಕಲಿಗರ ಬಹು ವರ್ಷಗಳ ಕನಸು ನನಸಾದಂತಾಗಿದೆ. ರಾಜ್ಯದ ದಕ್ಷಿಣ ಭಾಗದಲ್ಲಿ ಒಕ್ಕಲಿಗರ ಸಾಮ್ರಾಜ್ಯ, ಉತ್ತರದಲ್ಲಿ ಲಿಂಗಾಯಿತರ ಪಾರುಪತ್ಯ ನೋಡಬೇಕು, ಈ ಬೆಸುಗೆಯ ಫಲಿತಾಂಶ.

ಈ ರಾಜಕೀಯ ಬದಲಾವಣೆ, ಕಾಂಗ್ರೆಸ್ ಅನ್ನು ಬಡಿದೆಬ್ಬಿಸಿದಂತಾಗಿದೆ. ಉಳಿದೆಲ್ಲ ಜಾತಿ ಸಮುದಾಯಗಳು ಒಂದಾಗಿ ಕಾಂಗ್ರೆಸ್ ಜೊತೆ ನಿಂತರೂ ಆಶ್ಚರ್ಯವಿಲ್ಲ. ಹೀಗಾಗಿ ಈ ಸಾಲಿನ ಲೋಕಸಭಾ ಚುನಾವಣೆ ಸಮರದಂತಾಗಲಿದೆ.

ಅಲ್ಲಿಗೆ ಲಿಂಗಾಯಿತ ಮತ್ತು ಒಕ್ಕಲಿಗ, ಬಿಜೆಪಿ ಹಾಗೂ ಜೆಡಿಎಸ್, ಉಳಿದೆಲ್ಲಾ ಕೋಮುಗಳ ಮತದಾರರು ಕಾಂಗ್ರೆಸ್‌ಗೆ ಗುತ್ತಿಗೆ ಏನಲ್ಲ. ಆಯಾ ಪಕ್ಷಗಳ ಮತ ಬ್ಯಾಂಕ್ ಕೂಡ ಇದ್ದೇ ಇದೆ. ಕಾದು ನೋಡಬೇಕು ಮುಂದೇನು?

ಬಿಜೆಪಿ–ಜೆಡಿಎಸ್ ಹೊಂದಾಣಿಕೆಯಿಂದ ಎರಡೂ ಪಕ್ಷಗಳಿಗೆ ಲಾಭ–ನಷ್ಟ ಇದ್ದೇ ಇದೆ. ಏಕೆಂದರೆ ಬಿಜೆಪಿ ಶಾಸಕರ ಬಲ 66 ಹಾಗೂ ಜೆಡಿಎಸ್ ಶಾಸಕರ ಬಲ 19. ಆದರೂ ರಾಜಕೀಯ ತಂತ್ರಗಾರಿಕೆಯಲ್ಲಿ ಅಪ್ಪ–ಮಗ ನಿಸ್ಸೀಮರು (ದೊಡ್ಡಗೌಡರು + ಕುಮಾರಸ್ವಾಮಿ). ಏಕೆಂದರೆ ವಿಧಾನಸೌಧ, ವಿಕಾಸಸೌಧ ಹಾಗೂ ಇನ್ನೂ ಕೆಲವು ಇಲಾಖೆಗಳಲ್ಲಿ ಇವರ ಶಿಷ್ಯರೇ ಕೇಂದ್ರದ 'R' (ರಹಸ್ಯ ಮಾಹಿತಿ ಸಂಗ್ರಹ ಮಾಡುವ ಸಂಸ್ಥೆ) ತರ ಕೆಲಸ ಮಾಡುತ್ತಾರೆ. ಅಷ್ಟೇ ಏಕೆ ಕೆಎಎಸ್, ಐಎಎಸ್, ಐಪಿಎಸ್ ಅಧಿಕಾರಿಗಳೂ ಅಪ್ಪ–ಮಗನ ಪರಮಭಕ್ತರು.


ಏಕೆಂದರೆ ಮುಖ್ಯಮಂತ್ರಿ ಮಗ ಡಾ. ಯತೀಂದ್ರ ಮೈಸೂರು ಜಿಲ್ಲೆಯ ಹಳ್ಳಿಯೊಂದರಲ್ಲಿ ಮೊಬೈಲ್‌ನಲ್ಲಿ ಮಾತನಾಡಿದ ಗುಟ್ಟು ರಟ್ಟಾದದ್ದು ಹೇಗೆ? ಸಿಎಂ ಮತ್ತು ಡಿಸಿಎಂ ಸುತ್ತಲೂ "R" ಸಿಬ್ಬಂದಿ ಇದೆ. ಇದು ಸೇನೆಯ ಸಿಪಾಯಿಗಳಿದ್ದಂತೆ. ಅಂದರೆ ದೇಶಕ್ಕೆ ದೇಹ ತ್ಯಾಗ ಮಾಡುವವರಂತೆ ಈ ಸಿಬ್ಬಂದಿ ಗೌಡರ ಕುಟುಂಬದ ಋಣ ತೀರಿಸಲು ಏನೇ ತ್ಯಾಗಕ್ಕೂ ಸಿದ್ಧ. ಗೌಡರ ಕುಟುಂಬ ಅಧಿಕಾರದಲ್ಲಿದ್ದಾಗ ತಮ್ಮವರೇ ಆದ ಸಿಬ್ಬಂದಿಗೆ ರಕ್ಷಾ ಕವಚ ಆಗಿದ್ದರು ಎಂಬುದಕ್ಕೆ ಇವರ ನಿಯತ್ತೇ ಸಾಕ್ಷಿ.

ಈ ನಿಯತ್ತಿನ ಸಿಪಾಯಿ ವರ್ಗವೇ ಗೌಡರ ಕುಟುಂಬದ ದೊಡ್ಡ ಅಸ್ತ್ರ (ಆಸ್ತಿ). ಸರ್ಕಾರದ ಆಡಳಿತದ ಸಣ್ಣ ರಹಸ್ಯವೂ, ಕ್ಷಣಾರ್ಧದಲ್ಲಿ ಗೌಡರ ಕಿವಿಗೆ ಬೀಳುತ್ತದೆ. ಇದನ್ನು ಬ್ರಹ್ಮಾಸ್ತ್ರ ಮಾಡಿಕೊಂಡು ಆಡಳಿತ ಪಕ್ಷವನ್ನು ಅಲ್ಲಾಡಿಸುವುದೇ ಗೌಡರ ಗುರಿ. ಈಗ ಬಿಜೆಪಿ ಮತ್ತು ಜೆಡಿಎಸ್ ಒಂದಾಗಿವೆ. ಅಂದರೆ ಎರಡು ಕೈ ಸೇರಿದರೆ ಚಪ್ಪಾಳೆ ಎಂಬಂತೆ ಸರ್ಕಾರವನ್ನು ಕುಣಿಸಬಲ್ಲ ಶಕ್ತಿಯೂ ಈ ಹೊಂದಾಣಿಕೆಯಲ್ಲಿ ಅಡಗಿದೆ.

ರಾಜಕೀಯದಲ್ಲಿ ನ್ಯಾಯ–ನೀತಿ–ಧರ್ಮ ಎಲ್ಲಿದೆ? ಎಲ್ಲಾ ಅನುಕೂಲ ಸಿಂಧು ರಾಜಕಾರಣ. ಬಿಜೆಪಿಯ ರಮೇಶ್ ಜಾರಕಿಹೊಳಿ ಹಾಗೂ ಬಸನಗೌಡ ಪಾಟೀಲ್ ಯತ್ನಾಳ್ ಬಂಡಾಯಕ್ಕೆ ಬೆಲೆ ಎಲ್ಲಿದೆ? ಉತ್ತರ ಕರ್ನಾಟಕದ ಭಾಗಕ್ಕೆ ಅನ್ಯಾಯವಾಗಿದೆ ಎಂಬುದು ನಿಜ. ಆದರೆ ಕೇಳುವವರು ಯಾರು? ಅದರಂತೆ ಜೆಡಿಎಸ್‌ನಲ್ಲಿ ಸಿ.ಎಂ.ಇಬ್ರಾಹಿಂ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಮಾಜಿ ಅಧ್ಯಕ್ಷ, ಪಕ್ಷದ ಹಿರಿಯ ಮುಖಂಡ ಹೆಚ್.ಕೆ. ಕುಮಾರಸ್ವಾಮಿ ಅಧ್ಯಕ್ಷರಾಗಬೇಕಾಗಿತ್ತು. ಆದರೆ ದೂರದೃಷ್ಟಿಯ ದೊಡ್ಡಗೌಡರು ತಮ್ಮ ಮಗ ಕುಮಾರಸ್ವಾಮಿ ಅವರನ್ನೇ ಅಧ್ಯಕ್ಷ ಗಾದಿಗೇರಿಸಿದರು. ಇದು ವಾಸ್ತವಾಂಶ.

ಜನವರಿ 23ರಿಂದ ಅಯೋಧ್ಯೆ ರಾಮಮಂದಿರ ಸಾರ್ವಜನಿಕರಿಗೆ ಮುಕ್ತ

ದಿನಾಂಕ ಬಹಿರಂಗಪಡಿಸಿದ ಉಡುಪಿಯ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ



ಅಯೋಧ್ಯೆ,ನ.18–ಶ್ರೀರಾಮಮಂದಿರ ಉದ್ಘಾಟನೆಗೆ ಸಜ್ಜಾಗುತ್ತಿದೆ. ಜನವರಿ 22ರಂದು ಪ್ರಧಾನಿ ನರೇಂದ್ರ ಮೋದಿ ಭವ್ಯ ಶ್ರೀ ರಾಮಮಂದಿರ ಉದ್ಘಾಟನೆ ಮಾಡಲಿದ್ದಾರೆ.

ಜನವರಿ 18ರಿಂದಲೇ ಪೂಜಾ ಕೈಂಕರ್ಯಗಳು ಆರಂಭಗೊಳ್ಳಲಿದೆ. ಇದೀಗ ಅಂತಿಮ ಹಂತದ ಕಾಮಗಾರಿಗಳು ನಡೆಯುತ್ತಿದೆ. ಈಗಾಗಲೇ ನಿರ್ಮಾಣ ಹಂತದಲ್ಲಿ ದೀಪಾವಳಿ ಹಬ್ಬವನ್ನೂ ಆಚರಿಸಲಾಗಿದೆ. ಜನವರಿ 22 ರಂದು ರಾಮಮಂದಿರ ಉದ್ಘಾಟನೆಗೊಂಡರೆ, ಜನವರಿ 23ರಿಂದಲೇ ಸಾರ್ವಜನಿಕರ ದರ್ಶನಕ್ಕೆ ಮುಕ್ತವಾಗಲಿದೆ.

ಜ.22ರಂದು ಅಭಿಜಿನ್ ಮುಹೂರ್ತದಲ್ಲಿ ಶ್ರೀರಾಮನ ಪ್ರಾಣಪ್ರತಿಷ್ಠೆ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಶ್ರೀ ರಾಮಮಂದಿರ ಉದ್ಘಾಟನೆ ಮಾಡಲಿದ್ದಾರೆ. ಮೋದಿ ರಾಮಮಂದಿರ ಲೋಕಾರ್ಪಣೆಗೊಳಿಸಿದ ಮರು ದಿನದಿಂದಲೇ ಸಾರ್ವಜನಿಕ ದರ್ಶನಕ್ಕೆ ಮುಕ್ತವಾಗಲಿದೆ ಎಂದು ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದ್ದಾರೆ.



ಜ.22ರಿಂದ ಮಾರ್ಚ್ 10ರವರೆಗೆ ರಾಮಮಂದಿರದ ಬ್ರಹ್ಮಕಲಶೋತ್ಸವ ನಡೆಯಲಿದೆ. ಹೀಗಾಗಿ ಭಕ್ತರು ನೇರ ಪ್ರಸಾರದ ಮೂಲಕ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮ, ಪೂಜಾ ಕೈಂಕರ್ಯ ವೀಕ್ಷಿಸಬಹುದು. ಇದೇ ವೇಳೆ ಐದು ದೀಪಗಳನ್ನು ಪ್ರತಿ ಮನೆಯಲ್ಲಿ ಬೆಳಗುವ ಮೂಲಕ ಐದು ಶತಮಾನದ ಸಂಕೇತವಾಗಿ ದೀಪೋತ್ಸವ ಆಚರಿಸಬೇಕು ಎಂದು ಪೇಜಾವರಶ್ರೀ ಹೇಳಿದ್ದಾರೆ.

ಈಗಾಗಲೇ ಗಣ್ಯರು, ರಾಮ ಮಂದಿರದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡವರಿಗೆ, ಕುಟುಂಬದವರಿಗೆ ಆಹ್ವಾನ ನೀಡಲಾಗಿದೆ ಎಂದು ಸ್ವಾಮೀಜಿ ಹೇಳಿದ್ದಾರೆ. ಇಡೀ ದೇಶವೇ ಸಂಭ್ರಮದಿಂದ ಶ್ರೀ ರಾಮಮಂದಿರ ಉದ್ಘಾಟನೆಯಲ್ಲಿ ಪಾಲ್ಗೊಳ್ಳಲಿದೆ. ಪ್ರತಿ ಮನೆ, ದೇವಸ್ಥಾನಗಳಲ್ಲೂ ರಾಮಮಂದಿರ ಉದ್ಘಾಟನೆ ಪೂಜೆ, ಹಬ್ಬ ಮನೆ ಮಾಡಲಿದೆ ಎಂದು ಪೇಜಾವರ ಶ್ರೀ ಹೇಳಿದ್ದಾರೆ.

ನೀವು ಕುಮಾರಸ್ವಾಮಿ ಒಟ್ಟಾಗಿ ಕೆಲಸ ಮಾಡಿ ಅಂತಾ ಸಲಹೆ ನೀಡಿದ್ದಾರೆ

ದೇವೇಗೌಡರ ಭೇಟಿ ಬಳಿಕ ಆರ್.ಅಶೋಕ್ ಹೇಳಿಕೆ



ಬೆಂಗಳೂರು: ನೀವು ಕುಮಾರಸ್ವಾಮಿ ಒಟ್ಟಾಗಿ ಕೆಲಸ ಮಾಡಿ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಸಲಹೆ ನೀಡಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದ್ದಾರೆ.

ನಿನ್ನೆಯಷ್ಟೇ ಪ್ರತಿಪಕ್ಷ ನಾಯಕರಾಗಿ ಆಯ್ಕೆಯಾಗಿರುವ ಆರ್.ಅಶೋಕ್ ಇಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರನ್ನು ಪದ್ಮನಾಭನಗರದಲ್ಲಿರುವ ಅವರ ನಿವಾಸದಲ್ಲಿ ಭೇಟಿ ಮಾಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ, ಮಹದಾಯಿ ನದಿ ವಿಚಾರವಾಗಿ ದೇವೇಗೌಡರು ಸಲಹೆ ನೀಡಿದ್ದಾರೆ. ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ವಿರೋಧ ಪಕ್ಷದ ನಾಯಕನಾಗಿ ಆಯ್ಕೆಯಾಗಿದ್ದಕ್ಕೆ ಅಭಿನಂದನೆ ಸಲ್ಲಿಸಿದರು ಎಂದರು.

ನೀವು ಕುಮಾರಸ್ವಾಮಿ ಒಟ್ಟಾಗಿ ಕೆಲಸ ಮಾಡಿ. ಯಾವುದೇ ಸಮಯದಲ್ಲಿ ಸಹಾಯ, ಆಶೀರ್ವಾದ ಇರುತ್ತದೆ. 60 ವರ್ಷದ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ಸರ್ಕಾರ ನೋಡಿಲ್ಲ. ಮೋದಿಯವರಿಗೆ ಗೌರವ ತರುವ ನಿಟ್ಟಿನಲ್ಲಿ ಕೆಲಸ ಮಾಡಿ ಎಂದರು. ಅವರು ಸಹ ಲೋಕಸಭೆ ಚುನಾವಣೆಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದಾಗಿ ತಿಳಿಸಿದ್ದಾರೆ. ಒಟ್ಟಿಗೆ ಹೋಗಿ ದುರಾಡಳಿತ ಸರ್ಕಾರವನ್ನು ತೆಗೆದುಹಾಕಿ ಎಂದು ಸಲಹೆ ನೀಡಿರುವುದಾಗಿ ಆರ್. ಅಶೋಕ್ ತಿಳಿಸಿದ್ದಾರೆ.

ಬಸವರಾಜಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಸಿ.ಎನ್.ಮನು ಅವರ ಮಾರ್ಗದರ್ಶನದಲ್ಲಿ ಬಸವರಾಜ ಅವರು ರಾಜಕೀಯ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 19 ನವೆಂಬರ್ 2023

ವಸ್ತುಪ್ರದರ್ಶನ ಆವರಣದಲ್ಲಿ ಕೃಷಿ ಇಲಾಖೆ ಮಳಿಗೆ ಉದ್ಘಾಟನೆ



ಮೈಸೂರು,ನ.18(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಕೃಷಿ ಇಲಾಖೆ ಮಳಿಗೆಯನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಶನಿವಾರ ಉದ್ಘಾಟಿಸಿದರು. ಬಳಿಕ ಮಳಿಗೆ ವೀಕ್ಷಣೆ ಮಾಡಿದ ಸಚಿವರು, ಸಮಗ್ರ ಕೃಷಿ ಪದ್ಧತಿ, ಕೀಟ ನಾಶಕಗಳು ಹಾಗೂ ಸಿರಿ ಧಾನ್ಯಗಳು, ಚೆಕ್ ಡ್ಯಾಂ, ಕೃಷಿ ಹೊಂಡಾ, ಗೋಕಟ್ಟೆ, ಹೊಸ ಹೊಸ ಬೆಳೆಗಳ ಬಗ್ಗೆ ಹಾಗೂ ರಾಸಾಯನಿಕ, ಸಾವಯವ ಮತ್ತು ಜೈವಿಕ ಗೊಬ್ಬರದ ಬಳಕೆ ಕುರಿತು ರೈತರಿಗೆ ಉಪಯುಕ್ತ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಬಳಿಕ ಮಂಡ್ಯ ಜಿಲ್ಲೆಯ ಆಲೆಮನೆ ಸಂಘದ 'ಬೆಲ್ಲದ ಪರಿಷೆ'ಯನ್ನು ಉದ್ಘಾಟಿಸಿದರು. ಮಂಡ್ಯ ಶಾಸಕ ಪಿ.ರವಿಕುಮಾರ್, ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿ ಸಿದ್ದೇಗೌಡ ಸಚಿವರಿಗೆ ಸಾಥ್ ನೀಡಿದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ಉಪನಿರ್ದೇಶಕರಾದ ರಾಜು, ಧನಂಜಯ ಮತ್ತಿತರರಿದ್ದರು.

ಬಾಲ ಕಲಾವಿದರ ಕಲಾಕೃತಿ ಪ್ರದರ್ಶನಕ್ಕೆ ಆಹ್ವಾನ

ಮೈಸೂರು: ಕಾಫಿ ಸಿಟಿಯ ನೆರಳು ಬೆಳಕು ಗ್ಯಾಲರಿ ವತಿಯಿಂದ ಮಕ್ಕಳ ದಿನಾಚರಣೆ ಅಂಗವಾಗಿ ಬಾಲ ಕಲಾವಿದರು ತಮ್ಮ ಕಲಾಕೃತಿ ಸಲ್ಲಿಸಲು ಕರೆನೀಡಲಾಗಿದೆ. ಆಯ್ದ ಉತ್ತಮ ಕಲಾಕೃತಿಗಳನ್ನು ನೆರಳು–ಬೆಳಕು ಗ್ಯಾಲರಿಯಲ್ಲಿ ಪ್ರದರ್ಶನಕ್ಕಿಡಲಾಗುವುದು. ಕಲಾಕೃತಿಯನ್ನು ಸಲ್ಲಿಸಲು ಕೊನೇ ದಿನ ನ.25. ಪ್ರವೇಶ ಉಚಿತ. ಕೃತಿಗಳನ್ನು coffeecity.mysore@gmail.com or WhatsApp to 7022709561ಗೆ ಕಳಿಸುವುದು. ಆಯ್ಕೆಯಾದ ಮೂಲ ಚಿತ್ರವನ್ನು ಸಲ್ಲಿಸಲು ನಂತರ ತಿಳಿಸಲಾಗುವುದು. ಎಲ್ಲ ಕಲಾವಿದರಿಗೆ ಪ್ರಮಾಣ ಪತ್ರ ನೀಡಲಾಗುವುದು. 15 ವರ್ಷ ಕೆಳಗಿನ ಮಕ್ಕಳೂ ಭಾಗವಹಿಸಬಹುದು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ನ.18–ಎನ್.ಜೆ.ಎಸ್.ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಜೆಎಸ್‌ಎಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಜೆಎಸ್‌ಎಸ್ ಡೆಂಟಲ್ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ನಂಜನಗೂಡಿನ ಮಿಯರ್ ಆರ್ಗ್ಯಾನಿಕ್ಸ್ ಲಿಮಿಟೆಡ್, ಯೋಗ ಪ್ರಾಣ ಕೇಂದ್ರ ಹಾಗೂ ಡಾ.ಗೌರಿ ರಮೇಶ್ ಮೊಳೆರೋಗ ಆಸ್ಪತ್ರೆಯಲ್ಲಿ ನ.21 ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿಧನ




ಎಂ. ಪಂಕಜ

ಮೈಸೂರು, ನ.18– ಮೈಸೂರಿನ ಕುವೆಂಪು ನಗರ ನಿವಾಸಿ ಹಾಗೂ ದಿವಂಗತ ಚಂದ್ರಶೇಖರ್ ಅವರ ಪತ್ನಿ ಎಂ.ಪಂಕಜ (79) ನಿನ್ನೆ ನಿಧನರಾದರು. ಇವರು ಮಾಜಿ ಸಿಐಟಿಬಿ ಅಧ್ಯಕ್ಷ ಟಿ.ವೆಂಕಟ ರಾಮಯ್ಯ ಅವರ ಸೊಸೆ. ಪಂಕಜ ಅವರು ಇಬ್ಬರು ಪುತ್ರರು, ಓರ್ವ ಪುತ್ರಿ, ಅಪಾರ ಬಂಧು ವರ್ಗ, ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನ.19(ಭಾನುವಾರ) ಬೆಳಗ್ಗೆ 11 ಗಂಟೆಗೆ ಕೆಜಿಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜಯ್‌ರಾಜ್



ಮೈಸೂರಿನ ಬಂಡೀಕೇರಿಯ ಫೋಟೋ ಆಲ್ಬಂ ಸೆಂಟರ್ ಮಾಲೀಕರು ಹಾಗೂ ಹಳೇ ಬಂಡಿಕೇರಿ ನಿವಾಸಿ ವಿಜಯ್‌ರಾಜ್ (50) ನಿನ್ನೆ ಅಲ್ಪಕಾಲದ ಅಸ್ವಸ್ಥತೆ ನಂತರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ, ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇಂದು ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಲ್ಲಿ ಅಂತ್ಯಕ್ರಿಯೆ ನೆರವೇರಿತು.



Change of Name

I, Subramanya, residing at #13th Ward, 7th Road, K.R. Nagar Town, Mysore District-571602. I have changed my son name from **Vedhanth** to **Vedhanth Subramanya Jankar** vide affidavit Dt. 18-11-2023 sworn before Notary H.P. Mahadevappa, K.R. Nagar.

Change of Name

I, Subramanya, residing at #13th Ward, 7th Road, K.R. Nagar Town, Mysore District-571602. I have changed my son name from **Siddhant** to **Siddhant Subramanya Jankar** vide affidavit Dt. 18-11-2023 sworn before Notary H.P. Mahadevappa, K.R. Nagar.

Public Notice

My clients Mrs. Deepali Sachin Jadhav & others intends to purchase the property bearing No. 1085 New L 32 situated at Kurubageri, Main Road, Mysore (Lashkar Mohalla) Total property measuring 2580 Square Feet OUT OF WHICH NORTH WESTERN PORTION measuring (1086 3/4 Square Feet / 100.96 Square Meters) of property belongs to

1) M.V. Ananthapadmanabha,
2) V. Ramasanjeeva &
3) Suresh. V., all are children of Late M.P. Venkateshaiah & Late Nagamma.

If any one has having any kind of sale agreement or any right, title, interest, objection or claim in the said property, he / she is hereby called upon to lodge his / her right, title, interest, claim or objection with legal documentary support, within 15 Fifteen days from this date.

If ano one comes with any such claim, my clients will proceed to transact the same in their favour and thereafter no claim or objection whatsoever will be entertained.

Sd/- Rajendra Kumar K.M., Advocate & Notary (Govt. of India), #2843/1, 2nd Main Road, 5th Cross Road, R.B. Complex, Jayanagar, Mysuru-570014. Mob: 9008938598

Notice to Respondent to Showcause (SCR, Order XXII)

IN THE SUPREME COURT OF INDIA
CRIMINAL APPELLATE JURISDICTION
Petition for Special Leave Petition (Criminal) No. 4141 / 2022 with
I.A.No. 66293/2022 - APPLICATION FOR EXEMPTION FROM FILING O.T.

M. NATARAJ .... Petitioner (s)
Versus
S.K. KANTHARAJU .... Respondent (s)

To,
1. Mr. S.K. Kantharaju, S/o Krishnappa, D.No. 2769, 1st Cross, 4th C Main Road F Block, Dattagalli 3rd Stage, Mysore-570 001, Karnataka

PID : 187163 / 2023 for R(1)IN
SLP(CRL) No. 4141/2022 (Sec II-C)

Whereas the Petition for Special Leave Petition (Criminal) above mentioned (copy enclosed) filed in the registry by Mr. Ashok Bannidinni, advocate on records, on behalf of the petitioner (s) above named, was listed for hearing before the court on 17th May, 2022 and the court was pleased to pass the following order:

"1) Heard Learned Counsel appearing for the petitioner and perused the material placed on record.
2) Issue Notice."

AND Whereas, the service of show cause notice could not be effected on unserved sole respondent and the matter above mentioned was lsited before Hon'ble Court (In chambers) on 14th September 2023, when the following orders was passed:-

I.A.Nos.50352 and 57960 of 2023
Delay Condemned.
I.A. Seeking permission for substituted service is allowed"

NOW, THEREFORE, TAKE NOTICE that the above matters will be posted for hearing before the court in due course when you may appear before this hon'ble court either in person or through an advocate on record of this court duly appointed by you in that behalf within thirty days from the date of service of notice. You may thereafter show cause to the court on the day that may subsequently be specified as to why special leave and interim relief, as prayed for, be not granted and the resultant appeal be not allowed.

You may file your affidavit in opposition to the petition as provided under Rule VI of Order XXII SCR 2013, within thirty days from the date of receipt of notice or not later than two weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SPECIAL LEAVE PETITION (CRIMINAL) and may produce such pleadings and documents filed before the Court against, whose order the SPECIAL LEAVE PETITION (CRIMINAL) is filed and shall also set out the grounds for not granting interim order or for vacating interim order if already granted.

TAKE FURTHER NOTICE that if you fail to enter appearance, as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Date: 20th September 2023.

Sd/- ASSISTANT REGISTRAR

Copy to:-
Mr. Ashok Bannidinni (Adv).
Chamber No.219, New Lawyers Chamber, Supreme Court of India, New Delhi-110001 New Delhi, Delhi
Sd/- L SHASHIDHARA, B.Sc., LL.B. (Spl.), Advocate, Enroll No. KAR 11/1978, "Shreyas", 100, 7th Main Road, Paduvarahally, Mysuru-570 012. Mob: 9483228606

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಮೈಸೂರು ವಿಭಾಗ: ಮೈಸೂರು

ಸಂ: ಕರಾಸಾ/ಮೈವಿ/ಸಂ/ವಾ/3012/3013/2023–24 ದಿನಾಂಕ: 17.11.2023

ಇ–ಟೆಂಡರ್/ಮ್ಯಾನ್ಯುಲ್ ಟೆಂಡರ್ ಸಂ: 04/2023–24
(ಇ–ಟೆಂಡರ್ ಇ–ಪ್ರಕ್ಯೂರೆಂಟ್ ಮೂಲಕ ಮಾತ್ರ)

ಕ.ರಾ.ರ.ಸಾ.ನಿಗಮ ಮೈಸೂರು ವಿಭಾಗಕ್ಕೆ ಸೇರಿದ ಮೈಸೂರುನಗರ ಬಸ್‌ನಿಲ್ದಾಣ, ಬೆಟ್ಟದಪುರ ಬಸ್ ನಿಲ್ದಾಣ, ಪಿರಿಯಾಪಟ್ಟಣ ಬಸ್ ನಿಲ್ದಾಣ, ಮಿರ್ಲೆ ಬಸ್ ನಿಲ್ದಾಣ ಹಾಗೂ ರಾವಂದೂರು ಬಸ್‌ನಿಲ್ದಾಣಗಳಲ್ಲಿ ಖಾಲಿಯಿರುವ, ಮುಂದೆ ಖಾಲಿಯಾಗುವ ಉಪಹಾರಗೃಹ, ಜನರಲ್–ಮಳಿಗೆ, ಕೊಠಡಿಗಳು, ಮುಂತಾದ ವಾಣಿಜ್ಯ ಸ್ಥಳಗಳಿಗೆ ಪರವಾನಗಿದಾರರ ಆಯ್ಕೆಗಾಗಿ ಇ–ಟೆಂಡರ್ ಮತ್ತು ಮ್ಯಾನ್ಯುಲ್ ಟೆಂಡರ್‌ಗಳನ್ನು ಹೊರಡಿಸಲಾಗಿದೆ.

1) ಇ–ಟೆಂಡರ್:– ಡಿಜಿಟಲ್–ಕೀ ಹೊಂದಿರುವ ಆಸಕ್ತರು ಮಾತ್ರ ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. **ದಿನಾಂಕ 20.11.2023** ರಿಂದ **28.11.2023, 15:00 ಗಂಟೆ**ವರೆಗೆ ಇ–ಟೆಂಡರ್ ದಾಸ್ತಾವೇಜುಗಳನ್ನು ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ–ಟೆಂಡರನ್ನು **ದಿನಾಂಕ 01.12.2023, 16.00 ಗಂಟೆ**ಗೆ ತೆರೆಯಲು ನಿಗದಿಗೊಳಿಸಲಾಗಿದೆ. (ತಾಂತ್ರಿಕ ತೊಂದರೆ ಇಲ್ಲದೆ ಇದ್ದಲ್ಲಿ)

2) ಮ್ಯಾನ್ಯುಲ್ ಟೆಂಡರ್:– ಮ್ಯಾನ್ಯುಲ್ ಟೆಂಡರ್ ಅರ್ಜಿಗಳನ್ನು **ದಿನಾಂಕ 20.11.2023** ರಿಂದ **29.11.2023 12:00 ಗಂಟೆ**ವರೆಗೆ ವಿಭಾಗೀಯ ಕಚೇರಿಯಲ್ಲಿ ನೀಡಲಾಗುತ್ತದೆ. **ದಿನಾಂಕ 01.12.2023 12:00 ಗಂಟೆ**ವರೆಗೆ ಭರ್ತಿಗೊಳಿಸಿದ ಅರ್ಜಿಗಳನ್ನು ಟೆಂಡರ್ ಪೆಟ್ಟಿಗೆಗೆ ಹಾಕುವುದು ಹಾಗೂ ಮ್ಯಾನ್ಯುಲ್ ಟೆಂಡರನ್ನು ಅಂದೇ **ದಿನಾಂಕ 01–12–2023** ರಂದು **15:00 ಗಂಟೆ**ಗೆ ನಡೆಸಲಾಗುತ್ತದೆ.

ಇ–ಟೆಂಡರ್/ಮ್ಯಾನ್ಯುಲ್ ಟೆಂಡರ್‌ಗೆ ಗೊತ್ತುಪಡಿಸಿರುವ ವಾಣಿಜ್ಯ ಮಳಿಗೆಗಳಿಗೆ ಭಾಗವಹಿಸಲು ಉದ್ದೇಶಿಸಿರುವ ಆಸಕ್ತರು ವಿಭಾಗೀಯ ಕಛೇರಿಯಿಂದ ಅರ್ಜಿಯನ್ನು ಪಡೆದು ಈ ಕೆಳಗೆ ಸಹಿ ಮಾಡಿರುವವರ ಪದನಾಮಕ್ಕೆ ಇ.ಎಂ.ಡಿ ಮೊತ್ತವನ್ನು ಡಿ.ಡಿ ಮುಖೇನ ಸಲ್ಲಿಸುವುದು ಜೊತೆಗೆ ವಿಳಾಸ ದೃಢೀಕರಣ ಪತ್ರ ಹಾಗೂ ಮೊಬೈಲ್ ಸಂಖ್ಯೆಯನ್ನು ನೀಡಿ ಭಾಗವಹಿಸಬಹುದಾಗಿದೆ. ಅರ್ಜಿ ಪಡೆಯುವ ವಿಚಾರವಾಗಿ, ಹಾಗೂ ಇತರೆ ವಿಚಾರವಾಗಿ ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಛೇರಿ, ಕರಾರಸಾಸಂ, ಮೈಸೂರು ವಿಭಾಗ ಹನುಮಂತನಗರ, ಮೈಸೂರು ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸ.ಸಂ.ವ್ಯರ ದೂ.ಸಂ:–7760990811, ಹಾಗೂ ವಿಷಯ ನಿರ್ವಾಹಕರ ದೂ. ಸಂ: 9740661585/9980763758 ಗಳನ್ನು ಸಂಪರ್ಕಿಸಬಹುದು.

ಸಹಿ/–,
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ, ಮೈಸೂರು ವಿಭಾಗ

ವಾಸಾಸಂಇ/ವಾಪ್ರ/ಎಲ್‌ಸಿ/2166/2023–24

ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕಾರ್ಯಯೋಜನೆ,

ಅರಣ್ಯ ಭವನ, ಅಶೋಕಪುರಂ, ಮೈಸೂರು–570008.
ದೂ.ಸಂ. : 0821–2483917 ಇ–ಮೇಲ್ : cfwpmys@gmail.com
ಸಂಖ್ಯೆ: ಎ2/ಬಿಯುಡಿ/ಇ–ಟೆಂಡರ್/ಸಿಆರ್–7/2023–24 ದಿ: 17.11.2023

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ–09/2023–24
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) (e-procurement)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರ್ಯಯೋಜನೆ, ಮೈಸೂರು ರವರು 2023–24ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಮೋಜಣಿ ಮತ್ತು ಆರ್‌ಸಿಸಿ ಪಿಲ್ಲರ್‌ಗಳನ್ನು ಅಳವಡಿಸುವ ಕೆಲಸಗಳಿಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿತ್ತು. ಆದರೆ ಅಲ್ಪಾವಧಿ ಮರು ಇ–ಟೆಂಡರ್‌ನಲ್ಲಿ ಎರಡನೇ ಬಾರಿ ಪರಿಶಿಷ್ಟ ಜಾತಿಯ ಒಬ್ಬರೇ ಗುತ್ತಿಗೆದಾರರು ಭಾಗವಹಿಸಿ ತಿರಸ್ಕೃತಗೊಂಡಿದ್ದರಿಂದ ಹಾಗೂ ಎರಡನೇ ಬಾರಿಯೂ ಪರಿಶಿಷ್ಟ ಪಂಗಡದ ಒಬ್ಬರೇ ಗುತ್ತಿಗೆದಾರರು ಭಾಗವಹಿಸಿ ತಿರಸ್ಕೃತಗೊಂಡಿದ್ದರಿಂದ ಅರ್ಹ ನೊಂದಾಯಿತ ಗುತ್ತಿಗೆದಾರರು ಟೆಂಡರ್‌ನ್ನು ಸಲ್ಲಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಟೆಂಡರ್ ಫಾರಂಗಳನ್ನು ವೆಬ್‌ಸೈಟ್ www.kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ದಿ: 27.11.2023ರ ಅಪರಾಹ್ನ 04.00 ಗಂಟೆಯವರೆಗೆ ಟೆಂಡರ್ ಅನ್ನು ಸಲ್ಲಿಸಬಹುದು. ತಾಂತ್ರಿಕ ಬಿಡ್ ಅನ್ನು ದಿ: 28.11.2023 ರಂದು ಅಪರಾಹ್ನ 04.00 ಗಂಟೆಗೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್ ಅನ್ನು ದಿ: 29.11.2023 ರಂದು ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು. ಇ.ಎಂ.ಡಿ ಹಣವನ್ನು ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಆನ್‌ಲೈನ್‌ನಲ್ಲಿಯೇ ಸಂಬಂಧಿಸಿದ ಬ್ಯಾಂಕ್‌ನಲ್ಲಿ ಪಾವತಿಸಬೇಕಾಗುತ್ತದೆ. ಇನ್ನುಳಿದ ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ, ಕಛೇರಿ ವೇಳೆಯಲ್ಲಿ ಪಡೆಯಬಹುದು. ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯಯೋಜನೆ, ಮೈಸೂರು.

DIPR/DDMYS/KSMCA/644/2023-24

ಮೈಸೂರು ಮಿತ್ರ

ಭಾನುವಾರ 19 ನವೆಂಬರ್ 2023

ಕುಂದುಕೊರತೆ ಅರ್ಜಿಯನ್ನು 15 ದಿನದೊಳಗಾಗಿ ವಿಲೇವಾರಿ ಮಾಡಿ

ಅಧಿಕಾರಿಗಳಿಗೆ ಸಚಿವ ಚಲುವರಾಯಸ್ವಾಮಿ ತಾಕೀತು



ಮದ್ದೂರು,ನ.18– ಜನತಾ ದರ್ಶನದಲ್ಲಿ ಸ್ವೀಕೃತವಾಗುವ ಕುಂದು ಕೊರತೆ ಅರ್ಜಿಯನ್ನು 15 ದಿನದೊಳಗಾಗಿ ವಿಲೇವಾರಿ ಮಾಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ತಾಲೂಕಿನ ಕೊಪ್ಪ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದ್ದ ಜನತಾ ದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಂದಾಯ ಇಲಾಖೆಯ ವಿ.ಎ ಹಾಗೂ ಆರ್.ಐಗಳು ಕೇಂದ್ರ ಸ್ಥಾನದಲ್ಲಿದ್ದು, ಸಾರ್ವಜನಿಕರಿಗೆ ಸ್ಪಂದಿಸಿ ಕಾರ್ಯ ನಿರ್ವಹಿಸಬೇಕು. ಸಾರ್ವಜನಿಕರು ತಮ್ಮ ಕುಂದುಕೊರತೆಗೆ ಸಂಬಂಧಿಸಿದಂತೆ ತಮ್ಮ ವ್ಯಾಪ್ತಿಯ ಅಧಿಕಾರಿಗಳನ್ನು ಸಂಪರ್ಕಿಸಿ. ಕೆಲಸವಾಗದೇ ಇದ್ದ ಸಂದರ್ಭದಲ್ಲಿ ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳನ್ನು ಸಂಪರ್ಕಿಸಿ. ಈ ಹಂತದಲ್ಲೂ ಕೆಲಸವಾಗದಿದ್ದಲ್ಲಿ ನನ್ನ ಕಚೇರಿಯನ್ನು ಸಂಪರ್ಕಿಸಿ ಎಂದರು.

ಕೊಪ್ಪ ಭಾಗದ ಜನರು ಆಧಾರ್ ತಿದ್ದುಪಡಿ ಹಾಗೂ ನೋಂದಣಿಗಾಗಿ ಜಿಲ್ಲಾ ಕೇಂದ್ರಕ್ಕೆ ತೆರಳಬೇಕಿತ್ತು ಇದನ್ನು ತಪ್ಪಿಸಲು ಕೊಪ್ಪದಲ್ಲಿ ಹೊಸ ಆಧಾರ್ ಕೇಂದ್ರವನ್ನು ತೆರೆಯಲಾಗಿದೆ. ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಕೊಪ್ಪ ಹೋಬಳಿಯಲ್ಲಿ ಪೌತಿ ಖಾತೆ ಆಂದೋಲನ ಯೋಜನೆ ಸಂಬಂಧ ಮೃತರ ಪಟ್ಟಿಯೊಂದಿಗೆ ಮನೆ ಮನೆಗೆ ಭೇಟಿ ನೀಡಿ ವಾರಸುದಾರರಿಂದ 658 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಇವರಿಗೆ ಪೌತಿ ಖಾತೆ ಮಾಡಿಕೊಡಲಾಗುವುದು.

ಬೆಳೆ ವಿಮೆ ಯೋಜನೆಯಡಿ 53,000 ರೈತರ ಹೆಸರು ನೋಂದಾಯಿಸಿದ್ದು, ಸರ್ಕಾರ 1500 ಕೋಟಿ ಹಾಗೂ ರೈತರು 50 ಕೋಟಿ ವಿಮೆ ಕಂಪನಿಗೆ ಪಾವತಿಸಿದೆ. ಮಳೆ ಕೊರತೆ ಹಿನ್ನೆಲೆಯಲ್ಲಿ ಬಿತ್ತನೆ ಮಾಡಿ ಬೆಳೆ ನಾಶವಾಗಿದ್ದು, ಪ್ರತಿ ಎಕರೆಗೆ 9,438 ರೂ.ಗಳಂತೆ ಮದ್ದೂರು ತಾಲೂಕಿನಲ್ಲಿ 103 ಲಕ್ಷ ಹಾಗೂ ರಾಜ್ಯಾದ್ಯಂತ 230 ಕೋಟಿ ರೂ.ಗಳನ್ನು ಪಾವತಿಸಿದೆ ಎಂದು ತಿಳಿಸಿದರು.

ಸಾಮಾಜಿಕ ಭದ್ರತಾ ಯೋಜನೆ ಅಡಿ 100 ಫಲಾನುಭವಿಗಳಿಗೆ ಪಿಂಚಣಿ ಮಾಸಾಸನ ವಿತರಣೆ ಮಾಡಲಾಯಿತು ಹಾಗೂ 11 ಇ ಮತ್ತು ಆರ್.ಆರ್.ಟಿ 180 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದರು. ಇತರೆ ಇಲಾಖೆಗಳಿಂದ ಒಟ್ಟು 119 ಫಲಾನುಭವಿಗಳಿಗೆ ಸರ್ಕಾರದ ವಿವಿಧ ಸವಲತ್ತುಗಳನ್ನು ವಿತರಣೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ಗ್ರಾಪಂ ಅಧ್ಯಕ್ಷ ನವೀನ್, ಮಂಡ್ಯ ಉಪವಿಭಾಗಾಧಿಕಾರಿ ಶಿವಮೂರ್ತಿ, ತಹಶೀಲ್ದಾರ್ ನರಸಿಂಹಮೂರ್ತಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೆ.ಆನಂದ್‌ಕುಮಾರ್, ಜಂಟಿ ಕೃಷಿ ನಿರ್ದೇಶಕ ಅಶೋಕ್, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಸಿದ್ದಲಿಂಗೇಶ್ ಸೇರಿದಂತೆ ಇನ್ನಿತರರಿದ್ದರು.

ನೋಡಲ್ ಅಧಿಕಾರಿ ಗೈರಿನಲ್ಲಿ ನಡೆದ ಗ್ರಾಮಸಭೆ

ಗ್ರಾಪಂ ಸದಸ್ಯರು, ಸಾರ್ವಜನಿಕರ ಆಕ್ಷೇಪ



ಶ್ರೀರಂಗಪಟ್ಟಣ, ನ.18– ನೋಡಲ್ ಅಧಿಕಾರಿ ಗೈರು ಹಾಜರಿಯಲ್ಲಿ ನಡೆದ ತಾಲೂಕಿನ ಹುಲಿಕೆರೆ ಗ್ರಾಮ ಪಂಚಾಯಿತಿ 2023–24ನೇ ಸಾಲಿನ ಗ್ರಾಮ ಸಭೆಗೆ ಗ್ರಾ.ಪಂ ಸದಸ್ಯರು ಮತ್ತು ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನ.18ರ ಶನಿವಾರ 2023–24ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ ಯೋಜನೆ ಕಾಮಗಾರಿ ಆಯ್ಕೆ ಮತ್ತು ವಿವಿಧ ಇಲಾಖೆ ಸವಲತ್ತುಗಳ ಮಾಹಿತಿ ನೀಡುವ ಕುರಿತು ಗ್ರಾ.ಪಂ ಕಚೇರಿಯ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದ್ದ ಸಭೆಗೆ ಸಾರ್ವಜನಿಕರು ಬಾರದ ಹಿನ್ನಲೆಯಲ್ಲಿ ಕೇವಲ ಗ್ರಾ.ಪಂ ಸಿಬ್ಬಂದಿ ಮತ್ತು ಅಂಗನವಾಡಿ, ಆಶಾ ಕಾರ್ಯಕರ್ತೆಯರು ಮಾತ್ರ ಭಾಗವಹಿಸಿದ್ದರಿಂದ ಪಿಡಿಒ ನಟೇಶ್ ಗ್ರಾ.ಪಂ ಹಿಂಭಾಗದ ಸಭಾಂಗಣಕ್ಕೆ ಸಭೆಯನ್ನು ಸ್ಥಳಾಂತರ ಮಾಡಿ ಪ್ರಾರಂಭಿಸಿದ್ದರು.

ನೋಡಲ್ ಅಧಿಕಾರಿಯಾಗಿದ್ದ ಡಾ|| ಸುರೇಶ್ ಗೈರು ಹಾಜರಿ ಮತ್ತು ಮಾಹಿತಿ ನೀಡಬೇಕಾಗಿದ್ದ ಹಲವು ಇಲಾಖೆ ಅಧಿಕಾರಿಗಳು ಬಾರದಿರುವುದು ಹಾಗೂ ಕರಪತ್ರದಲ್ಲಿ ಕೇವಲ ಗ್ರಾ.ಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸಿಬ್ಬಂದಿಗಳ ಸಹಕಾರ ಎಂದು ನಮೂದಿಸಿ, ಗ್ರಾ.ಪಂ ಸದಸ್ಯರುಗಳ ಸಹಕಾರದ ಬಗ್ಗೆ ನಮೂದಿಸದಿರುವುದನ್ನು ಗಮನಿಸಿದ ಗ್ರಾ.ಪಂ ಸದಸ್ಯ ಬಂಗಾರಪ್ಪ ಖಂಡಿಸಿ ಗ್ರಾಮ ಸಭೆ ನಡೆಸುವುದನ್ನು ವಿರೋಧಿಸಿದರು.

ಸಭೆಯಲ್ಲಿದ್ದ ಮಜ್ಜಿಗೆಪುರ ಗ್ರಾಮದ ನಿವಾಸಿ ಭರತ್, ಗ್ರಾಮಸಭೆಯನ್ನು ನಿಗದಿತ ಸ್ಥಳದಲ್ಲಿ ನಡೆಸದೆ ಒಳಾಂಗಣದಲ್ಲಿ ಕೇವಲ ಗ್ರಾಪಂ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರ ಸಮ್ಮುಖದಲ್ಲಿ ನಡೆಸುವುದು ಎಷ್ಟು ಸರಿ?. ನೋಡಲ್ ಅಧಿಕಾರಿ ಗೈರು ಹಾಜರಾಗಿದ್ದು, ಯಾರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿದ್ದೀರಿ ಎಂದು ಪಿ.ಡಿ.ಒ ನಟೇಶ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಸಭೆ ಮುಂದೂಡುವಂತೆ ಆಗ್ರಹಿಸಿದರು.

ನಂತರ ಪಿಡಿಒ ನಟೇಶ್ ಮಧ್ಯ ಪ್ರವೇಶಿಸಿ, ಗ್ರಾಮ ಸಭೆ ಮುಂದೂಡಲು ಆಗುವುದಿಲ್ಲ, ಅಧ್ಯಕ್ಷರು ಉಪಸ್ಥಿತರಿದ್ದಾರೆ. ಜೊತೆಗೆ ಈ ಸಭೆ ಬಗ್ಗೆ ಸಾರ್ವಜನಿಕರಿಗೆ ಮುಂಚಿತವಾಗಿ ಮಾಹಿತಿ ನೀಡಿದ್ದೇವೆ, ಸಾರ್ವಜನಿಕರು ಕಡಿಮೆ ಇದ್ದ ಕಾರಣ ಒಳ ಸಭೆಯನ್ನು ಸಭಾಂಗಣಕ್ಕೆ ಸ್ಥಳಾಂತರ ಮಾಡಿದ್ದೇವೆ. ಕಾನೂನಿನ ಚೌಕಟ್ಟಿನಡಿ ಸಭೆ ಮುಂದುವರೆಸುತ್ತೇವೆ ಎಂದರು.

ಈ ಸಂಬಂಧ ಗ್ರಾಪಂ ಅಧ್ಯಕ್ಷೆ ಶ್ವೇತಾ ಪ್ರತಿಕ್ರಿಯಿಸಿ, ನೋಡಲ್ ಅಧಿಕಾರಿ ಗೈರು ಹಾಜರಿ ಬಗ್ಗೆ ನಮಗೆ ಮಾಹಿತಿಯಿಲ್ಲ. ಹಲವು ಇಲಾಖೆ ಅಧಿಕಾರಿಗಳು ಸಭೆಗೆ ಬಂದಿದ್ದರು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಬಾರದ ಕಾರಣ ಒಳಾಂಗಣಕ್ಕೆ ಸ್ಥಳಾಂತರ ಮಾಡಿದ್ದೇವೆ. ಇಂದಿನ ಸಭೆ ಯಾವುದೇ ಮುಚ್ಚು ಮರೆಯಲ್ಲಿ ನಡೆಸಿಲ್ಲ. ನಮ್ಮಲ್ಲಿ ಎಲ್ಲ ಮಾಹಿತಿ ಪಾರದರ್ಶಕವಾಗಿದ್ದು, ಇದನ್ನು ಮಂಡಿಸಲು ಸಭೆ ಕರೆಯಲಾಗಿತ್ತು ಎಂದರು. ಈ ವೇಳೆ ಗ್ರಾಪಂ ಸದಸ್ಯರಾದ ಬಂಗಾರಪ್ಪ, ಮಂಗಳ, ಗಣೇಶ, ಕೃಷಿ ಇಲಾಖೆ ಅಧಿಕಾರಿ ಶಿಲ್ಪ, ತೋಟಗಾರಿಕೆ ಅಧಿಕಾರಿಗಳು ಇದ್ದರು.


ನಾಳೆ ವಡ್ಡರಕಟ್ಟೆ ಶ್ರೀ ಮಹದೇಶ್ವರಸ್ವಾಮಿ ರಥೋತ್ಸವ



ಮಂಡ್ಯ: ತಾಲೂಕಿನ ಸುಂಡಹಳ್ಳಿ ಬಳಿಯ ವಡ್ಡರಕಟ್ಟೆಯ ಶ್ರೀಮಹದೇಶ್ವರಸ್ವಾಮಿ ದೇವಾಲಯದಲ್ಲಿ 101ನೇ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವದ ಅಂಗವಾಗಿ ನ.20ರಂದು ಸಂಜೆ 5 ಗಂಟೆಗೆ ಶ್ರೀಮಹದೇಶ್ವರಸ್ವಾಮಿಯ ದಿವ್ಯ ರಥೋತ್ಸವ ಜರುಗಲಿದೆ.

ದೇವಾಲಯದಲ್ಲಿ ನ.12 ರಿಂದ ಆರಂಭವಾಗಿರುವ ಕಾರ್ತಿಕ ಮಾಸದ ಜಾತ್ರೆಯು ಸೋಮವಾರ ರಥೋತ್ಸವ ನಡೆಯುವುದರೊಂದಿಗೆ ಸಂಪನ್ನಗೊಳ್ಳಲಿದ್ದು, ರಥೋತ್ಸವದಂದು ಸುಮಾರು ಹತ್ತು ಸಾವಿರ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದು ದರ್ಮದರ್ಶಿ ಸಮಿತಿಯ ಇಂಡುವಾಳು ಬಸವರಾಜು ತಿಳಿಸಿದ್ದಾರೆ.

ಇಂದು, ನಾಳೆ ಮಾರಮ್ಮ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ



ಭಾರತೀನಗರ: ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದಲ್ಲಿ ಮಾರಮ್ಮ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಪುನರ್ ಪ್ರತಿಷ್ಠಾಪನ ಮಹೋತ್ಸವ ನ.19 ಮತ್ತು 20 ರಂದು ವಿಜೃಂಭಣೆಯಿಂದ ನಡೆಯಲಿದೆ ಎಂದು ಮಾರಮ್ಮ ದೇವಿಯ ಸೇವಾ ಸಮಿತಿಯ ಅಧ್ಯಕ್ಷ ಪುಟ್ಟೇಗೌಡರ ಸಿದ್ದರಾಮೇಗೌಡ ತಿಳಿಸಿದರು.

ನ.19 ರಂದು ಸಂಜೆ 4 ರಿಂದ 6 ಗಂಟೆಯವರೆಗೆ ಗಂಗಾಪೂಜಾ, ವೀರಗಾಸೆ ಸಮೇತ ಗ್ರಾಮದ ಪ್ರದಕ್ಷಿಣೆ, ಗಣಪತಿ ಹೋಮ, ಪುಣ್ಯಪಂಚಗಾವ್ಯ, ರಕ್ಷಾಬಂಧನ, ವಾಸ್ತು ಹೋಮ, ಪೂರ್ಣಾಹುತಿ ಮತ್ತು ಮಹಾಮಂಗಳಾರತಿ ನಂತರ ತೀರ್ಥಪ್ರಸಾದ ವಿನಿಯೋಗ ಜರುಗಲಿದೆ.

ನ.20 ರ ಬೆಳಗ್ಗೆ 5 ರಿಂದ 6 ಗಂಟೆಯವರೆಗೆ ದೇವಿಯ ಪ್ರತಿಷ್ಠಾಪನೆ ಮತ್ತು ಪ್ರಧಾನ ಕಳಸ ಆರಾಧನಾ, ಗಣಪತಿ ಹೋಮ, ಸೇರಿದಂತೆ ವಿವಿಧ ಪೂಜಾಕೈಂಕರ್ಯಗಳು ಜರುಗಲಿದೆ. ಬೆಳಗ್ಗೆ 9 ಗಂಟೆಗೆ ಮಹಾಮಂಗಳಾರತಿ, 9.30ಕ್ಕೆ ಗ್ರಾಮದ ಪ್ರಮುಖ ದೇವಾಲಯಗಳಾದ ಶ್ರೀವೆಂಕಟೇಶ್ವರ (ತಿಮ್ಮಪ್ಪ), ಶ್ರೀ ಮಹಾಕಾಳಮ್ಮ, ಶ್ರೀಮಾರಮ್ಮ, ಶ್ರೀ ಅಮೃತೇಶ್ವರ, ಶ್ರೀಸಿದ್ದೇಶ್ವರ, ಶ್ರೀಹಟ್ಟಿ ಮಾರಮ್ಮ, ಸಿದ್ದೇಶ್ವರ ದೇವರುಗಳೊಡನೆ ಗಂಗೆಪೂಜೆ ಕಾರ್ಯಕ್ರಮ ಮತ್ತು ಉತ್ಸವ ಕಾರ್ಯಕ್ರಮ ಜರುಗಲಿದೆ. ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ಕಾರ್ಯಕ್ರಮ ಜರುಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಬೇಕೆಂದು ಪುಟ್ಟೇಗೌಡರ ಸಿದ್ದರಾಮೇಗೌಡ ಕೋರಿದ್ದಾರೆ.

ತುರುಬನಹಳ್ಳಿ ರಾಜೇಗೌಡರಿಗೆ ಸಹಕಾರ ರತ್ನ



ನಾಗಮಂಗಲ, ನ.18– ತಾಲೂಕಿನ ಸಹಕಾರ ಕ್ಷೇತ್ರದಲ್ಲಿ ವಿಎಸ್‌ಎಸ್‌ಎನ್‌ನಿಂದ ಹಿಡಿದು ಡಿಸಿಸಿ ಬ್ಯಾಂಕ್, ಮಾರಾಟ ಮಹಾಮಂಡಳದ ನಿರ್ದೇಶಕರ ತನಕ ಅನೇಕ ಸ್ಥಾನಗಳನ್ನು ಪಡೆದು ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ ತುರುಬನಹಳ್ಳಿಯ ಲೇಟ್ ಬೋರೇಗೌಡ ಮತ್ತು ಲೇಟ್ ನಿಂಗಮ್ಮರವರ ಪುತ್ರ ರಾಜೇಗೌಡರು ಸರ್ಕಾರದಿಂದ ಕೊಡುವ "ಸಹಕಾರ ರತ್ನ" ಪ್ರಶಸ್ತಿಗೆ ಭಾಜನರಾಗಿದ್ದು, ಇದೇ 20 ರಂದು ವಿಜಯಪುರದಲ್ಲಿ ನಡೆಯುವ ಸಹಕಾರ ಸಪ್ತಾಹದಲ್ಲಿ ಸ್ವೀಕರಿಸಲಿದ್ದಾರೆ.

ರಾಜೇಗೌಡರು ಸ್ವಗ್ರಾಮ ತುರುಬನಹಳ್ಳಿ ಗ್ರಾಮ ಸೇರುವ ಲಾಳನಕೆರೆ ವ್ಯವಸಾಯೋತ್ಪನ್ನ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 25 ವರ್ಷಗಳ ಕಾಲ ಸತತವಾಗಿ ಆಯ್ಕೆಯಾಗುವುದರ ಮೂಲಕ ಸಾಧನೆಗೈದಿದ್ದಾರೆ. 1978 ರಿಂದ ಬಿಂಡಿಗನವಿಲೆ ಹೋಬಳಿಯ ಲಾಳನಕೆರೆ ವಿಎಸ್‌ಎಸ್‌ಎನ್ ನಿರ್ದೇಶಕರಾಗಿ ಪುಟ್ಟ ಹೆಜ್ಜೆಯಿಟ್ಟ ರಾಜೇಗೌಡರು ತಾಲೂಕು ಕೃಷಿ ಸಮಾಜ, 1983 ರಲ್ಲಿ ಜಿಲ್ಲಾ ಮಾರುಕಟ್ಟೆ ಸಮಿತಿ, ಗೃಹ ಮಂಡಳಿಯ ನಿರ್ದೇಶಕರಾಗಿ ಅಪಾರ ಅನುಭವ ಪಡೆದು ತಾಲೂಕು ಟಿಎಪಿಎಂಎಸ್‌ಗೆ ಆಯ್ಕೆಯಾಗಿ ಅಧ್ಯಕ್ಷ ಗಾದಿಯನ್ನು ಏರುವುದರೊಂದಿಗೆ ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದ ಸೇವೆಯನ್ನು ಸಲ್ಲಿಸಿದರು.

ರಾಜೇಗೌಡರು 2005 ಮತ್ತು 2008ರಲ್ಲಿ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ ಆಯ್ಕೆಯಾಗಿ ರೈತರಿಗೆ 45 ಕೋಟಿ ಸಾಲ ವಿತರಿಸುವುದರೊಂದಿಗೆ ಸಾಧನೆ ಮಾಡಿರುವುದಲ್ಲದೇ ಜಿಲ್ಲೆಯಲ್ಲಿ ನಾಗಮಂಗಲ ಪಟ್ಟಣದಲ್ಲಿ ಅವಶ್ಯಕತೆಯಿದ್ದ ಹಗಲು ಮತ್ತು ರಾತ್ರಿ ಶಾಖೆ ಮತ್ತು ಬಿಂಡಿಗನವಿಲೆ ಹೋಬಳಿಯ ಅದ್ದಿಹಳ್ಳಿ ಶಾಖೆಯೂ ಸೇರಿದಂತೆ ಸುಮಾರು 20 ಡಿಸಿಸಿ ಬ್ಯಾಂಕ್ ಶಾಖೆಗಳನ್ನು ಪ್ರಾರಂಭಿಸುವುದರೊಂದಿಗೆ ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ.



ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಗ್ರಾಪಂ ವತಿಯಿಂದ ಕೈಗೊಂಡಿರುವ ಚಿಕ್ಕರಾಮ ಮಂದಿರ ಬೀದಿ ಕಾಂಕ್ರೀಟ್ ರಸ್ತೆಯ ಕಾಮಗಾರಿಗೆ ತಾಲೂಕು ಜೆಡಿಎಸ್ ಅಧ್ಯಕ್ಷ ಪೈ.ಮುಕುಂದ ಚಾಲನೆ ನೀಡಿದರು. ಪಿ.ಎಚ್.ನಾಗರಾಜ್, ವಿ.ಶಂಕರೇಗೌಡ, ಸಂಜು, ಜೈ.ಕುಮಾರ್, ಪಿ.ಎಸ್.ರಮೇಶ್‌ಬಾಬು, ರೇಡಿಂಯೋ ರಮೇಶ್, ಬಿ. ನಾರಾಯಣ, ಟೆಂಪೋ ಕೃಷ್ಣಪ್ಪ, ಸುನಿಲ್, ಪಿ.ಡಿ.ಓ ರವಿ, ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಗೆಲುವು ನಮ್ಮದೇ...

ದಕ್ಷಿಣ ಆಫ್ರಿಕಾದಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಭಾರತವನ್ನು ಮಣಿಸಿತ್ತು. ಇದೀಗ ಆ ಸೋಲಿನ ಸೇಡು ತೀರಿಸಿಕೊಳ್ಳುವತ್ತ ರೋಹಿತ್ ಪಡೆ ಹೆಜ್ಜೆ ಇಟ್ಟಿದೆ.

ಭಾರತ ಬ್ಯಾಟಿಂಗ್, ಬೌಲಿಂಗ್ ಸೇರಿದಂತೆ ಎಲ್ಲಾ ವಿಭಾಗಗಳಲ್ಲೂ ಬಲಿಷ್ಠವಾಗಿರುವುದರಿಂದ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡವಾಗಿದೆ. ಲೀಗ್ ಹಂತದಲ್ಲಿ ಆಸ್ಟ್ರೇಲಿಯಾವನ್ನು 6 ವಿಕೆಟ್‌ಗಳಿಂದ ಮಣಿಸಿದ್ದ ಭಾರತ ಇದೀಗ ಅದೇ ಆತ್ಮವಿಶ್ವಾಸದೊಂದಿಗೆ ನಾಳಿನ ಪಂದ್ಯದಲ್ಲೂ ಗೆಲುವು ಸಾಧಿಸಿ ಚಾಂಪಿಯನ್ ಪಟ್ಟ ಅಲಂಕರಿಸುವ ವಿಶ್ವಾಸದಲ್ಲಿದೆ. ಬ್ಯಾಟಿಂಗ್‌ನಲ್ಲಿ ರೋಹಿತ್ ಶರ್ಮಾ, ಶುಭ್‌ಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್.ರಾಹುಲ್ ಉತ್ಕೃಷ್ಟ ಫಾರ್ಮ್‌ನಲ್ಲಿದ್ದಾರೆ. ಇನ್ನು ಬೌಲಿಂಗ್ ವಿಭಾಗದಲ್ಲಿ ಜಸ್‌ಪ್ರೀತ್ ಬುಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್ ಕೂಡ ಶ್ರೇಷ್ಠ ಲಯದಲ್ಲಿದ್ದಾರೆ. ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್, ರವೀಂದ್ರ ಜಡೇಜಾ ಪ್ರತಿ ಪಂದ್ಯದಲ್ಲೂ ತಮ್ಮ ಸ್ಪಿನ್ ಮೋಡಿ ಪ್ರದರ್ಶಿಸಿದ್ದಾರೆ.

ಲೀಗ್ ಹಂತದ ಆರಂಭಿಕ 2 ಪಂದ್ಯಗಳಲ್ಲಿ ಸೋಲು ಅನುಭವಿಸಿ ನಂತರದ ಎಲ್ಲಾ ಪಂದ್ಯಗಳಲ್ಲೂ ಗೆಲುವು ಸಾಧಿಸಿ ಫೈನಲ್ ಪ್ರವೇಶಿಸಿರುವ ಆಸ್ಟ್ರೇಲಿಯಾ ಪರ ಡೇವಿಡ್ ವಾರ್ನರ್, ಟ್ರಾವಿಸ್ ಹೆಡ್, ಮಿಚೆಲ್ ಮಾರ್ಷ್, ಸ್ಟೀವ್ ಸ್ಮಿತ್ ಉತ್ತಮ ಲಯದಲ್ಲಿದ್ದಾರೆ. ಇನ್ನು ನಾಯಕ ಪ್ಯಾಟ್ ಕಮ್ಮಿನ್ಸ್, ಜೋಸ್ ಹ್ಯಾಸೆಲ್‌ವುಡ್, ಮಿಚೆಲ್ ಸ್ಟಾರ್ಕ್, ಆಡಂ ಜಂಪಾ ತಂಡದ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ವರ್ಣರಂಜಿತ ಕಾರ್ಯಕ್ರಮ: ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಮಂಡಳಿ ಎನಿಸಿಕೊಂಡಿರುವ ಬಿಸಿಸಿಐ ವಿಶ್ವಕಪ್ ಸಮಾರೋಪ ಸಮಾರಂಭವನ್ನು ಅದ್ದೂರಿಯಾಗಿ ನಡೆಸಲು ಸಕಲ ಸಿದ್ಧತೆ ನಡೆಸಿದೆ.

ಲೋಹದ ಹಕ್ಕಿಗಳ ಕಲರವ: ಪಂದ್ಯದ ಟಾಸ್ ಆದ 5 ನಿಮಿಷದಲ್ಲಿ ಅಂದರೆ 1.35ರಿಂದ 1.50ರ ವರೆಗೆ ಭಾರತೀಯ ವಾಯುಪಡೆಯ ಸೂರ್ಯಕಿರಣ್ ತಂಡದಿಂದ ಏರ್ ಶೋ ನಡೆಯಲಿದೆ. ನರೇಂದ್ರ ಮೋದಿ ಸ್ಟೇಡಿಯಂನ ಬಾನಂಗಳದಲ್ಲಿ ಲೋಹದ ಹಕ್ಕಿಗಳು ತಮ್ಮ ಚಮತ್ಕಾರ ತೋರಿಸಲಿವೆ. ಆಗಸದಲ್ಲೇ ವಿವಿಧ ಬಣ್ಣಗಳ ಚಿತ್ತಾರ ಬಿಡಿಸಿ ಗಣ್ಯರು ಹಾಗೂ ಅಭಿಮಾನಿಗಳ ಕಣ್ಣಿಗೆ ಹಬ್ಬವನ್ನುಂಟುಮಾಡಲಿದೆ. ಎರಡೂ ದಿನಗಳಿಂದಲೂ ರಿಹರ್ಸಲ್ ನಡೆಸಿರುವ ಸೂರ್ಯಕಿರಣ್ ತಂಡ ಫೈನಲ್ ಶೋಗೆ ಸನ್ನದ್ಧವಾಗಿದೆ.

ಡ್ರಿಂಕ್ಸ್ ಬ್ರೇಕ್ ವೇಳೆ ಸಂಗೀತ ರಸಮಂಜರಿ: ಪಂದ್ಯದ ಮೊದಲ ಇನ್ನಿಂಗ್ಸ್‌ನ ಡ್ರಿಂಕ್ಸ್ ಬ್ರೇಕ್ ವೇಳೆ ಆದಿತ್ಯ ಗಧ್ವಿ ಅವರಿಂದ ಗಾಯನ ಪ್ರದರ್ಶನ. ಮೊದಲ ಇನ್ನಿಂಗ್ಸ್ ಮುಗಿದ ಬಳಿಕ ಸಿಗುವ ಸುಮಾರು 30 ನಿಮಿಷಗಳ ಸಮಯದಲ್ಲಿ ಪ್ರೀತಮ್ ಚಕ್ರವರ್ತಿ, ಜೋನಿತಾ ಗಾಂಧಿ, ನಕಾಶ್ ಅಜೀಜ್, ಅಮಿತ್ ಮಿಶ್ರಾ, ಅಕಾಸ ಸಿಂಗ್ ಮತ್ತು ತುಷಾರ್ ಜೋಶಿ ಇವರಿಂದ ಸಂಗೀತ ರಸಮಂಜರಿ ಕಾರ್ಯಕ್ರಮ ಇರಲಿದೆ.

2ನೇ ಇನ್ನಿಂಗ್ಸ್ ಡ್ರಿಂಕ್ಸ್ ಬ್ರೇಕ್ ವೇಳೆ ಲೇಸರ್ ಶೋ: ಪಂದ್ಯದ 2ನೇ ಇನ್ನಿಂಗ್ಸ್‌ನ ಡ್ರಿಂಗ್ಸ್ ಬ್ರೇಕ್ ವೇಳೆ ವಿಶಿಷ್ಟ ಶೈಲಿಯ ಲೇಸರ್ ಮತ್ತು ಲೈಟ್ ಶೋ ನಡೆಯಲಿದೆ ಎಂದು ಬಿಸಿಸಿಐ ತಿಳಿಸಿದೆ. ಅಲ್ಲದೇ ಬಾಲಿವುಡ್ ತಾರೆಯರಿಂದ ನೃತ್ಯ ಪ್ರದರ್ಶನ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ.

ಭಾರತದ ಗೆಲುವಿಗೆ ವಿಶೇಷ ಪೂಜೆ: ಭಾರತ ನಾಳಿನ ಫೈನಲ್ ಪಂದ್ಯದಲ್ಲಿ ಆಸೀಸ್ ಮಣಿಸಿ ವಿಶ್ವಕಪ್ ಎತ್ತಿಹಿಡಿಯಲೆಂದು ದೇಶಾದ್ಯಂತ ಅಭಿಮಾನಿಗಳು ದೇವಾಲಯಗಳಲ್ಲಿ ವಿಶೇಷ ಪಾರ್ಥನೆ, ಹೋಮ, ಹವನ ನಡೆಸುತ್ತಿದ್ದಾರೆ.

ಮಕ್ಕಳ ಸಂಭ್ರಮ: ಮುಂಬೈನ ಗುರುಕುಲ ಕಲಾ ಶಾಲೆಯ ವಿದ್ಯಾರ್ಥಿಗಳು ಭಾರತೀಯ ಕ್ರಿಕೆಟ್ ತಂಡದ ಆಟಗಾರರ ಚಿತ್ರ ರಚಿಸುವ ಮೂಲಕ ಶುಭ ಕೋರಿದ್ದಾರೆ. ಬಾಕ್ಸರ್ ಫ್ಲಾಯ್ಡ್ ಮೇವೆದರ್ ಜೂನಿಯರ್ ಅವರೂ ಭಾರತ ತಂಡದ ಜಯಕ್ಕಾಗಿ ಶುಭ ಹಾರೈಸಿದ್ದಾರೆ. ತಂಡಕ್ಕೆ ಅಭಿನಂದನೆ ಸಲ್ಲಿಸಿರುವ ಅವರು ವಿಶ್ವಕಪ್ ಅಂತಿಮ ಹಣಾಹಣಿಯಲ್ಲಿ ಖಂಡಿತವಾಗಿಯೂ ಉತ್ತಮ ಪ್ರದರ್ಶನ ನೀಡುತ್ತೀರಿ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಭಾರತ ತಂಡ: ರೋಹಿತ್ ಶರ್ಮಾ (ನಾಯಕ), ಶುಭ್‌ಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಕೆ.ಎಲ್.ರಾಹುಲ್ (ವಿಕೆಟ್ ಕೀಪರ್), ಇಶಾನ್ ಕಿಶನ್ (ವಿಕೆಟ್ ಕೀಪರ್), ರವೀಂದ್ರ ಜಡೇಜಾ, ಶಾರ್ದೂಲ್ ಠಾಕೂರ್, ರವಿಚಂದ್ರನ್ ಅಶ್ವಿನ್, ಕುಲ್ದೀಪ್ ಯಾದವ್, ಜಸ್‌ಪ್ರಿತ್ ಬುಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ.

ಆಸ್ಟ್ರೇಲಿಯಾ ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಸ್ಟೀವ್ ಸ್ಮಿತ್, ಅಲೆಕ್ಸ್ ಕ್ಯಾರಿ, ಜೋಶ್ ಇಂಗ್ಲಿಸ್, ಶಾನ್ ಅಬಾಟ್, ಮಾರ್ನಸ್ ಲಾಬುಶೇನ್, ಕ್ಯಾಮೆರೋನ್ ಗ್ರೀನ್, ಜೋಶ್ ಹ್ಯಾಝಲ್‌ವುಡ್, ಟ್ರಾವಿಸ್ ಹೆಡ್, ಮಿಚ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಮಾರ್ಕಸ್ ಸ್ಟೊಯಿನಿಸ್, ಡೇವಿಡ್ ವಾರ್ನರ್, ಆಡಂ ಝಂಪಾ, ಮಿಚೆಲ್ ಸ್ಟಾರ್ಕ್.

ಫೈನಲ್ ಪಂದ್ಯಕ್ಕೆ ಅಂಪೈರ್ಸ್: ಫೈನಲ್ ಪಂದ್ಯಕ್ಕೆ ಅಂಪೈರ್‌ಗಳ ಹೆಸರನ್ನು ಐಸಿಸಿ ಶುಕ್ರವಾರ ಪ್ರಕಟಿಸಿದ್ದು, ಇಂಗ್ಲೆಂಡ್‌ನ ರಿಚರ್ಡ್ ಇಲ್ಲಿಂಗ್‌ವರ್ಥ್ ಹಾಗೂ ರಿಚರ್ಡ್ ಕೆಟಲ್ಬರೋ ಪಂದ್ಯದಲ್ಲಿ ಆನ್‌ಫೀಲ್ಡ್ ಅಂಪೈರ್‌ಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ.



ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮಿಲಾದ್ ಬಳಿ ಮುಸ್ಲಿಂ ಬಾಂಧವರು ಭಾನುವಾರದ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತ ತಂಡ ಗೆಲುವ ಸಾಧಿಸಲು ಶುಭ ಕೋರಿದರು.

ಮಳೆಯಿಂದ ಫೈನಲ್ ರದ್ದಾದರೆ ಯಾವ ತಂಡಕ್ಕೆ ಪ್ರಶಸ್ತಿ?

ಅಹಮದಾಬಾದ್: ಭಾನುವಾರ ನಡೆಯುವ ವಿಶ್ವಕಪ್ ಫೈನಲ್ ಪಂದ್ಯಕ್ಕೆ ಮಳೆ ಅಡ್ಡಿ ಉಂಟುಮಾಡಿದರೆ, ಮೀಸಲು ದಿನವಾದ ಸೋಮವಾರ ಪಂದ್ಯ ಮುಂದುವರಿಯಲಿದೆ. ಆದಾಗ್ಯೂ ಮೀಸಲು ದಿನವೂ ಮಳೆಯಿಂದ ಪಂದ್ಯ ರದ್ದಾದರೆ, ಯಾವ ತಂಡಕ್ಕೆ ಪ್ರಶಸ್ತಿ ನೀಡಲಾಗುತ್ತದೆ? ಐಸಿಸಿ ನಿಯಮಗಳು ಏನು ಹೇಳಲಿದೆ? ಎಂಬ ಬಗ್ಗೆ ಇಲ್ಲಿ ಸಂಪೂರ್ಣವಾಗಿ ವಿವರಿಸಲಾಗಿದೆ.

ಮೀಸಲು ದಿನ ಹಾಗೂ ಮುಂದುವರಿಯುವ ನಿಯಮ: ಭಾರತ ಹಾಗೂ ಆಸ್ಟ್ರೇಲಿಯಾ ನಡುವಣ ಏಕದಿನ ವಿಶ್ವಕಪ್ ಫೈನಲ್ ನಿಗದಿತ ದಿನವಾದ ಭಾನುವಾರ ಮುಗಿದಿಲ್ಲವಾದರೆ, ಮೀಸಲು ದಿನವಾದ ಸೋಮವಾರ (ನ.20)ರಂದು ಮಧ್ಯಾಹ್ನ 2 ಗಂಟೆಯಿಂದ ಮುಂದುವರಿಯಲಿದೆ. ನಿಗದಿತ ದಿನಾಂಕದಂದು ಪಂದ್ಯವನ್ನು ಮುಗಿಸಲು ಐಸಿಸಿ ಅಧಿಕಾರಿಗಳು ಎಲ್ಲಾ ರೀತಿಯಲ್ಲಿ ಪ್ರಯತ್ನ ನಡೆಸಲಿದೆ. ಪಂದ್ಯದ ದಿನ ಕನಿಷ್ಠ 20 ಓವರ್‌ಗಳನ್ನು ಎರಡೂ ತಂಡಗಳು ಮುಗಿಸಿಲ್ಲವಾದರೆ, ಮೀಸಲು ದಿನ ಪಂದ್ಯ ಮುಂದುವರಿಯಲಿದೆ.

ಫೈನಲ್ ಪಂದ್ಯಕ್ಕೆ ಮಳೆ ಅಡ್ಡಿ ಉಂಟುಮಾಡಿದರೆ, ಡೆಕ್ವರ್ಥ್ ಲೂಯಿಸ್ ನಿಯಮ ಇಲ್ಲಿ ಪ್ರಧಾನ ಪಾತ್ರವಹಿಸಲಿದೆ. ಒಂದು ತಂಡ ಪ್ರಥಮ ಇನಿಂಗ್ಸ್ ಅನ್ನು ಪೂರ್ಣಗೊಳಿಸಿದ ಬಳಿಕ ದ್ವಿತೀಯ ಇನಿಂಗ್ಸ್‌ಗೆ ಮಳೆ ಅಡ್ಡಿ ಉಂಟುಮಾಡಿದರೆ, ಆಗ ಡಿಎಲ್‌ಎಸ್ ನಿಯಮ ಪ್ರಕಾರ ಪರಿಷ್ಕೃತ ಗುರಿಯನ್ನು ನೀಡಲಾಗುತ್ತದೆ. ಚೇಸಿಂಗ್ ತಂಡ ಕನಿಷ್ಠ 20 ಓವರ್‌ಗಳನ್ನೂ ಪೂರ್ಣಗೊಳಿಸದೆ, ಮೀಸಲು ದಿನವೂ ಮಳೆಗೆ ಬಲಿಯಾದರೆ ಆಗ ಐಸಿಸಿ ನಿಯಮದ ಪ್ರಕಾರ ಎರಡೂ ತಂಡಗಳನ್ನು ಜಂಟಿ ಚಾಂಪಿಯನ್ ಎಂದು ಘೋಷಿಸಲಾಗುತ್ತದೆ.

ಹವಾಮಾನ ವರದಿ: ಭಾರತ ಹಾಗೂ ಆಸ್ಟ್ರೇಲಿಯಾ ನಡುವೆ ಏಕದಿನ ವಿಶ್ವಕಪ್ ಫೈನಲ್ ನಡೆಯುವ ಅಹಮದಾಬಾದ್‌ನ ಹವಾಮಾನ ಸದ್ಯ ಅತ್ಯುತ್ತಮವಾಗಿದೆ. ಪಂದ್ಯದ ದಿನವೂ ಕೂಡ ಇಲ್ಲಿ ಬಿಸಿಲು ಕಾಣಿಸಿಕೊಳ್ಳಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ ಹಾಗಾಗಿ ಫೈನಲ್ ಪಂದ್ಯದ ದಿನ ಮಳೆ ಬೀಳುವ ಸಾಧ್ಯತೆ ಇಲ್ಲ. ಮಧ್ಯಾನ 33 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿದ್ದು, ಸಂಜೆಯ ಹೊತ್ತಿಗೆ ಇದು 25 ಡಿಗ್ರಿ ಉಷ್ಣಾಂಶಕ್ಕೆ ಇಳಿಯಲಿದೆ.

ಪಿಚ್ ರಿಪೋರ್ಟ್: ವಿಶ್ವಕಪ್ ಫೈನಲ್ ನಡೆಯುವ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಬ್ಯಾಟ್ಸ್‌ಮನ್‌ಗಳು ಹಾಗೂ ಬೌಲರ್ ಇಬ್ಬರಿಗೂ ಸಮವಾಗಿ ನೆರವು ನೀಡಲಿದೆ. ಹೊಸ ಚೆಂಡಿನಲ್ಲಿ ವೇಗಿಗಳು ಪ್ರಾಬಲ್ಯ ಮೆರೆದರೆ, ಚೆಂಡು ಹಳೆಯದಾಗುತ್ತಿದ್ದಂತೆ ಸ್ಪಿನ್ನರ್‌ಗಳು ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲಿದ್ದಾರೆ. ಅಂದ ಹಾಗೆ ಈ ಪಿಚ್‌ನಲ್ಲಿ ಹೊಂದಿಕೊಂಡರೆ ಬ್ಯಾಟ್ಸ್‌ಮನ್‌ಗಳು ಹೆಚ್ಚಿನ ರನ್‌ಗಳನ್ನು ಕಲೆ ಹಾಕಬಹುದು.

2003ರ ಸೋಲಿನ ಸೇಡಿಗೆ ಭಾರತ ಕಾತರ!

ಭಾರತ ತಂಡ ಸದ್ಯ ಆಸ್ಟ್ರೇಲಿಯಾ ವಿರುದ್ಧ ಫೈನಲ್‌ನಲ್ಲಿ ಸೇಡು ತೀರಿಸಿಕೊಳ್ಳಲು ಕಾಯುತ್ತಿದೆ. 2003ರ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಭಾರತ ತಂಡ ಆಸ್ಟ್ರೇಲಿಯಾ ವಿರುದ್ಧ ಸೋಲುಂಡಿತ್ತು ಆ ಸೋಲಿನ ಸೇಡಿಗೆ ಭಾರತ ಕಾಯುತ್ತಿದೆ. 2003ರಲ್ಲಿ ಉಭಯ ತಂಡಗಳು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದವು. ಭಾರತವನ್ನು ಸೋಲಿಸಿ ಆಸೀಸ್ ಚಾಂಪಿಯನ್ ಆಗಿತ್ತು ಆ ಸೋಲಿಗೂ ಸೇಡು ತೀರಿಸಿಕೊಳ್ಳಲು ರೋಹಿತ್ ಬಳಗ ಕಾತರಿಸುತ್ತಿದೆ. ಭಾರತ ಹಾಗೂ ಆಸ್ಟ್ರೇಲಿಯಾ ವಿಶ್ವಕಪ್ ಫೈನಲ್‌ನಲ್ಲಿ ಬರೋಬ್ಬರಿ 20 ವರ್ಷಗಳ ಬಳಿಕ ಮುಖಾಮುಖಿಯಾಗುತ್ತಿವೆ. ಈ ಎರಡೂ ಫೈನಲ್‌ಗೆ ಕೆಲ ಸಾಮ್ಯತೆಗಳೂ ಇವೆ. 2003ರ ಟೂರ್ನಿಯಲ್ಲಿ ಆಸ್ಟ್ರೇಲಿಯಾ ಸತತ 10 ಪಂದ್ಯಗೆದ್ದು ಫೈನಲ್‌ಗೇರಿತ್ತು.

ಸರ್ಕಾರದ ವರ್ಚಸ್ಸಿಗೆ ಭಾರಿ ಧಕ್ಕೆ

ತೂಕವಿರ ಬೇಕು. ಅದನ್ನು ಬಿಟ್ಟು ಬೆಳಿಗ್ಗೆ ಎದ್ದು ಏನೇನೋ ಮಾತನಾಡುತ್ತಾರೆ. ಪಾಪ, ಯತೀಂದ್ರ ಸಿದ್ದರಾಮಯ್ಯ ಅವರು ತಂದೆ ಪರವಾಗಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಕ್ಷೇತ್ರದ ಕೆಲಸದ ವಿಚಾರವಾಗಿ ಮಾತನಾಡಿದರೆ, ಅದನ್ನೇ ದೊಡ್ಡದು ಮಾಡುವುದು ಸರಿಯಲ್ಲ. ನಾನು ಪರಿಷತ್ ಸದಸ್ಯತ್ವ ನೀಡುತ್ತೇನೆ ಎಂದಾಗ ಅವರು ಅದನ್ನು ನಿರಾಕರಿಸಿದವರು. ಅಂಥವರ ಬಗ್ಗೆ ವಿನಾ ಕಾರಣ ಆರೋಪ ಸರಿಯಲ್ಲ. ಕುಮಾರಸ್ವಾಮಿ ಸದನದಲ್ಲಿ ನಮ್ಮದೇನಿದೆಯೋ ಅದನ್ನು ಬಿಚ್ಚಿಡಲಿ. ನಾವು ಅದಕ್ಕೆ ತಕ್ಕ ಉತ್ತರ ನೀಡುತ್ತೇವೆ ಎಂದು ಹೇಳಿದರೆ, ಮತ್ತೊಂದೆಡೆ ಗೃಹ ಇಲಾಖೆ ಹೊಣೆ ಹೊತ್ತಿರುವ ಡಾ.ಜಿ.ಪರಮೇಶ್ವರ್ ಅವರು, ವಿಪಕ್ಷಗಳು ವರ್ಗಾವಣೆ ದಂಧೆ ಬಗ್ಗೆ ಆರೋಪಗಳಿದ್ದರೆ ಅಧಿವೇಶನದಲ್ಲಿ ಪ್ರಸ್ತಾಪಿಸಲಿ. ಯತೀಂದ್ರ ಅವರು ಹೇಳಿರುವ ವಿವೇಕಾನಂದ ಹೆಸರಿಗೂ, ಪೊಲೀಸ್ ಇಲಾಖೆ ವರ್ಗಾವಣೆ ಪಟ್ಟಿಯಲ್ಲಿರುವ ಹೆಸರಿಗೂ ಸಂಬಂಧವಿಲ್ಲ. ಹಾಗಿದ್ದಿದ್ದರೆ, ಅವರು ನನಗೆ ಹೇಳಬೇಕಲ್ಲವೆ? ಅವರು ಹೇಳಿದ್ದು, ಕಾಕತಾಳೀಯ ಆಗಿರಬೇಕು. ನಾವು ಸಮಾಧಾನ ಆಗುವ ರೀತಿಯಲ್ಲೇ ಉತ್ತರ ಕೊಡುತ್ತೇವೆ. ಡಿ.4ರಿಂದ ವಿಧಾನಮಂಡಲದ ಅಧಿವೇಶನ ಬೆಳಗಾವಿಯಲ್ಲಿ ಆರಂಭವಾಗಲಿದೆ. ಹಣ ತೆಗೆದುಕೊಂಡಿರುವ ಬಗ್ಗೆ ಮಾತನಾಡಲಿ. ನಾವು ಅನೇಕ ಕಾರಣಗಳಿಂದ ಇಲಾಖೆಯಲ್ಲಿ ಬದಲಾವಣೆಗಳನ್ನು ಮಾಡುತ್ತೇವೆ. ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಇಲ್ಲವೆಂದರೆ ಕಾಯಲು ಆಗಲ್ಲ. ಹೆಚ್ಚು ಸಮಯ ಖಾಲಿ ಬಿಡದೆ ವರ್ಗಾವಣೆ ಮಾಡುತ್ತೇವೆ. ಇಲ್ಲಿ ವಿವೇಕಾನಂದ ಹೆಸರು ಕಾಕತಾಳೀಯ ಆಗಿರಬಹುದು ಎಂದಿದ್ದಾರೆ. ಪ್ರತ್ಯೇಕವಾಗಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಅವರು, ವಿವೇಕಾನಂದ ಹೆಸರು ಕಾಮನ್ ಆಗಿರಬಹುದು. ವರ್ಗಾವಣೆ ಬಗ್ಗೆ ಮಾಜಿ ಶಾಸಕರಷ್ಟೇ ಅಲ್ಲ, ಜೆಡಿಎಸ್ ಶಾಸಕರು ಶಿಫಾರಸ್ಸು ಮಾಡಿದ್ದಾರೆ. ಅದನ್ನೆಲ್ಲಾ ವರ್ಗಾವಣೆ ದಂಧೆ ಎನ್ನಲಾಗುತ್ತದೆಯೇ? ಕುಮಾರಸ್ವಾಮಿ ಅವರ ಬಳಿ ದಾಖಲೆಗಳಿದ್ದರೆ ಸದನದಲ್ಲಿ ಚರ್ಚೆ ಮಾಡಲಿ ಎಂದರು. ತೆಲಗಾಂಣ ಚುನಾವಣಾ ಪ್ರಚಾರದಲ್ಲಿರುವ ರಾಜ್ಯದ ಸಚಿವರು ಸಹ ಅಲ್ಲಿಂದಲೇ ಕುಮಾರಸ್ವಾಮಿ ವಿರುದ್ಧ ಟೀಕಾಪ್ರಹಾರ ನಡೆಸುತ್ತಿದ್ದಾರೆ.

ಆಸೆ ಇತ್ತು...!

ಬಾರಿ ಅಂದಿನ ಮುಖ್ಯಮಂತ್ರಿ ಗುಂಡೂರಾವ್ ವಿರುದ್ಧ ಪ್ರೊ.ರಾಮದಾಸ್, ಪ.ಮಲ್ಲೇಶ್ ಮತ್ತು ಇತರರು ಪ್ರತಿಭಟನೆ ನಡೆಸಿ ಧಿಕ್ಕಾರದ ಘೋಷಣೆಗಳನ್ನು ಕೂಗಿದ್ದರು. ಇದರಿಂದ ಮುಜುಗರಕ್ಕೊಳಗಾದ ಗುಂಡೂರಾವ್, ಎಸ್ಪಿಯನ್ನು ತರಾಟೆಗೆ ತೆಗೆದುಕೊಂಡರು. ಈ ಘಟನೆಯಿಂದ ಕೋಪೋದ್ರಿಕ್ತರಾದ ಎಸ್ಪಿ ಹೇಗಾದರೂ ಮಾಡಿ ಇವರನ್ನು ಬಂಧಿಸಿ ಜೈಲಿಗೆ ಕಳುಹಿಸಬೇಕು ಎಂದು ಹಠಕ್ಕೆ ಬಿದ್ದರು. ಕೋರ್ಟ್‌ಗೆ ಹೋದರೂ ಆತ ಬಿಡುವಂತಿರಲಿಲ್ಲ. ಮೈಸೂರು ವಕೀಲರ ಸಂಘದ ಕಾರ್ಯದರ್ಶಿಯಾಗಿದ್ದ ನಾನು ಈ ವಿಚಾರವನ್ನು ನ್ಯಾಯಾಧೀಶರಿಗೆ ತಿಳಿಸಿದೆ. ಪೊಲೀಸರು ಸುತ್ತುವರೆದಿದ್ದರು. ತರುವಾಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುವ ವೇಳೆ ಪ್ರೊ.ರಾಮದಾಸ್‌ಗೆ ವಕೀಲರ ಕೋಟ್ ಹಾಕಿಸಿ ಹಿಂಭಾಗಿಲಿನಿಂದ ಕಳುಹಿಸಿದೆ. ನಂತರ ಪೊಲೀಸರ ಕಣ್ತಪ್ಪಿಸಿ ಪ.ಮಲ್ಲೇಶ್ ನನ್ನು ಸ್ಕೂಟರ್‌ನಲ್ಲಿ ಕೂರಿಸಿಕೊಂಡು ವೇಗವಾಗಿ ಚಾಲನೆ ಮಾಡಿಕೊಂಡು ಜಯನಗರದ ಸ್ನೇಹಿತರೊಬ್ಬರ ಮನೆಗೆ ಬಿಟ್ಟಿದ್ದೆ ಎಂದು ಸಿದ್ದರಾಮಯ್ಯ ತಮ್ಮ ಹೋರಾಟದ ಹಿಂದಿನ ಘಟನೆಗಳನ್ನು ನೆನಪು ಮಾಡಿಕೊಂಡರು.

ಪ.ಮಲ್ಲೇಶ್ ಅಪ್ಪಟ ಸಮಾಜವಾದಿಯಾಗಿದ್ದರು. ಜ್ಯಾತ್ಯಾತೀತ ಮನೋಭಾವ ಹೊಂದಿದ್ದ ಅವರು ಹೋರಾಟದಲ್ಲೆ ಹೆಚ್ಚು ಸಮಯ ಕಳೆದರು. ಸಮಾಜದಲ್ಲಿರುವ ತಾರತಮ್ಯ ನೀತಿ, ಜಾತೀಯತೆ ವಿರುದ್ಧ ಜೀವನದುದ್ದಕ್ಕೂ ಹೋರಾಟ ಮಾಡಿದರು ಎಂದು ಸಿದ್ದರಾಮಯ್ಯ ಸ್ಮರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮಾಜಿ ಶಾಸಕ ಡಾ. ಯತೀಂದ್ರ, ಪತ್ರಕರ್ತ ಜಿ.ಪಿ.ಬಸವರಾಜು, ಸವಿತ ಪ.ಮಲ್ಲೇಶ್, ಭಕ್ತ ರಾಮೇಗೌಡ, ಉಗ್ರನರಸಿಂಹೇಗೌಡ, ಅಭಿರುಚಿ ಗಣೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾದು ನೋಡಿ

ಕಾಯಿರಿ... ಕಾಯಿರಿ... ಕಾಯಿರಿ... ಎಂದು ಭವಿಷ್ಯದ ಬೆಳವಣಿಗೆಗಳ ಬಗ್ಗೆ ಮೂರು ಬಾರಿ ಉಚ್ಚರಿಸಿದರು. ಈ ಮಾತು ಹೇಳುವ ಸಂದರ್ಭ ದಲ್ಲಿ ಸಿದ್ದರಾಮಯ್ಯ ಅವರ ಬಾಡಿ ಲಾಂಗ್ವೇಜ್ ಬದಲಾಯಿತು. ಅವರ ಮುಖ ದಲ್ಲಿ ಹರ್ಷವಿತ್ತು. ವಿಜಯೇಂದ್ರ ಹಾಗೂ ಅಶೋಕ್ ಆಯ್ಕೆಗೆ ಬಿಜೆಪಿಯಲ್ಲೇ ಬಹಿರಂಗವಾಗಿ ಭಿನ್ನಮತ ಸ್ಫೋಟಗೊಂಡಿರುವ ಈ ಸಮಯದಲ್ಲಿ ಸಿದ್ದರಾಮಯ್ಯ ನೀಡಿರುವ ಈ ಹೇಳಿಕೆ ಮಹತ್ವ ಪಡೆದಿದೆ. ಈಗ ಚುನಾವಣೆ ನಡೆದರೂ ಬಿಜೆಪಿ ಗೆಲ್ಲುತ್ತದೆ ಎಂಬ ಯಡಿಯೂರಪ್ಪ ಹೇಳಿಕೆಗೆ ಕಿಡಿಕಾರಿದ ಸಿದ್ದರಾಮಯ್ಯ, ಈಗ ಯಾಕ್ರಿ ಚುನಾವಣೆ ನಡೆಯುತ್ತೆ. ಈ ಹಿಂದೆ ಕೂಡ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳಿದ್ದರು. ಅಧಿಕಾರಕ್ಕೆ ಬಂದಿದ್ದು ಯಾರ್ರಿ, ಸುಮ್ಮನೆ ಏನೋ ಹೇಳುತ್ತಾರೆ. ಅದನ್ನೆಲ್ಲಾ ಬಿಟ್ಟು ಬಿಡಿ ಎಂದು ನುಡಿದರು. ಬಿಜೆಪಿಯವರು ಕನಸು ಕಾಣುತ್ತಿದ್ದಾರೆ. ಆದರೆ ಜನರು ತಮ್ಮನ್ನು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಿಸಿರುವುದನ್ನು ಮರೆತಿದ್ದಾರೆ ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

ಪಟ್ಟಿಯಲ್ಲಿ 'ವಿವೇಕಾನಂದ'!

ಕಾಸಿಗಾಗಿ ಹುದ್ದೆ ವಿಡಿಯೋಗೆ CSR ಕಥೆ ಕಟ್ಟಿದ್ದ ಮುಖ್ಯಮಂತ್ರಿಗಳ ನೈತಿಕತೆಗೆ ನಯಗಾರಿಕೆಗೆ ನೂರೆಂಟು ನಮನ ಎಂದು ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ. ವಿಡಿಯೋ 'ವಿವೇಕಾನಂದ', ಗುಪ್ತವಾರ್ತೆಯಿಂದ ಮೈಸೂರು ವಿ.ವಿ.ಪುರಂಗೆ ಪೋಸ್ಟಿಂಗ್ ಪಡೆದಿದ್ದು ಹೇಗೆ? ಬರ್ಮುಡಾ ಟ್ರ್ಯಾಂಗಲ್ ರಹಸ್ಯವನ್ನೇ ಮೀರಿಸಿದೆ ಈ ಚಿದಂಬರ ರಹಸ್ಯ. ಪ್ರಶ್ನೆ ಕೇಳುವುದು ನನ್ನ ವಿಧಿ, ಉತ್ತರ ಹೇಳಲೇಬೇಕು. ಅದು ನಿಮ್ಮ ದುರ್ವಿಧಿ. ಆನ್ಸರ್ ಮಾಡಿ ಸಿದ್ದರಾಮಯ್ಯನವರೇ? ಎಂದು ಮಾಜಿ ಮುಖ್ಯಮಂತ್ರಿಗಳು ಕಾಲೆಳೆದಿದ್ದಾರೆ. ಕುಮಾರಸ್ವಾಮಿಗೆ ಹೊಟ್ಟೆಕಿಚ್ಚು. ದ್ವೇಷದಿಂದ ಮಗನ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದಲ್ಲವೇ ನೀವು ಹೇಳಿದ್ದು. ಹಾಗಾದರೆ, 71 ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗದ ಈ ಯಾದಿಯ 4ನೇ ಹೆಸರಿನಲ್ಲೇ ಅಡಗಿದೆಯಲ್ಲಾ ನಿಮ್ಮ 'ಸುಲಿಗೆ ಪುತ್ರನ ಕಿಚ್ಚು! ಕ್ಷೇತ್ರ ತ್ಯಾಗದ ತ್ಯಾಗಮಯಿ, ಈಗ ವರುಣಕ್ಕೆ ವಕ್ಕರಿಸಿದ ಕೆಡಿಪಿ ಕಲಿ. ಏನಂತೀರಿ? ಎಂದು ಖಾರವಾಗಿ ಪ್ರಶ್ನಿಸಿದ್ದಾರೆ. ಈ ಪಾಪದ ಕಾಸಿನ ಕಮಟು ದುರ್ನಾತ ಅಸಹ್ಯಕರ. 'ವರ್ಗಾವರ್ಗಿ ಬಜೆಟ್'ನಲ್ಲಿ ನಿಮ್ಮ ಪಟಾಲಂದು ಶಿಖರ ಸಾಧನೆ. 6 ತಿಂಗಳ ಭರ್ಜರಿ ಅತೀಂದ್ರೀಯ. 'ಕಾಸಿಗಾಗಿ ಹುದ್ದೆ ಮತ್ತು ಕಾಂಗ್ರೆಸ್ ಹುಂಡಿ' ಸಿನಿಮಾವನ್ನೂ ಮಾಡಿ, ಕೆಡಿಪಿ ಕಲಿಯೇ ನಾಯಕ, ಟೆಂಪರರಿ ಸಿಎಂ ನಿರ್ಮಾಪಕ, ಡೂಪ್ಲಿಕೇಟ್ ಸಿಎಂ ನಿರ್ದೇಶಕ. ಹೇಗಿದೆ? ಎಂದು ಕುಮಾರಸ್ವಾಮಿ ಟಾಂಗ್ ನೀಡಿದ್ದಾರೆ.

ಸತ್ಯ ಹೇಳಿದರೆ ಗುಂಪುಗುಂಪಾಗಿ ಮೇಲೆ ಬೀಳುತ್ತೀರಿ, ಬೆದರಿಸುತ್ತೀರಿ. ಕುಮಾರಸ್ವಾಮಿಯದು ಹಿಟ್ ಮತ್ತು ರನ್ ಅಂತೀರಿ, ಸುಳ್ಳು ಎನ್ನುತ್ತೀರಿ. ಕಣ್ಮುಂದೆ ವಿಡಿಯೋ ಸಾಕ್ಷ್ಯವಿದೆ. ರಾಜ್ಯದ ಜನ ನೋಡಿದ್ದಾರೆ. ಪಲಾಯನಕ್ಕೆ ಅವಕಾಶವೇ ಇಲ್ಲ. ನಿಮ್ಮ ಕೌರವ ದುರ್ನೀತಿ ನನ್ನ ಮುಂದೆ ನಡೆಯಲ್ಲ. ನಾನು ಒಬ್ಬನೇ ಒಬ್ಬ, ಅಂಜಿಕೆ ನನ್ನ ರಕ್ತದಲ್ಲೇ ಇಲ್ಲ ಎಂದು ನೇರವಾಗಿ ತಿರುಗೇಟು ನೀಡಿದ್ದಾರೆ.



ವಿಧಾನಸಭೆ ವಿಪಕ್ಷ ನಾಯಕರಾಗಿ ಆಯ್ಕೆಯಾದ ಆರ್.ಅಶೋಕ್ ಅವರನ್ನು ಸಂಸದ ಪ್ರತಾಪ್ ಸಿಂಹ ಅವರು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೊಡಗೂಡಿ ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಅಭಿನಂದಿಸಿದರು. ಈ ವೇಳೆ ಮಾಜಿ ಸಚಿವ ರೇಣುಕಾಚಾರ್ಯ, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಅರುಣ್‌ಕುಮಾರ್‌ಗೌಡ ಉಪಸ್ಥಿತರಿದ್ದರು.

ಪೆನ್‌ಡ್ರೈವ್ ತೋರಿಸಿದ ಮೇಲೆ ಅದರಲ್ಲೇನಿದೆ ಎಂದು ಬಿಡಬೇಕಲ್ವಾ...!

ಮೈಸೂರು, ನ.18(ಬಿಎಲ್‌ಯು)– ಅಯ್ಯೋ ಪಾಪ, ಸಚಿವರು ಗೋಗರೆದಿದ್ದಕ್ಕೆ ಬಿಟ್ಟಿಲ್ವಾ, ಪೆನ್‌ಡ್ರೈವ್ ತೋರಿಸಿದ ಮೇಲೆ ಬಿಡಬೇಕಲ್ವಾ..

ಹೀಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ವ್ಯಂಗ್ಯವಾಡಿದವರು ಮುಖ್ಯಮಂತ್ರಿ ಸಿದ್ದರಾಮಯ್ಯ.

ಕೆಲವು ಸಚಿವರು ಪೆನ್‌ಡ್ರೈವ್‌ನಲ್ಲಿರುವ ಸ್ಫೋಟಕ ಮಾಹಿತಿ ಬಿಡುಗಡೆ ಮಾಡದಂತೆ ಗೋಗರೆದಿದ್ದಾರೆ ಎಂಬ ಕುಮಾರಸ್ವಾಮಿ ಹೇಳಿಕೆಗೆ ಕಿಡಿಕಾರಿದ ಸಿದ್ದರಾಮಯ್ಯ, ಅಯ್ಯೋ ಪಾಪ ಅದಕ್ಕೆ ಬಿಟ್ಟಿಲ್ವಾ, ಏನಾದರೂ ಇದ್ದರೆ ಬಿಡಬೇಕು ತಾನೆ, ಅದನ್ನು ಏಕೆ ಇಟ್ಟುಕೊಂಡಿದ್ದಾರೆ, ತೋರಿಸಿದ ಮೇಲೆ ಬಿಡಬೇಕು ತಾನೆ ಎಂದು ಅಣಕಿಸಿದರು.

ಪೆನ್‌ಡ್ರೈವ್ ಬಗ್ಗೆ ಆರೋಪ ಮಾಡಿದ ನಂತರ ವಿಧಾನಸಭಾ ಅಧಿವೇಶನ ನಡೆದಿದೆ. ಅಲ್ಲೇ ಪೆನ್‌ಡ್ರೈವ್‌ನಲ್ಲಿರುವ ಮಾಹಿತಿ ಬಿಡುಗಡೆ ಮಾಡಬಹುದಿತ್ತಲ್ಲವೇ? ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಈ ತನಕ ಮಾಡಿರುವ ಒಂದೇ ಒಂದು ಆರೋಪವನ್ನು ಕುಮಾರಸ್ವಾಮಿ ಸಾಬೀತು ಮಾಡಿಲ್ಲ. ಕುಮಾರಸ್ವಾಮಿಗೆ ಬರೀ ದ್ವೇಷ,



ಅಸೂಯೆ, ಹೊಟ್ಟೆಕಿಚ್ಚು, ಹೊಟ್ಟೆ ಉರಿ ಎಂದೆಲ್ಲಾ ದೂರಿ, ತಿರುಗೇಟು ನೀಡಿದರು.

ಕುಮಾರಸ್ವಾಮಿ ಅವರ ಪಂಚರತ್ನ ಏನಾಯಿತು, 38 ಇದ್ದ ಶಾಸಕರ ಸ್ಥಾನ ಈಗ 19ಕ್ಕೆ ಬಂದಿದೆ. ಇದರಿಂದ ಹತಾಶರಾಗಿ ಏನೇನೋ ಮಾತನಾಡುತ್ತಿದ್ದಾರೆ. ಸುಖಾಸುಮ್ಮನೆ ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ವಿದ್ಯುತ್ ಕಳವು ಮಾಡಿದ್ದ ಕುಮಾರಸ್ವಾಮಿಗೆ ನಮ್ಮ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಕುಮಾರಸ್ವಾಮಿ ವಿದ್ಯುತ್ ಕಳುವು ಮಾಡಿರುವುದು ಸತ್ಯ ತಾನೆ, ದಂಡ ಪಾವತಿ ಮಾಡಿರುವುದು ಸತ್ಯ ತಾನೆ, ವಿದ್ಯುತ್ ಕಳವು ಮಾಡಿರುವುದನ್ನು ಕುಮಾರಸ್ವಾಮಿಯೇ ಒಪ್ಪಿಕೊಂಡಿರುವುದು ಸತ್ಯ ತಾನೆ, ಇಂತಹವರಿಂದ ನಾವು ಪಾಠ ಹೇಳಿಸಿಕೊಳ್ಳಬೇಕೇ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಆ ವಿವೇಕಾನಂದನೇ ಬೇರೆ... ಈ ವಿವೇಕಾನಂದನೇ ಬೇರೆ...

ತಮ್ಮ ಪುತ್ರ ಯತೀಂದ್ರ ಹೇಳಿರುವ ವಿವೇಕಾನಂದನೇ ಬೇರೆ, ನಿನ್ನೆ ವರ್ಗಾವಣೆಗೊಂಡಿರುವ ಪೊಲೀಸ್ ಇನ್ಸ್‌ಪೆಕ್ಟರ್ ವಿವೇಕಾನಂದನೇ ಬೇರೆ ಎಂದು ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು.

ಯತೀಂದ್ರ ಹೇಳಿರುವ ವಿವೇಕಾನಂದ ನಮ್ಮ ಕ್ಷೇತ್ರದ ಬಿಇಒ. ಆದರೆ ವರ್ಗಾವಣೆ ಮಾಡಿಸಿಕೊಂಡಿರುವ ವಿವೇಕಾನಂದನ ಬಗ್ಗೆ ಸ್ಥಳೀಯ ಶಾಸಕರನ್ನು ಕೇಳಿ ಎಂದರು.

ಕುಮಾರಸ್ವಾಮಿ ಮಾಡಿರುವ ಆರೋಪವನ್ನೆಲ್ಲಾ ಕೇಳಬೇಕು ಅಂತ ಇಲ್ಲ. ವಿಧಾನಸಭಾ ಅಧಿವೇಶನದಲ್ಲಿ ಇದಕ್ಕೆ ತಕ್ಕ ಉತ್ತರ ಕೊಡುತ್ತೇನೆ. ಪದೇ ಪದೆ ಕುಮಾರಸ್ವಾಮಿಯವರ ಆರೋಪಗಳಿಗೆ ಪ್ರತಿಕ್ರಿಯೆ ಕೊಡುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಕಬ್ಬು ಬೆಳೆಗಾರರ ಬೇಡಿಕೆ: ನ.21ರಂದು ಸಕ್ಕರೆ ಕಾರ್ಖಾನೆ ಮಾಲೀಕರ ಸಭೆ

ಸಿಎಂ ಸಿದ್ದರಾಮಯ್ಯ ಭರವಸೆ

ಮೈಸೂರು, ನ.18(ಬಿಎಲ್‌ಯು)– ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ನ.21ರಂದು ಬೆಂಗಳೂರಿನಲ್ಲಿ ಸಕ್ಕರೆ ಮಾಲೀಕರ ಸಭೆ ಕರೆಯುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಮೈಸೂರಿನಲ್ಲಿಂದು ಕಬ್ಬು ಬೆಳೆಗಾರರ ಸಂಘದ ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ವೇಳೆ ಈ ಆಶ್ವಾಸನೆ ನೀಡಿದ್ದಾರೆ. ಪ್ರತಿ ಟನ್ ಕಬ್ಬಿಗೆ 150 ರೂ. ಹೆಚ್ಚುವರಿ ಬೆಲೆ ನೀಡುವುದಾಗಿ ಸಕ್ಕರೆ ಕಾರ್ಖಾನೆ ಮಾಲೀಕರು ಒಪ್ಪಿಕೊಂಡಿದ್ದರು. ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನವಾಗಿತ್ತು. ಆದರೆ ಈಗ ಹೆಚ್ಚುವರಿ ಹಣ ಕೊಡದೆ ಕಬ್ಬು ಬೆಳೆಗಾರರಿಗೆ ಮೋಸ ಮಾಡಿದ್ದಾರೆ ಎಂದು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಪಾದಿಸಿದರು.

ನ.21ರಂದು ಸಕ್ಕರೆ ಕಾರ್ಖಾನೆ ಮಾಲೀಕರು, ಸಕ್ಕರೆ ಸಚಿವರು ಹಾಗೂ ಇಲಾಖೆ ಕಾರ್ಯದರ್ಶಿಗಳ ಸಭೆ ಕರೆದು ನಿಮ್ಮ ಬೇಡಿಕೆ ಈಡೇರಿಸುತ್ತೇನೆ ಎಂದರು.

ರಾಜ್ಯದ 226 ತಾಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಲಾಗಿದೆ. ಇನ್ನು ಪರಿಹಾರ ನೀಡಿಲ್ಲ. ಸಂಕಷ್ಟದಲ್ಲಿರುವ ರೈತರಿಗೆ ಕೂಡಲೇ ಪರಿಹಾರ ನೀಡಬೇಕೆಂಬುದು ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಸಿದ್ದರಾಮಯ್ಯಗೆ ಈ ವೇಳೆ ಮನವಿ ಮಾಡಿದರು. ಜಿಲ್ಲೆಯಾದ್ಯಂತ ರೈತ ಮುಖಂಡರನ್ನು ಪೊಲೀಸರು ಕ್ರಿಮಿನಲ್‌ಗಳಂತೆ ಬಂಧಿಸುತ್ತಾರೆ. ಇಂತಹ ಘಟನೆ ಪುನಾರಾವರ್ತನೆ ಆಗದಂತೆ ಪೊಲೀಸರಿಗೆ ಎಚ್ಚರಿಕೆ ನೀಡುವಂತೆ ಆಗ್ರಹಿಸಿದರು.

ರೈತ ಮುಖಂಡರಾದ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಹಳ್ಳಿಕೆರೆಹುಂಡಿ ಭಾಗ್ಯರಾಜ್, ಚುಂಚರಾಯನಹುಂಡಿ ಸಿದ್ದರಾಮಯ್ಯ ನಿಯೋಗದಲ್ಲಿದ್ದರು.

ತರುವಾಯ ಪತ್ರಕರ್ತರ ಜೊತೆ ಮಾತನಾಡಿದ ಕುರುಬೂರು ಶಾಂತಕುಮಾರ್, ನಮ್ಮ ಬೇಡಿಕೆ ಈಡೇರಿಸುವಂತೆ ಸಿದ್ದರಾಮಯ್ಯಗೆ ಮನವಿ ಮಾಡಿದ್ದೇವೆ. ಒಂದು ವೇಳೆ ಬೇಡಿಕೆ ಈಡೇರದಿದ್ದರೆ ಡಿ.4ರಂದು ಬೆಳಗಾವಿಯಲ್ಲಿ ನಡೆಯುವ ವಿಧಾನಸಭಾ ಅಧಿವೇಶನದ ವೇಳೆ ತೀವ್ರ ರೀತಿಯ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಸಿದರು.

ಗೋವಾ ಪ್ರವಾಸಿಗರ ಚಿನ್ನಾಭರಣದ ಬ್ಯಾಗ್‌ನೊಂದಿಗೆ ಪರಾರಿಯಾಗಿದ್ದ ಆಟೋ ಚಾಲಕನ ಸೆರೆ

ಆಟೋ ಮೇಲಿದ್ದ ಶಿವನ ಚಿತ್ರ, ಕೆಲ ಆಟೋ ಚಾಲಕರ ಸುಳಿವಿನ ಮೇರೆಗೆ 24 ಗಂಟೆಯೊಳಗೆ ಆರೋಪಿ ಬಂಧಿಸಿ 10 ಲಕ್ಷ ರೂ. ಮೌಲ್ಯದ ಆಭರಣ ವಶಪಡಿಸಿಕೊಂಡ ದೇವರಾಜ ಠಾಣೆ ಪೊಲೀಸರು



ದೇವರಾಜ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಪ್ರಭು ಗೋವಾದ ವಿಪಿನ್ ಪ್ರಕಾಶ್ ಕುನ್ರೆ ಅವರಿಗೆ ಆಭರಣಗಳನ್ನು ಹಸ್ತಾಂತರಿಸುತ್ತಿರುವುದು.

ಮೈಸೂರು,ನ.18(ಆರ್‌ಕೆ)– ಮೈಸೂರಲ್ಲಿ ಗೋವಾ ಪ್ರವಾಸಿಗರ ಚಿನ್ನಾಭರಣದ ಬ್ಯಾಗ್‌ನೊಂದಿಗೆ ಪರಾರಿಯಾಗಿದ್ದ ಆಟೋ ಚಾಲಕನನ್ನು 24 ಗಂಟೆಯೊಳಗೆ ದೇವರಾಜ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಜಯನಗರ ನಿವಾಸಿ ರಾಜು ಅವರ ಮಗ ಪ್ರಮೋದ್ ಆರೋಪಿಯಾಗಿದ್ದು, ಆತನಿಂದ 10 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಗೋವಾದಿಂದ ಪ್ರವಾಸಕ್ಕೆಂದು ಮೈಸೂರಿಗೆ ಬಂದಿದ್ದ ವಿಪಿನ್ ಪ್ರಕಾಶ್ ಕುನ್ರೆ, ಪತ್ನಿ ಶ್ರೇಯಾ ಮಗುವಿನೊಂದಿಗೆ ನವೆಂಬರ್ 14ರಂದು ಮಧ್ಯಾಹ್ನ 12.30 ಗಂಟೆ ವೇಳೆಗೆ ಅರಮನೆ ನೋಡಲೆಂದು ಕಾರನ್ನು ದೂರದಲ್ಲಿ ನಿಲ್ಲಿಸಿ ಆಟೋದಲ್ಲಿ ವರಹಾ ಗೇಟ್ ಬಳಿ ಬಂದಿಳಿದಿದ್ದರು.

ಆಟೋ ಡ್ರೈವರ್‌ಗೆ ಹಣ ಕೊಟ್ಟು, ಪತ್ನಿ ಮಗು ಎತ್ತಿಕೊಂಡು ಬ್ಯಾಗ್ ತೆಗೆದುಕೊಳ್ಳುವಷ್ಟರಲ್ಲಿ ಚಾಲಕ ಬ್ಯಾಗ್‌ನೊಂದಿಗೆ ಆಟೋದಲ್ಲಿ ಪರಾರಿಯಾಗಿದ್ದ. ಆಟೋದಲ್ಲಿ ಬ್ಯಾಗ್ ಇದೆ ಎಂದು ಜೋರಾಗಿ ಕೂಗಿಕೊಂಡರೂ ನಿಲ್ಲಿಸದೆ ಚಾಲಕ ಹೊರಟು ಹೋಗಿದ್ದ. ಆಟೋ ಸಂಖ್ಯೆ 0880 ಎಂದಷ್ಟೇ ನೋಡಿದ ವಿಪಿನ್ ಪ್ರಕಾಶ್, ಆಟೋ ಮುಂಭಾಗ ಶಿವನ ಚಿತ್ರವಿದೆ ಎಂಬ ಗುರುತು ಮಾಡಿಕೊಂಡಿದ್ದರು.

ಸುತ್ತಮುತ್ತ ಯಾವುದೇ ಸುಳಿವು ಸಿಗದಿದ್ದ ಕಾರಣ, ಗೋವಾ ದಂಪತಿ ದೇವರಾಜ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಸಬ್‌ಇನ್ಸ್‌ಪೆಕ್ಟರ್ ಪ್ರಭು, ತನಿಖೆ ಆರಂಭಿಸಿ, ಕೆಲ ಆಟೋ ಚಾಲಕರು ನೀಡಿದ ಸುಳಿವು ಹಾಗೂ ಅರೆಬರೆ ನೋಂದಣಿ ಸಂಖ್ಯೆ ಮತ್ತು ಆಟೋ ಮುಂಭಾಗ ಇದ್ದ ಶಿವನ ಚಿತ್ರದ ಆಧಾರದ ಮೇಲೆ ಚಿನ್ನಾಭರಣದೊಂದಿಗೆ ಪರಾರಿಯಾಗಿದ್ದ ಆರೋಪಿ ಪ್ರಮೋದ್‌ನನ್ನು ಒಂದೇ ದಿನದೊಳಗೆ ಬಂಧಿಸಿದ್ದಾರೆ.

ಆತನಿಂದ ಚಿನ್ನದ ಮಾಂಗಲ್ಯ ಸರ, ಎರಡು ಸರ, ಒಂದು ಕುತ್ತಿಗೆ ಸರ, ನಾಲ್ಕು ಬಳೆ, ಉಂಗುರಗಳು ಸೇರಿ ಒಟ್ಟು 10 ಲಕ್ಷ ರೂ. ಮೌಲ್ಯದ 190 ಗ್ರಾಂ ಚಿನ್ನಾಭರಣ ಹಾಗೂ 2 ಸ್ಟ್ರೋಕ್ ಆಟೋ (ಕೆಎ 09–ಎ 0880)ವನ್ನು ಪೊಲೀಸರು ವಶಪಡಿಸಿಕೊಂಡರು. ಬ್ಯಾಗ್‌ನೊಂದಿಗೆ ನೇರವಾಗಿ ಮನೆಗೆ ಹೋಗಿದ್ದ ಪ್ರಮೋದ್, ಪತ್ನಿ, ತಾಯಿ, ಸಹೋದರಿಗೆ ಕೆಲ ಆಭರಣಗಳನ್ನು ಕೊಟ್ಟು ಉಳಿದವನ್ನು ಮನೆಯಲ್ಲೇ ಬಚ್ಚಿಟ್ಟಿದ್ದ ಎಂದು ವಿಚಾರಣೆ ನಡೆಸಿದ ಪೊಲೀಸರು ತಿಳಿಸಿದ್ದಾರೆ.

ವಶಪಡಿಸಿಕೊಂಡ ಚಿನ್ನಾಭರಣಗಳನ್ನು ನ್ಯಾಯಾಲಯದ ಅನುಮತಿ ಪಡೆದು ನ.17ರಂದು ಗೋವಾ ಪ್ರವಾಸಿಗ ವಿಪಿನ್ ಪ್ರಕಾಶ್ ಕುನ್ರೆ ಅವರಿಗೆ ಸಬ್‌ಇನ್ಸ್‌ಪೆಕ್ಟರ್ ಪ್ರಭು ಠಾಣೆಯಲ್ಲಿ ಹಸ್ತಾಂತರಿಸಿದರು. ಆರೋಪಿ ಪ್ರಮೋದ್‌ನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಡಿಸಿಪಿ ಎಸ್.ಜಾಹ್ನವಿ ನಿರ್ದೇಶನದಂತೆ ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ಮಾರ್ಗದರ್ಶನದಲ್ಲಿ ದೇವರಾಜ ಠಾಣೆ ಇನ್ಸ್‌ಪೆಕ್ಟರ್ ಟಿ.ಬಿ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯದಲ್ಲಿ ಸಬ್‌ಇನ್ಸ್‌ಪೆಕ್ಟರ್ ಪ್ರಭು, ಸಿಬ್ಬಂದಿಗಳಾದ ಮಂಜು, ಸುರೇಶ್ ಹಾಗೂ ಇತರರು ಪಾಲ್ಗೊಂಡಿದ್ದರು. ಈ ಪತ್ತೆ ಕಾರ್ಯವನ್ನು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಶ್ಲಾಘಿಸಿದ್ದಾರೆ.


ಕನಿಷ್ಠ ವೇತನ ಕಾಯ್ದೆಯಡಿ ವೇತನ ಪಾವತಿ ಕಡ್ಡಾಯ

ಮೈಸೂರು, ನ. 18– ಮೂಲ ಮಾಲೀಕರು ತಮ್ಮಲ್ಲಿ ನಿಯೋಜನೆಗೊಂಡ ಕಾರ್ಮಿಕರಿಗೆ ಕಾಲಕಾಲಕ್ಕೆ ಹೊರಡಿಸುವ ಕಾರ್ಮಿಕ ಇಲಾಖೆಯ ಅಧಿಸೂಚನೆಗಳನ್ವಯ, ಕನಿಷ್ಠ ವೇತನ ಕಾಯ್ದೆಯಡಿ ವೇತನವನ್ನು ಪಾವತಿ ಮಾಡುವಂತದ್ದು ಕಡ್ಡಾಯವಾಗಿರುತ್ತದೆ. ಈ ನಿಟ್ಟಿನಲ್ಲಿ ಮೂಲ ಮಾಲೀಕರು ಕ್ರಮಕೈಗೊಂಡು ಕಾಯ್ದೆಯ ಕಡ್ಡಾಯ ಪಾಲನೆಯನ್ನು ಮಾಡಬೇಕಾಗಿರುತ್ತದೆ. ಆದ ಕಾರಣ ಎಲ್ಲಾ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಯ ಮಾಲೀಕರು, ಹೋಟೆಲ್ ಮಾಲೀಕರು, ವಿವಿಧ ಸರ್ಕಾರಿ ಇಲಾಖೆಗಳು, ಕೈಗಾರಿಕಾ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ಕನಿಷ್ಠ ವೇತನ ಕಾಯ್ದೆಯಡಿ ವೇತನವನ್ನು ಪಾವತಿ ಮಾಡಬೇಕು. ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಇಲಾಖೆಯ ಸಹಾಯವಾಣಿ 155214 ಗೆ ಅಥವಾ ಹತ್ತಿರದ ಕಾರ್ಮಿಕ ಇಲಾಖೆಯ ಕಚೇರಿಯನ್ನು ಸಂಪರ್ಕಿಸಬಹುದು.

ನ.23ಕ್ಕೆ ಸಾಂಸ್ಕೃತಿಕ ಸ್ಪರ್ಧೆ

ಮೈಸೂರು, ನ. 18– 2023ರ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ನವೆಂಬರ್ 21 ರಂದು ಅಂಧ ಹಾಗೂ ಕಿವುಡು ಮಕ್ಕಳ ಸರ್ಕಾರಿ ಪಾಠಶಾಲೆ ತಿಲಕ್ ನಗರದಲ್ಲಿ ಏರ್ಪಡಿಸಲಾಗಿದ್ದ, ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ನವೆಂಬರ್ 23ಕ್ಕೆ ಮುಂದೂಡಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ವೀರ್ ಸಾವರ್ಕರ್ ಫೋಟೋ ತೆಗೆದರೆ ಪ್ರತಿಭಟನೆ ನಡೆಸುವುದಾಗಿ ಬಿಜೆಪಿ ಎಚ್ಚರಿಕೆ



ಬೆಂಗಳೂರು,ನ.18–ವಿಧಾನಸಭೆಯಲ್ಲಿ ಈ ಹಿಂದೆ ಬಿಜೆಪಿ ಸರ್ಕಾರ ಅಳವಡಿಸಿದ್ದ ವೀರ್ ಸಾವರ್ಕರ್ ಅವರ ಫೋಟೋ ತೆಗೆಯದಂತೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ್, ಕಾಂಗ್ರೆಸ್ ಸರ್ಕಾರ ವೀರ ಸಾವರ್ಕರ್ ಅವರ ಭಾವಚಿತ್ರವನ್ನು ತೆಗೆದುಹಾಕಿ, ಮಾಜಿ ಪ್ರಧಾನಿ ದಿವಂಗತ ಜವಾಹರಲಾಲ್ ನೆಹರು ಅವರ ಭಾವಚಿತ್ರವನ್ನು ಅಳವಡಿಸಲು ಯೋಜಿಸಿದೆ. ಆದರೆ ಸಾವರ್ಕರ್ ಅವರು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಜೈಲುವಾಸ ಅನುಭವಿಸಿದ ದೇಶಪ್ರೇಮಿ ಎಂದರು. ನೆಹರೂ ಭಾವಚಿತ್ರ ಅಳವಡಿಸುವುದು ವಂಶಪಾರಂಪರ್ಯ ರಾಜಕಾರಣದ ವೈಭವೀಕರಣ ಎಂದು ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಸರ್ಕಾರವು ಕರ್ನಾಟಕದಲ್ಲಿ ಅಜ್ಜ, ತಾಯಿ, ಮಗ ಮತ್ತು ಮೊಮ್ಮಗನ ಫೋಟೋಗಳನ್ನು ಮಾತ್ರ ಹಾಕಲು ಬಯಸುತ್ತದೆ. ಒಂದು ವೇಳೆ ಸಾವರ್ಕರ್ ಫೋಟೋ ತೆಗೆದರೆ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತೇವೆ ಎಂದರು.

ವಸತಿ ಸಚಿವ ಜಮೀರ್ ಅಹ್ಮದ್ ಅವರು ಕೋಮುವಾದಿ ಹೇಳಿಕೆ ನೀಡಿದ್ದಾರೆ. ಸ್ಪೀಕರ್ ಮುಸ್ಲಿಂ ಎಂದು ಹೇಳಿಕೆ ನೀಡಿದ್ದು, ಅವರಿಗೆ ನಮನ ಸಲ್ಲಿಸುವಂತೆ ಕಾಂಗ್ರೆಸ್ ನಮಗೆ ಒತ್ತಾಯಿಸುತ್ತಿದೆ. ಆದರೆ, ನಾವು ಅವರ ಸ್ಥಾನಕ್ಕೆ ಗೌರವ ನೀಡುತ್ತೇವೆ ಎಂದರು. 2022ರಲ್ಲಿ ಹಿಂದಿನ ಬಿಜೆಪಿ ಸರ್ಕಾರ ಚಳಿಗಾಲದ ಅಧಿವೇಶನದ ಮೊದಲ ದಿನ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ವೀರ್ ಸಾವರ್ಕರ್ ಅವರ ಭಾವಚಿತ್ರವನ್ನು ಅನಾವರಣಗೊಳಿಸಿತ್ತು. ಅದನ್ನು ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ ನಡೆಸಿತ್ತು.

ಫೈನಾನ್ಸ್‌ನಲ್ಲಿ ಕಳವು ಮಾಡಿದ್ದ ಖದೀಮನಿಗೆ 3 ವರ್ಷ ಜೈಲು

ಮೈಸೂರು,ನ.18–ಫೈನಾನ್ಸ್‌ನಲ್ಲಿ ಚಿನ್ನಾಭರಣ, ನಗದು ಕಳವು ಮಾಡಿದ್ದ ಖದೀಮನಿಗೆ ಮೈಸೂರಿನ 3ನೇ ಜೆಎಂಎಫ್‌ಸಿ ನ್ಯಾಯಾಲಯ 3 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ನಂಜನಗೂಡು ತಾಲೂಕು ತುಮ್ಮನೇರಳೆ ಗ್ರಾಮದ ನಾಗೇಂದ್ರ ಶಿಕ್ಷೆಗೆ ಗುರಿಯಾದವನಾಗಿದ್ದು, ಈತ 2013ರ ಜ.5ರಂದು ಮೈಸೂರಿನ ಟೆರೇಷಿಯನ್ ಕಾಲೇಜು ಎದುರಿಗಿರುವ ನಿಧಿ ಗೋಲ್ಡ್ ಮಣಿಪಾಲ್ ಫೈನಾನ್ಸ್‌ಗೆ ಅತಿಕ್ರಮ ಪ್ರವೇಶ ಮಾಡಿ ಕ್ಯಾಷ್ ಬಾಕ್ಸ್‌ನಲ್ಲಿದ್ದ 151 ಗ್ರಾಂ ತೂಕದ ಚಿನ್ನಾಭರಣ ಹಾಗೂ 2,32,133 ರೂ. ನಗದು ಕಳವು ಮಾಡಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ನಜರ್‌ಬಾದ್ ಠಾಣೆಯ ಅಂದಿನ ಇನ್ಸ್‌ಪೆಕ್ಟರ್ ಕೆ.ಸಿ.ಪೂವಯ್ಯ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರಾದ ಬಿ.ಸಿ. ರಾಜೇಶ್ ವಾದ ಮಂಡಿಸಿದ್ದರು.

ನ.29ಕ್ಕೆ ಜನತಾ ದರ್ಶನ ಕಾರ್ಯಕ್ರಮ ಮುಂದೂಡಿಕೆ

ಮೈಸೂರು,ನ.18–ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕರ ಅಹವಾಲುಗಳಿಗೆ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನಲ್ಲಿ ನ.20 ರಂದು ಆಯೋಜಿಸಿದ್ದ ಜನತಾ ದರ್ಶನ ಕಾರ್ಯಕ್ರಮವನ್ನು ನ.29 ಬೆಳಗ್ಗೆ 10 ಗಂಟೆಗೆ ಮುಂದೂಡಲಾಗಿದ್ದು, ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ, IPGRS ತಂತ್ರಾಂಶದಲ್ಲಿ ದಾಖಲಾಗಿರುವ ಅರ್ಜಿಗಳ ಮಾಹಿತಿಯೊಂದಿಗೆ ಖುದ್ದು ಹಾಜರಿರುವಂತೆ ಅಪರ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಮೈಸೂರಿಗೆ ಬಿಜೆಪಿ ನೂತನ ರಾಜ್ಯಾಧ್ಯಕ್ಷ ವಿಜಯೇಂದ್ರ ಭೇಟಿ

ಎರಡು ದಿನದ ಪ್ರವಾಸದಲ್ಲಿ ಮಠಾಧೀಶರು, ಸಾಹಿತಿಗಳು, ಬಿಜೆಪಿ ಹಿರಿಯ ಮುಖಂಡರ ಭೇಟಿ

ಮೈಸೂರು, ನ.18(ಬಿಎಲ್‌ಯು)– ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಾಳೆ (ನವೆಂಬರ್ 19) ಮೈಸೂರಿಗೆ ಆಗಮಿಸುತ್ತಿದ್ದು, ಮಠಾಧೀಶರು, ಸಾಹಿತಿಗಳು ಹಾಗೂ ಬಿಜೆಪಿ ಮುಖಂಡರನ್ನು ಭೇಟಿ ಮಾಡಲಿದ್ದಾರೆ.

ನಾಳೆ ಮಧ್ಯಾಹ್ನ 1.50 ಗಂಟೆಗೆ ಮೈಸೂರಿಗೆ ಆಗಮಿಸುವ ವಿಜಯೇಂದ್ರ, ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಜಯಲಕ್ಷ್ಮಿಪುರಂನ ಅವರ ನಿವಾಸದಲ್ಲಿ ಭೇಟಿ ಮಾಡಲಿದ್ದಾರೆ.

ನಂತರ 2.30 ಗಂಟೆಗೆ ಲಕ್ಷ್ಮಿಪುರಂನ ಜೆಎಲ್‌ಬಿ ರಸ್ತೆಯಲ್ಲಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಾಲಯಕ್ಕೆ ಭೇಟಿ ನೀಡುವರು.

ತರುವಾಯ 4 ಗಂಟೆಗೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಆಶೀರ್ವಾದ ಪಡೆಯಲಿದ್ದಾರೆ. ಸಂಜೆ 5 ಗಂಟೆಗೆ ಚಾಮುಂಡಿಬೆಟ್ಟದ ಪಾದದ ಬಳಿ ಇರುವ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡುವ ವಿಜಯೇಂದ್ರ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆಯಲಿದ್ದಾರೆ. ರಾತ್ರಿ ಕೆಲವು ಖಾಸಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದಾರೆ.



ನವೆಂಬರ್ 20ರಂದು ಬೆಳಿಗ್ಗೆ 9.10 ಗಂಟೆಗೆ ಕುವೆಂಪುನಗರದಲ್ಲಿರುವ ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ನಿವಾಸಕ್ಕೆ ವಿಜಯೇಂದ್ರ ಭೇಟಿ ನೀಡಲಿದ್ದಾರೆ. ನಂತರ ನಗರ ಬಿಜೆಪಿ ಕಚೇರಿಗೆ ಭೇಟಿ ನೀಡಿ ಪತ್ರಿಕಾಗೋಷ್ಠಿ ನಡೆಸುವರು.

11 ಗಂಟೆಗೆ ಬಿಜೆಪಿ ಬೂತ್ ಅಧ್ಯಕ್ಷರ ನಿವಾಸಕ್ಕೆ ಭೇಟಿ, 11.40 ಗಂಟೆಗೆ ಯಾದವಗಿರಿಯ ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಲಿದ್ದಾರೆ. ಮಧ್ಯಾಹ್ನ 12.20 ಗಂಟೆಗೆ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿದ ನಂತರ, 12.40 ಗಂಟೆಗೆ ಮಾಜಿ ವಿಧಾನ ಪರಿಷತ್ ಸದಸ್ಯ ತೋಂಟದಾರ್ಯ ಭೇಟಿಯಾಗಲಿದ್ದಾರೆ.

ಅಂತಿಮವಾಗಿ ಮಧ್ಯಾಹ್ನ 1 ಗಂಟೆಗೆ ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ರಾಜೇಂದ್ರ ಕಲಾಮಂದಿರದಲ್ಲಿ ಕಾರ್ಯಕರ್ತರ ಸಭೆಯಲ್ಲಿ ಬಿ.ವೈ.ವಿಜಯೇಂದ್ರ ಪಾಲ್ಗೊಳ್ಳಲಿದ್ದಾರೆ. ಮೈಸೂರಿನ ಎರಡು ದಿನಗಳ ಕಾರ್ಯಕ್ರಮದ ನಂತರ ವಿಜಯೇಂದ್ರ ಮಂಡ್ಯಕ್ಕೆ ತೆರಳುವರು.

ಮೈಸೂರು ವಿವಿ ಪ್ರಾಧ್ಯಾಪಕ ಡಾ.ಕೆ.ಎನ್.ಅಮೃತೇಶ್ ನ್ಯಾಷನಲ್ ಅಕಾಡೆಮಿ ಆಫ್ ಬಯೋಲಜಿಕಲ್ ಸೈನ್ಸಸ್‌ನ ಗೌರವ ಫೆಲೋಶಿಪ್‌ಗೆ ಭಾಜನ



ಡಾ.ಅಮೃತೇಶ್

ಮೈಸೂರು,ನ.18– ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರು ಹಾಗೂ ಆಂತರಿಕ ಗುಣಮಟ್ಟ ಖಾತರಿ ಘಟಕದ (ಐ.ಕ್ಯೂಎಸಿ.) ನಿರ್ದೇಶಕ ಡಾ.ಕೆ.ಎನ್.ಅಮೃತೇಶ್, 2022ನೇ ಸಾಲಿನ ಪ್ರತಿಷ್ಠಿತ 'ನ್ಯಾಷನಲ್ ಅಕಾಡೆಮಿ ಆಫ್ ಬಯೋಲಾಜಿಕಲ್ ಸೈನ್ಸಸ್'ನ (ಎಫ್‌ಎನ್‌ಎಬಿಎಸ್) ಗೌರವ ಫೆಲೋಶಿಪ್‌ಗೆ ಭಾಜನರಾಗಿದ್ದಾರೆ.

ಕೃಷಿ ವಿಜ್ಞಾನ ಹಾಗೂ ಅರಣ್ಯಶಾಸ್ತ್ರ ಕ್ಷೇತ್ರಕ್ಕೆ ಇವರು ಸಲ್ಲಿಸಿರುವ ಗುರುತರ ಸೇವೆಯನ್ನು ಪರಿಗಣಿಸಿ, ಈ ಗೌರವ ಫೆಲೋಶಿಪ್ ಅನ್ನು ನೀಡಲಾಗಿದೆ. ಕಳೆದ ಸಾಲಿನಲ್ಲೂ ಕೃಷಿ ವಿಜ್ಞಾನ ಕ್ಷೇತ್ರಕ್ಕೆ ನೀಡಿರುವ ಇವರ ಗಣನೀಯ ಕೊಡುಗೆಯನ್ನು ಗುರುತಿಸಿ, ಕರ್ನಾಟಕ ಸರ್ಕಾರ 'ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಫೆಲೋಶಿಪ್ (ಎಫ್‌ಕೆಎಸ್‌ಟಿಎ)' ನೀಡಿತ್ತು.


ಡಾ.ಅಮೃತೇಶ್, ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಫೆಲೋಶಿಪ್ ಪಡೆದು, ಮೈಸೂರು ವಿವಿಯ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಪಿಹೆಚ್.ಡಿ ಪದವಿಯನ್ನು ಪೂರ್ಣಗೊಳಿಸಿ, ಅಮೇರಿಕಾದ ನಾರ್ತ್ ಟೆಕ್ಸಾಸ್ ವಿಶ್ವವಿದ್ಯಾನಿಲಯದಿಂದ ಪೋಸ್ಟ್ ಡಾಕ್ಟರಲ್ ಪದವಿಯನ್ನು ಪಡೆದಿರುತ್ತಾರೆ. ಆಹಾರ ಬೆಳೆಗಳಿಗೆ ಜೈವಿಕ ತಂತ್ರಜ್ಞಾನದ ಅಳವಡಿಕೆ, ಸಸ್ಯ–ರೋಗಾಣುಗಳ ನಡುವಿನ ಸಂಬಂಧ ಮತ್ತು ಪ್ರಭೇದ ಹಾಗೂ 2 ದ್ವಿದಳ ಧಾನ್ಯಗಳ ಪರಾವಲಂಬಿ ಸಸ್ಯಗಳನ್ನು ವಿಜ್ಞಾನ ಕ್ಷೇತ್ರಕ್ಕೆ ಪರಿಚಯಿಸಿದ್ದಾರೆ. ಆಹಾರ ಬೆಳೆಗಳಿಗೆ ಎದುರಾಗುವ ಹಲವು ತೀವ್ರತರ ಸಮಸ್ಯೆಗಳ ನಿರ್ವಹಣೆಯಲ್ಲಿ, ಅನುವಂಶಿಕ ಮಾರ್ಗಗಳು ಹಾಗೂ ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಆಹಾರ ಭದ್ರತೆಯನ್ನು ಕಾಯ್ದುಕೊಳ್ಳಲು ಇವರ ಸಂಶೋಧನೆಯು ಕೇಂದ್ರೀಕೃತವಾಗಿದೆ. ಡಾ. ಅಮೃತೇಶ್ ಸಸ್ಯಾರೋಗ್ಯದ ಸುಧಾರಣೆಗಾಗಿ ನ್ಯಾನೋ ತಂತ್ರಜ್ಞಾನ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡು, ಔಷಧೀಯ ಅನ್ವಯಿಕೆಗಳಿಗಾಗಿ ಸಸ್ಯ ಸಂಪನ್ಮೂಲಗಳಲ್ಲಿನ ನ್ಯಾನೋ ಪಾರ್ಟಿಕಲ್‌ಗಳನ್ನು ಬಳಸುವ ಮತ್ತು ಸಂಶ್ಲೇಷಿಸುವಲ್ಲಿ ನಿರತರಾಗಿದ್ದಾರೆ.

ಡಾ.ಅಮೃತೇಶ್ ಅಂತಾರಾಷ್ಟ್ರೀಯ ಮಟ್ಟದ ಅತ್ಯುನ್ನತ ವಿಜ್ಞಾನ ನಿಯತಕಾಲಿಕೆಗಳಲ್ಲಿ 130 ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಇವರು ಸಸ್ಯಾ ರೋಗ್ಯ ಕ್ಷೇತ್ರದಲ್ಲಿ 4 ಪೇಟೆಂಟ್ ಹೊಂದಿದ್ದು, 12 ಪುಸ್ತಕ ಅಧ್ಯಾಯಗಳನ್ನು ಬರೆದು, 14 ಸಂಶೋಧನಾ ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪದವಿಗಾಗಿ, 3 ಪೋಸ್ಟ್ ಡಾಕ್ಟರಲ್ ವಿದ್ಯಾರ್ಥಿಗಳಿಗೆ ಹಾಗೂ 4 ಸಂಶೋಧಕರಿಗೆ ಎಂ.ಫಿಲ್ ಪದವಿಗಾಗಿ ಮಾರ್ಗದರ್ಶನ ನೀಡಿರುತ್ತಾರೆ. ಡಾ.ಕೆ.ಎನ್. ಅಮೃತೇಶ್ ಅವರಿಗೆ ರಾಷ್ಟ್ರೀಯ ವಿಜ್ಞಾನ ಕಾಂಗ್ರೆಸ್‌ನ 'ಯುವ ವಿಜ್ಞಾನಿ ಪ್ರಶಸ್ತಿ', 'ಡಿಎಸ್‌ಟಿ ಯುವ ವಿಜ್ಞಾನಿ ಪ್ರಶಸ್ತಿ', 'ಡಿಬಿಟಿ –ಕ್ರೆಸ್ಟ್ ಅಂತಾರಾಷ್ಟ್ರೀಯ ಪ್ರಶಸ್ತಿ', 'ಡಾ.ಎಪಿಜೆ ಅಬ್ದುಲ್ ಕಲಾಂ ಅತ್ಯುತ್ತಮ ಪ್ರಾಧ್ಯಾಪಕ ಪ್ರಶಸ್ತಿ' ಮುಂತಾದ ಪ್ರಶಸ್ತಿ–ಪುರಸ್ಕಾರಗಳೂ ಸಂದಿವೆ.

ಪಾರ್ಟ್ ಟೈಂ ಜಾಬ್ ಆಸೆಯಿಂದ 5.53 ಲಕ್ಷ ಕಳೆದುಕೊಂಡ ಯುವತಿ

ಮೈಸೂರು,ನ.18–ಪಾರ್ಟ್ ಟೈಂ ಜಾಬ್ ನೀಡುವುದಾಗಿ ನಂಬಿಸಿ ಯುವತಿಗೆ ಆನ್‌ಲೈನ್ ಮೂಲಕ 5.53 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ವಿದ್ಯಾನಗರ ನಿವಾಸಿ ಎಂ.ಸೌಜನ್ಯ ವಂಚನೆಗೊಳಗಾಗಿದ್ದು, ಇವರ ಮೊಬೈಲ್‌ಗೆ 9343841671 ಸಂಖ್ಯೆಯಿಂದ ಪಾರ್ಟ್ ಟೈಂ ಜಾಬ್ ಇರುವುದಾಗಿ ಸಂದೇಶ ರವಾನೆಯಾಗಿದೆ. ಅದಕ್ಕೆ ಯುವತಿ ಸ್ಪಂದಿಸಿದಾಗ ಹಣ ಪಾವತಿಸಿ ಹೋಟೆಲ್ ರಿವ್ಯೂ ಮಾಡಿದರೆ ಹೆಚ್ಚಿನ ಕಮಿಷನ್ ದೊರೆಯುತ್ತದೆ ಎಂದು ನಂಬಿಸಿ 5.53 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.11.2023 ಭಾನುವಾರ, ಮಳೆ ನಕ್ಷತ್ರ: ವಿಶಾಖ, 07.11.2023ರಿಂದ 19.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ,
ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಶ್ರವಣ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ರಾಷ್ಟ್ರ ಭಾರತಿ ಚಾರಿಟೆಬಲ್ ಟ್ರಸ್ಟ್, ಮಹಿಳಾ ಸಮನ್ವಯ, ಮೈಸೂರು ವಿಭಾಗ:** ನಾರೀ ಶಕ್ತಿ ಸಂಗಮ ಮಹಿಳಾ ಸಮ್ಮೇಳನ, ಉದ್ಘಾಟನೆ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ನಿವೃತ್ತ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ, ಪ್ರಾಸ್ತಾವಿಕ ನುಡಿ: ಪತ್ರಕರ್ತೆ ಹೆಚ್.ಜಿ.ಶೋಭಾ, ಅಧ್ಯಕ್ಷತೆ: ವಸುಂಧರ ದೊರೆಸ್ವಾಮಿ, ಮುಕ್ತ ವಕ್ತಾರ: ವಕೀಲೆ ಮೀರ ಫಡ್ಕೆ, ಸ್ಥಳ: ಶ್ರೀ ಅವಧೂತ ದತ್ತ ಪೀಠಂ, ಬೆಳಗ್ಗೆ 8ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಲೈಪೋಮ (ಬೊಜ್ಜಿನ ಗಂಟು) ಹಾಗೂ ಗ್ರಂಥಿಗಳಿಗೆ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಒಕ್ಕಲಿಗ ಯುವ ಬ್ರಿಗೇಡ್, ಎನ್‌ಆರ್‌ಐ ಒಕ್ಕಲಿಗರ ಬ್ರಿಗೇಡ್:** ಅನ್ನದಾತರ ಮಕ್ಕಳಿಗಾಗಿ ಉದ್ಯೋಗ ಮೇಳ, ಸಾನ್ನಿಧ್ಯ: ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠದ ಗೌರವ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಅಧ್ಯಕ್ಷತೆ: ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷ ಎಚ್.ಸಿ. ಕಿಶೋರ್‌ಚಂದ್ರ, ಉದ್ಘಾಟನೆ : ಕಿದ್ವಾಯಿ ಮೆಮೋರಿಯಲ್ ಇನ್ಸ್‌ಟಿಟ್ಯೂಟ್ ಆಫ್ ಆಂಕೋಲಾಜಿ ಮಾಜಿ ನಿರ್ದೇಶಕ ಡಾ.ಸಿ.ರಾಮಚಂದ್ರ, ಮುಖ್ಯ ಅತಿಥಿಗಳು: ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಮುಖ್ಯ ಸಲಹೆಗಾರ ಅಭಿಜಿತ್, ವಿಜಯವಾಣಿ ಸಂಪಾದಕ ಚನ್ನೇಗೌಡ, ವಿಶೇಷ ಅತಿಥಿಗಳು: ಪ್ರದೀಪ್ ಪ್ರಭಾಕರ್, ಎನ್.ಮಂಜುಶ್ರೀ, ಎಸ್.ಎನ್.ಬಾಲಚಂದ್ರ, ಎನ್.ಯತೀಶ್, ಎಂ. ಮುತ್ತುರಾಜ್, ಪೃಥ್ವಿಕ್ ಶಂಕರ್, ಸ್ಥಳ: ಬಿಜಿಎಸ್ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಭಾ ಭವನ, ಶ್ರೀ ಲಕ್ಷ್ಮೀಕಾಂತ ದೇವಸ್ಥಾನದ ಆವರಣ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ:** ಶಿಕ್ಷಕಿ, ಕವಯಿತ್ರಿ ಹಾಗೂ ಕಥೆಗಾರ್ತಿ ಶ್ರೀಮತಿ ಸಿ.ವಾಣಿ ರಾಘವೇಂದ್ರ ಅವರ ಕಿರುಬೆರಳು ಮಕ್ಕಳ ಸಾಮಾಜಿಕ ನಾಟಕ ಹಾಗೂ ಮಿನುಗುವ ತಾರೆಗಳು ಸಂಪಾದಿತ ಮಕ್ಕಳ ಕವನ ಸಂಕಲನ ಕೃತಿಗಳ ಲೋಕಾರ್ಪಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಕೌಟಿಲ್ಯ ವಿದ್ಯಾಲಯ ಅಧ್ಯಕ್ಷ ಬಾಬು, ಅಧ್ಯಕ್ಷತೆ: ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ.ಸಂತೋಷ್, ಉಪಸ್ಥಿತರು: ವಾಣಿ ರಾಘವೇಂದ್ರ, ಕವಯಿತ್ರಿ ಬಿ.ಶೋಭಾ, ನಿರೂಪಕಿ ಎನ್.ಆರ್.ರೂಪಶ್ರೀ, ಮುಖ್ಯ ಅತಿಥಿಗಳು: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷೆ ಹೇಮಗಂಗಾ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಗಳು:** ದತ್ತಿ ಕಾರ್ಯಕ್ರಮ, ಮೌಲ್ಯಾಧಾರಿತ ಶಿಕ್ಷಣ ಮತ್ತು ವಚನ ಸಾಹಿತ್ಯ–ಒಂದು ಸಂವಾದ, ಸಾನ್ನಿಧ್ಯ: ಶ್ರೀ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಉದ್ಘಾಟನೆ : ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು, ಉಪಸ್ಥಿತರು: ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಎಸ್.ಎಸ್.ರಮೇಶ್, ಡಾ.ಕೆ.ಎಸ್.ಮಲ್ಲೇಶ್, ಡಾ.ಹೆಚ್.ಟಿ.ಶೈಲಜಾ, ಪ್ರೊ.ಡಿ.ಎಸ್.ಸದಾಶಿವಮೂರ್ತಿ, ಎನ್.ಆರ್.ಮಂಜುನಾಥ್, ಅಧ್ಯಕ್ಷತೆ: ಮ.ಗು. ಸದಾನಂದಯ್ಯ, ಸ್ಥಳ: ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಆವರಣ, ಲಕ್ಷ್ಮೀಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ:** ಉಕ್ಕಿನ ಮಹಿಳೆ ಮಾಜಿ ಪ್ರಧಾನಿ ದಿವಂಗತ ಇಂದಿರಾ ಗಾಂಧಿಯವರ ಜನ್ಮ ದಿನಾಚರಣೆ, ಅಧ್ಯಕ್ಷತೆ : ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಬಿ.ಜೆ. ವಿಜಯಕುಮಾರ್, ಸಂಸ್ಕೃತಿ ಚಿಂತಕರಾದ ಪ್ರೊ. ಎನ್.ಲೋಲಾಕ್ಷಿ, ಪ್ರಣತಿ ಪ್ರಕಾಶ್, ವಸಂತಕುಮಾರಿ, ನರಸಮ್ಮ, ನಂದಿನಿ, ಮಹದೇವಮ್ಮ, ಸ್ಥಳ: ಕಾಂಗ್ರೆಸ್ ಕಚೇರಿ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಖೇಡ ವೇದವ್ಯಾಸಚಾರ್ಯ ಅವರಿಂದ ಉಪನಿಷದ್‌ಗಳ ಬಗ್ಗೆ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಹಿಮಾಲಯ ಪ್ರತಿಷ್ಠಾನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿವಿಧ ಕ್ಷೇತ್ರಗಳ ಸಾಧಕರಿಗೆ ಆಚಾರ್ಯ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಅವಧೂತ ದತ್ತ ಪೀಠದ ಉತ್ತರ ಪೀಠಾಧಿಪತಿ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಉದ್ಘಾಟನೆ: ಕೆ.ಆರ್ ಕ್ಷೇತ್ರದ ಶಾಸಕ ಶ್ರೀವತ್ಸ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಮಹಾಕವಯಿತ್ರಿ ಡಾ.ಲತಾ ರಾಜಶೇಖರ್, ಡಾ. ಕೆ. ಲೀಲಾಪ್ರಕಾಶ್, ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಕಲಾವಿದರಾದ ಶ್ರೀಮತಿ ಜಮುನಾರಾಣಿ ಮಿರ್ಲೆ, ಸ್ಥಳ: ಕನ್ನಡ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ:** ಡಾ. ಯಶವಂತ್ ಸರದೇಶಪಾಂಡೆ ಅವರಿಂದ 'ರಾಶಿಚಕ್ರ' ಏಕವ್ಯಕ್ತಿ ಹಾಸ್ಯ ನಾಟಕ ಪ್ರದರ್ಶನ, ಮೂಲರಚನೆ: ಶರದ್ ಉಪಾಧ್ಯ, ಕನ್ನಡ ಅನುವಾದ : ವಿವೇಕ್ ಕಾತರ್ಕಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ


■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ರಂಗಾಯಣ :** ಸುಬ್ಬಯ್ಯನಾಯ್ಡು ಹಾಗೂ ಪದ್ಮಶ್ರೀ ನಾಗರತ್ನಮ್ಮ ಹವ್ಯಾಸಿ ರಂಗ ತರಬೇತಿ ಶಿಬಿರಾರ್ಥಿಗಳಿಂದ ನಾಯೀಕತೆ ನಾಟಕ ಪ್ರದರ್ಶನ, ನಿರ್ದೇಶನ : ಸಂತೋಷ್‌ಕುಮಾರ್ ಕುಸನೂರ, ರಚನೆ : ಡಾ. ಚಂದ್ರಶೇಖರ ಕಂಬಾರ, ಸಂಗೀತ : ರಾಮಚಂದ್ರ ಹಡಪದ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾ.

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಕಾರ್ತೀಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಸುಲೋಚನಾ ಚಿನಿವಲರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ–ಸೈಬರ್ ಮಿತ್ರ–ಸೈಬರ್ ಸುರಕ್ಷೆ: ವಾರದ ಮಾತು, ಪ್ರಸ್ತುತಿ–ಸತೀಶ್ ವಿ. ಪ್ರಾಯೋಜಕರು cybermitra.in ಮೈಸೂರು, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ–ಅನಿಮೀಯ ಮುಕ್ತ ಪೌಷ್ಟಿಕ ಕರ್ನಾಟಕ ಕುರಿತು ಡಾ.ಮಲ್ಲಿಕಾ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ, 10.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ–ಕೆ.ಬಿ.ಮೀನಾ **ಮಧ್ಯಾಹ್ನ:** 12.30 ದೇವರನಾಮ–ರಾಗಿಣಿ, 12.45 ಜನಪದ ಸಂಗೀತ –ಚಿಕ್ಕಮಾದಮ್ಮ ಮತ್ತು ಸಂಗಡಿಗರು, 1.30 ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳ ನಡುವೆ ಅಹಮದಾಬಾದ್‌ನಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದ ವೀಕ್ಷಕ ವಿವರಣೆ

ಮೈಸೂರು ಮಿತ್ರ

ಭಾನುವಾರ 19 ನವೆಂಬರ್ 2023

ಜನಪರ, ಅಭಿವೃದ್ಧಿ ಪರ ಆಡಳಿತ ನಡೆಸುವಲ್ಲಿ ನಗರಸಭೆ ವಿಫಲ

ನಗರಸಭಾ ಅಧ್ಯಕ್ಷರ ರಾಜೀನಾಮೆಗೆ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಆಗ್ರಹ



ಮಡಿಕೇರಿ,ನ.18– ಮಡಿಕೇರಿ ನಗರಸಭೆಯ ಆಡಳಿತ ಮಂಡಳಿ ಜನಪರ ಮತ್ತು ಅಭಿವೃದ್ಧಿ ಪರ ಆಡಳಿತ ನೀಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇದರ ನೈತಿಕ ಹೊಣೆ ಹೊತ್ತು ನಗರಸಭಾಧ್ಯಕ್ಷರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ನಗರಸಭೆಯ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಸದಸ್ಯರುಗಳು ಒತ್ತಾಯಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಗರಸಭಾ ಸದಸ್ಯ ಹಾಗೂ ವಿರೋಧ ಪಕ್ಷದ ನಾಯಕ ಅಮೀನ್ ಮೊಹಿಸಿನ್ ಅವರು, ನಗರಸಭಾ ಅಧ್ಯಕ್ಷರು ತಮಗೆ ದೊರೆತಿರುವ ಅಧಿಕಾರವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ತಮ್ಮ ಹಿತಕ್ಕಾಗಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆಯೇ ಹೊರತು ನಗರದ ಅಭಿವೃದ್ಧಿಗಾಗಿ ಯಾವುದೇ ಪ್ರಯತ್ನಗಳನ್ನು ಮಾಡುತ್ತಿಲ್ಲ ಮತ್ತು ಜನಪರ ಕಾಳಜಿ ತೋರುತ್ತಿಲ್ಲವೆಂದು ಆರೋಪಿಸಿದರು.

ಅಧ್ಯಕ್ಷರು ನಗರದ ಜನರ ನಿರೀಕ್ಷೆಗಳನ್ನು ಹುಸಿ ಮಾಡಿದ್ದಾರೆ, ಸರ್ಕಾರದಿಂದ ವಿಶೇಷ ಅನುದಾನ ತರುವಲ್ಲಿ ವಿಫಲರಾಗಿದ್ದಾರೆ. ಇವರ ಅಸಮರ್ಥ ಆಡಳಿತದಿಂದಾಗಿ ನಗರೋತ್ಥಾನದ 3ನೇ ಹಂತದ ಅನುದಾನ 3 ಕೋಟಿ ರೂ. ಖರ್ಚಾಗದೆ ಸರ್ಕಾರಕ್ಕೆ ವಾಪಾಸ್ಸಾಗಿದೆ. ಪಕ್ಷಭೇದ ಮರೆತು ಎಲ್ಲರೂ ಒಂದಾಗಿ ಕಾರ್ಯನಿರ್ವಹಿಸೋಣವೆಂದು ಕರೆ ನೀಡಿದ ಕ್ಷೇತ್ರದ ಶಾಸಕರ ಸಹಕಾರವನ್ನು ಕೂಡ ಅಧ್ಯಕ್ಷರು ಪಡೆಯುತ್ತಿಲ್ಲವೆಂದು ಟೀಕಿಸಿದರು.

ಸಿಬ್ಬಂದಿಗಳ ಕೊರತೆ ನಗರಸಭೆಯನ್ನು ಅತಿಯಾಗಿ ಕಾಡುತ್ತಿದೆ. ಕಳೆದ ಒಂದು ವರ್ಷದಿಂದ ಸರ್ವರ್ ಸಮಸ್ಯೆ ಮಿತಿ ಮೀರಿದ್ದು, ಸಾರ್ವಜನಿಕರ ಅರ್ಜಿಗಳು ವಿಲೇವಾರಿಯಾಗದ ಪರಿಸ್ಥಿತಿ ಎದುರಾಗಿದೆ. ಐಟಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಕಾರ್ಯಕ್ಕೂ ನಗರಸಭೆ ಆಡಳಿತ ಮಂಡಳಿ ಮುಂದಾಗಿಲ್ಲ. ವಿನಾಕಾರಣ ಇರುವ ಸಿಬ್ಬಂದಿಗಳಿಗೆ ಮಾನಸಿಕ ಕಿರುಕುಳ ನೀಡಲಾಗುತ್ತಿದ್ದು, ಇದೇ ಕಾರಣಕ್ಕೆ ಕೆಲವು ಅಧಿಕಾರಿಗಳು ವರ್ಗಾವಣೆ ಪಡೆದು ತೆರಳಿದ್ದಾರೆ. ಅಧ್ಯಕ್ಷರ ಅಸಹಾಯಕ ಮನೋಭಾವ ಜನಸಾಮಾನ್ಯರ ಮೇಲೆ ಪರಿಣಾಮ ಬೀರುತ್ತಿದೆ. ಇವರ ನಿಷ್ಕ್ರಿಯತೆಯ ಲಾಭ ಪಡೆದುಕೊಳ್ಳುತ್ತಿರುವ ಸ್ಥಾಯಿ ಸಮಿತಿ ಅಧ್ಯಕ್ಷರು ನಿಯಮ ಮೀರಿ ವರ್ತಿಸುತ್ತಿದ್ದಾರೆ ಎಂದು ಅಮೀನ್ ಮೊಹಿಸಿನ್ ಆರೋಪಿಸಿದರು.

ಹೆದ್ದಾರಿ ಬದಿಯಲ್ಲಿ ಶೆಡ್‌ಗಳ ನಿರ್ಮಾಣಕ್ಕೆ ಕಾನೂನಿನಡಿ ಅವಕಾಶವಿಲ್ಲದಿದ್ದರೂ ಅಕ್ರಮ ಶೆಡ್‌ಗಳು ತಲೆ ಎತ್ತುತ್ತಿವೆ. ಇವುಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ ನಗರಸಭೆ ಆಡಳಿತ ಮಂಡಳಿ ಬೀದಿ ಬದಿ ವ್ಯಾಪಾರಿಗಳಿಗೆ ಮಾನಸಿಕ ಕಿರುಕುಳ ನೀಡುವುದರಲ್ಲಿ ಮಗ್ನವಾಗಿದೆ ಎಂದು ಟೀಕಿಸಿದರು.

ಕಾನೂನು ಹೋರಾಟ: ನಗರಸಭೆಯ ನಿಯಮಕ್ಕೆ ವಿರುದ್ಧವಾಗಿ ಆಡಳಿತ ಪಕ್ಷದ ಸದಸ್ಯರೊಬ್ಬರು ಹಣವನ್ನು ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಇದನ್ನು ಪ್ರಶ್ನಿಸಿ ಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸುತ್ತಿದ್ದು, ನಿಯಮ ಉಲ್ಲಂಘಿಸಿದ ಸದಸ್ಯನ ಸದಸ್ಯತ್ವ ರದ್ದು ಆಗುವವರೆಗೆ ಹೋರಾಟ ಮುಂದುವರೆಯಲಿದೆ ಎಂದರು.

ಸೂಪರ್ ಸೀಡ್ ಮಾಡಿ: ಮತ್ತೊಬ್ಬ ಸದಸ್ಯ ಎಂ.ಕೆ.ಮನ್ಸೂರ್ ಮಾತನಾಡಿ, ನಗರದ ಜನರಿಗೆ ಯಾವುದೇ ಲಾಭ ಇಲ್ಲದೆ ಇರುವುದರಿಂದ ಮತ್ತು ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುವುದರಿಂದ ನಗರಸಭೆಯನ್ನು ಸೂಪರ್ ಸೀಡ್ ಮಾಡಬೇಕೆಂದು ಒತ್ತಾಯಿಸಿದರು. ಇತ್ತೀಚೆಗೆ ಡಾಟ ಆಪರೇಟರ್ ಒಬ್ಬರ ಮೇಲೆ ಆಡಳಿತ ಪಕ್ಷದ ಸದಸ್ಯರು ದಬ್ಬಾಳಿಕೆ ನಡೆಸಿದ್ದು, ಇದು ಖಂಡನೀಯ. ಅಧಿಕಾರಿಗಳು ಭಯದ ವಾತಾವರಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕೆಲವು ಸಿಬ್ಬಂದಿಗಳು ಒತ್ತಡದಿಂದಾಗಿ ಅನಾರೋಗ್ಯ ಪೀಡಿತರಾಗಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರಸಭಾ ಸದಸ್ಯರಾದ ನೀಮಾಅಶ್ರಫ್, ಬಶೀರ್, ಮೇರಿ ವೇಗಸ್ ಹಾಗೂ ಎಸ್‌ಡಿಪಿಐ ನಗರಾಧ್ಯಕ್ಷ ರಫೀಕ್ ಉಪಸ್ಥಿತರಿದ್ದರು.

ಮಾರುತಿ ಓಮ್ನಿ–ಲಾರಿ ಡಿಕ್ಕಿ: ಚಾಲಕ ಸೇರಿ ಹಲವರಿಗೆ ಗಾಯ

ಸುಂಟಿಕೊಪ್ಪ,ನ.18– ಕುಶಾಲನಗರ–ಸುಂಟಿಕೊಪ್ಪ ರಾಷ್ಟ್ರೀಯ ಹೆದ್ದಾರಿ 275ರ ಗದ್ದೆಹಳ್ಳದ ಬಳಿಯಲ್ಲಿ ಮಾರುತಿ ಓಮ್ನಿ ಹಾಗೂ ಲಾರಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಮಾರುತಿ ಓಮ್ನಿಯ ಚಾಲಕ ಸೇರಿದಂತೆ ಸಹ ಪ್ರಯಾಣಿಕರು ಗಾಯಗೊಂಡಿದ್ದು ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕುಶಾಲನಗರದಿಂದ ಮಡಿಕೇರಿ ಕಡೆಗೆ ತೆರಳುತ್ತಿದ್ದ ಮಾರುತಿ ಓಮ್ನಿ ಹಾಗೂ ಮಡಿಕೇರಿ ಕಡೆಯಿಂದ ಸುಂಟಿಕೊಪ್ಪ ಕಡೆಗೆ ಬರುತ್ತಿದ್ದ ಲಾರಿ ನಡುವೆ ಮುಂಜಾನೆ ಗದ್ದೆಹಳ್ಳದ ನೂರ್‌ಜುಮ್ಮಾ ಮಸೀದಿ ತಿರುವಿನಲ್ಲಿ ಮುಖಾಮುಖಿ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಮಾರುತಿ ಓಮ್ನಿ ಮುಂಭಾಗವು ಸಂಪೂರ್ಣ ಜಖಂಗೊಂಡಿದೆ.

ಅಪಘಾತದಲ್ಲಿ ಓಮ್ನಿಯಲ್ಲಿ ಪ್ರಯಾಣಿಸುತ್ತಿದ್ದ ಚಾಲಕ ಸೇರಿದಂತೆ ಮೂವರು ಸಹ ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿದೆ. ಗಾಯಾಳುಗಳಿಗೆ ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಸ್ವಾಮಿ ಹಾಗೂ ಸಿಬ್ಬಂದಿಗಳು ತೆರಳಿ ಸ್ಥಳ ಪರಿಶೀಲನೆ ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ. ಈ ಅಪಘಾತ ಘಟನೆ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಡಾನೆಗಳ ದಾಂಧಲೆಗೆ ಕಟಾವಿಗೆ ಬಂದಿದ್ದ ಭತ್ತದ ಫಸಲಿಗೆ ಹಾನಿ

ಅರಣ್ಯ ಇಲಾಖೆಗೆ ದೂರು ನೀಡಿದರೂ ಪ್ರಯೋಜನವಿಲ್ಲ



ಕುಶಾಲನಗರ, ನ.18– ಕಾಡಾನೆಗಳ ಹಾವಳಿಯಿಂದಾಗಿ ಕಟಾವಿಗೆ ಬಂದಿದ್ದ ಭತ್ತದ ಫಸಲು ಹಾನಿಯಾಗಿರುವ ಘಟನೆ ಹಾರಂಗಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ನಡೆದಿದೆ.

ಜೇನುಕಲ್ಲು ಬೆಟ್ಟದ ತಪ್ಪಲಿನ ಅರಣ್ಯ ಪ್ರದೇಶದಿಂದ ಸಂಜೆಯಾಯಿತು ಎಂದರೆ ಲಗ್ಗೆ ಇಡುವ ಕಾಡಾನೆಗಳು ಹುಲುಸೆ ಗ್ರಾಮದ ಕೃಷಿಕ ಮಲ್ಲಿಕಾ ಎಂಬುವರಿಗೆ ಸೇರಿದ ಭತ್ತದ ಫಸಲು ತುಂಬಿದ ಗದ್ದೆಗಳನ್ನು ತುಳಿದು ತಿಂದು ಹಾನಿ ಮಾಡಿವೆ. ಇಲ್ಲಿ ಕಾಡಾನೆಗಳು ತಿಂದು ಹಾನಿಯಾಗಿದ್ದಕ್ಕಿಂತ ತುಳಿದು ಹಾನಿ ಮಾಡಿದ ಪ್ರಮಾಣವೇ ಜಾಸ್ತಿಯಾಗಿದೆ.

ಮೊದಲೇ ಈ ಬಾರಿ ಸರಿಯಾದ ಮಳೆ ಇಲ್ಲದೇ ಕಾಲುವೆಯಿಂದಲೂ ಸರಿಯಾಗಿ ನೀರು ಹರಿಸದೇ ಅವರಿವರನ್ನು ಬೇಡಿ ರಾತ್ರಿ ಹಗಲೆನ್ನದೇ ಕೊಳವೆ ಬಾವಿಯ ನೀರನ್ನು ಹಾಯಿಸಿ ರೈತರು ಕಷ್ಟ ಪಟ್ಟು ಬೆಳೆದ ಭತ್ತದ ಫಸಲು ಕಾಡಾನೆಗಳ ಪಾಲಾಗಿದೆ.

ಕಾರ್ಮಿಕರ ಕೊರತೆಯಿಂದ ದುಪ್ಪಟ್ಟು ಪ್ರಮಾಣದಲ್ಲಿ ಹಣ ವ್ಯಯ ಮಾಡಿ ಬೆಳೆದ ಭತ್ತದ ಫಸಲು ಕೈಗೆ ಬಂದದ್ದು ಮನೆಯಲ್ಲಿನ ದವಸ ಭಂಡಾರ ಸೇರದಿರುವುದು ರೈತರಿಗೆ ಅಪಾರ ಪ್ರಮಾಣದಲ್ಲಿ ನಷ್ಟ ಉಂಟುಮಾಡಿದೆ.

ಈ ಬಗ್ಗೆ ಅರಣ್ಯ ಇಲಾಖೆಗೆ ದೂರು ನೀಡಿದರೂ ಕೂಡ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ದೂರಿರುವ ರೈತ ಹುಲುಸೆ ಗ್ರಾಮದ ಮಲ್ಲಿಕಾ, ಕಾಡಂಚಿನ ಪ್ರದೇಶದ ರೈತರು ನಾವುಗಳು ಪ್ರತೀ ವರ್ಷವೂ ಭತ್ತದ ಫಸಲು ಬೆಳೆಯುವಾಗ ಕಾಡಾನೆಗಳು ತಿಂದು ಳಿದು ಬಿಟ್ಟದ್ದು ನಮಗೆ ಎಂದುಕೊಂಡು ಕೃಷಿ ಮಾಡುತ್ತೇವೆ. ಆದರೆ ಈ ಬಾರಿ ಕೈಗೆ ಬಂದಿದ್ದ ಬಹುಪಾಲು ಭಾಗ ಕಾಡಾನೆಗಳ ತುಳಿತದಿಂದ ನಷ್ಟವಾಗಿರುವುದು ಮಾತ್ರ ತಡೆಯಲಾಗುತ್ತಿಲ್ಲ ಎಂದರು.

ಕೂಡಲೇ ಅರಣ್ಯಾಧಿಕಾರಿಗಳು ರೈತರು ನಷ್ಟಕ್ಕೆ ಒಳಗಾಗಿರುವ ಕಾಡಾನೆ ದಾಳಿಯ ಗದ್ದೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ರೈತರನ್ನು ಇಲಾಖೆಯ ಕಚೇರಿಗಳಿಗೆ ಸತಾಯಿಸದೇ ರೈತರ ಮನೆ ಬಾಗಿಲಿಗೆ ಬಂದು ಸೂಕ್ತ ಪರಿಹಾರವನ್ನು ನೀಡುವ ವ್ಯವಸ್ಥೆ ಆಗಬೇಕು ಎಂದು ಮಲ್ಲಿಕಾ, ಸದಾಶಿವ, ಸಂಪತ್ತು ಆಗ್ರಹಿಸಿದರು.

ಕಾಫಿ ತೋಟಗಳ ರಸ್ತೆಯಲ್ಲಿ ಧೂಳೆಬ್ಬಿಸಿದ ರ್‍ಯಾಲಿ ಕಾರುಗಳು



ಸಿದ್ದಾಪುರ: ಬ್ಲೂ ಬ್ಯಾಂಡ್ ಎಫ್‌ಎಂ ಎಸ್‌ಸಿಐ ಇಂಡಿಯನ್ ನ್ಯಾಷನಲ್ ರ್‍ಯಾಲಿ ಚಾಂಪಿಯನ್‌ಶಿಪ್ ನೇತೃತ್ವದಲ್ಲಿ ರೋಬಸ್ಟಾ ಸ್ಪೋರ್ಟ್ಸ್ ಅಂಡ್ ಅಡ್ವೆಂಚರ್ ಅಕಾಡೆಮಿ ಸಹಕಾರದೊಂದಿಗೆ ರೋಬಸ್ಟಾ 2023 ರ್‍ಯಾಲಿಯಲ್ಲಿ ಪಾಲ್ಗೊಂಡ 61 ಕಾರು ಜಿಪ್ಸಿಗಳು ಕಡಿದಾದ ಕಾಫಿ ತೋಟಗಳ ರಸ್ತೆಯಲ್ಲಿ ಧೂಳೆಬ್ಬಿಸಿ ರೋಮಾಂಚನಕಾರಿಯಾಗಿ ಚಾಲನೆ ಮಾಡುವ ಮೂಲಕ ಸ್ಪರ್ಧಾಳುಗಳು ಗಮನಸೆಳೆದರು.

ಬೆಳಿಗ್ಗೆ 6 ಗಂಟೆಯಿಂದಲೇ ಪಾಲಿಬೆಟ್ಟ ತೋಟ ಹಾಗೂ ಆನಂದಪುರ ತೋಟದ ರಸ್ತೆಯಲ್ಲಿ ಪ್ರಾರಂಭವಾದ ರ್‍ಯಾಲಿಯಲ್ಲಿ ಮಹಿಳಾ ಹಾಗೂ ಪುರುಷ ಸ್ಪರ್ಧಿಗಳು ಪಾಲ್ಗೊಂಡಿದರು.

ನಾ ಮುಂದು ತಾ ಮುಂದು ಎಂಬಂತೆ ರ್‍ಯಾಲಿ ಪಟುಗಳು ವಾಹನಗಳನ್ನು ಸಾಹಸದಿಂದ ಚಾಲನೆ ಮಾಡಿದರು. ಭಾರಿ ಸದ್ದು ಮಾಡುವ ಮೂಲಕ ಅತಿ ವೇಗದ ಚಾಲನೆಯಿಂದ ಕೆಲವು ವಾಹನಗಳಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಕೆಲವು ರ್‍ಯಾಲಿ ಪಟುಗಳ ನಿರೀಕ್ಷೆಯ ಸಮಯ ಗೆಲುವು ಸಾಧಿಸಲು ಸಾಧ್ಯವಾಗದೆ ನಿರಾಸೆಯಾದರು. ರ್‍ಯಾಲಿ ವಾಹನಗಳ ಸಂಚಾರದ ಮಾರ್ಗದುದ್ದಕ್ಕೂ ಕಾರ್ಮಿಕರು ಹಾಗೂ ಸ್ಥಳೀಯರು ರಸ್ತೆ ಬದಿಗಳಲ್ಲಿ ನಿಂತು ಸ್ಪರ್ಧಾಳುಗಳಿಗೆ ಹುರಿದುಂಬಿಸಿದರು.

ಜಿಲ್ಲೆಯಲ್ಲಿ ಸಾಹಿತ್ಯ, ಕಲಾವಿದರಿಗೆ ವೇದಿಕೆ ಒದಗಿಸಬೇಕು

ವಿರಾಜಪೇಟೆ,ನ.18– ಕೊಡಗು ಪ್ರಕೃತಿ ಸೊಬಗಿನ ರಮ್ಯ ಪರಿಸರದ ನಾಡು. ಕಲಾವಿದರಿಗೆ ಸ್ಫೂರ್ತಿ ನೀಡುತ್ತದೆ. ಇದನ್ನೆ ಕುಂಚದಲ್ಲಿ ಅರಳಿಸಿದರೆ ಉತ್ತಮ ಕಲಾಚಿತ್ರ ಮೂಡಿ ಬರುತ್ತದೆ. ಕಲಾವಿದರಿಗೆ ಒತ್ತಾಸೆ ನೀಡುವಂತ ತಾಣಗಳನ್ನು ಆರಿಸಿ ಚಿತ್ರಕಲಾ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದು ಕೊಡಗು ಜಾನಪದ ಪರಿಷತ್ ಅಧ್ಯಕ್ಷ ಬಿ.ಜಿ. ಅನಂತಶಯನ ತಿಳಿಸಿದರು.

ವಿರಾಜಪೇಟೆ ನಗರದ ಮೊಗರಗಲ್ಲಿಯಲ್ಲಿರುವ ಸಾಧಿಕ್ ಆರ್ಟ್ ಗ್ಯಾಲರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಕಲಾ ಉತ್ಸವ–2023ರ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿ, ಕೊಡಗಿನಲ್ಲಿ ವಿದ್ಯಾವಂತರಿದ್ದು, ಕಲೆ, ಸಾಹಿತ್ಯ ಕಾರ್ಯಕ್ರಮಗಳಿಗೆ ಬರುವುದೇ ಕಡಿಮೆಯಾಗಿರುವುದರಿಂದ ಕೊಡಗು ಮರುಭೂಮಿಯಂತಾಗಿದೆ ಎನ್ನುತ್ತಾರೆ. ಆದ್ದರಿಂದ ಸಾಹಿತ್ಯ ಹಾಗೂ ಕಲಾವಿದರಿಗೆ ಆರ್ಥಿಕ ಮತ್ತು ವೇದಿಕೆ ಒದಗಿಸುವಂತಾಗಬೇಕು ಎಂದರು.



ವಿರಾಜಪೇಟೆಯಲ್ಲಿ ಶಿಕ್ಷಕ ಬಿ.ಆರ್. ಸತೀಶ್ ಮತ್ತು ಸಾದಿಕ್‌ರಂತಹ ಹೆಸರಾಂತ ಅನೇಕ ಕಲಾವಿದರಿದ್ದಾರೆ. ನಾವುಗಳು ಸದಾ ಕಲಾವಿದರ ಜೊತೆಯಾಗಿ ನಿಂತು ಸಹಕಾರ ನೀಡುವಂತಾಗಬೇಕು. ಕೊಡಗಿನ ಬಹುಮುಖ ಸಾಹಿತ್ಯ ಕಲೆಗಳು ರಾಜ್ಯ ಹಾಗೂ ದೇಶದಾದ್ಯಂತ ಪ್ರಖ್ಯಾತಿಗೊಳ್ಳಬೇಕೆಂದು ಅನಂತಶಯನ ಹೇಳಿದರು.

ಕೊಡಗು ಜಾನಪದ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಮುನೀರ್ ಅಹಮ್ಮದ್ ಮಾತನಾಡಿ, ಕೊಡಗು ಜಿಲ್ಲೆ ಕ್ರೀಡೆ, ಸಂಸ್ಕೃತಿ, ಕೃಷಿ ಮತ್ತು ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾಗಿದೆ. ಅದರಂತೆ ಎಲೆ ಮರೆಯ ಕಾಯಿಯಂತೆ ಚಿತ್ರಕಲೆಯು ಒಂದು ಭಾಗವಾಗಿ ಇಂದು ಅನೇಕ ಹೆಸರುವಾಸಿ ಚಿತ್ರಕಲಾವಿದರನ್ನು ಪುಟ್ಟ ಜಿಲ್ಲೆಯಲ್ಲಿ ಹುಟ್ಟುಹಾಕುತ್ತಿದೆ. ವಿರಾಜಪೇಟೆ ನಗರದ ನಿವಾಸಿ ಹಾಗೂ ಹವ್ಯಾಸಿ ಚಿತ್ರಕಲಾವಿದ ಸಾದಿಕ್ ಹಂಸ ಅವರ ಶ್ರಮದಿಂದ ಕಲಾಉತ್ಸವ ಕಾರ್ಯಕ್ರಮ ನಡೆಯುತ್ತಿದೆ. ಚಿತ್ರಕಲಾ ಶಿಬಿರದಲ್ಲಿ ಸಾರ್ವಜನಿಕರು, ಶಾಲಾ ವಿದ್ಯಾರ್ಥಿಗಳು ಭಾಗವಹಿಸಬಹುದು ಎಂದರು.

ವಿರಾಜಪೇಟೆ ರೋಟರಿ ಸಂಸ್ಥೆ ಅಧ್ಯಕ್ಷ ಬನ್ನಿ ಪೂವಯ್ಯ ಮಾತನಾಡಿ, ಕಲಾವಿದರಿಗೆ ಮುಖ್ಯವಾಗಿ ಏಕಾಗ್ರತೆ ಅಗತ್ಯ. ಜೊತೆಗೆ ಪ್ರೋತ್ಸಾಹ ಹಾಗೂ ಅವಕಾಶಗಳು ದೊರೆಯುವಂತಾಗಬೇಕು, ಕಲೆಯನ್ನು ಉಳಿಸಿ ಬೆಳೆಸಲು ಎಲ್ಲರೂ ಕೈಜೋಡಿಸಬೇಕು ಎಂದರು. ಜಾನಪದ ಪರಿಷತ್ತಿನ ಜಿಲ್ಲಾ ಖಜಾಂಚಿ ಸಂಪತ್ ಕುಮಾರ್ ಮಾತನಾಡಿ, ನಮ್ಮ ಕಾವೇರಿ ತಪೋ ಭೂಮಿಯಲ್ಲಿ ಅನೇಕ ಮಹಾನ್ ಕಲಾವಿದರಿದ್ದಾರೆ. ಕಲಾವಿದರಿಗೆ ವೇದಿಕೆಯ ಅಗತ್ಯವಿದ್ದು ಅವರನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕಿದೆ ಎಂದರು.

ಉಪ ತಹಸೀಲ್ದಾರ್ ಪ್ರದೀಪ್‌ಕುಮಾರ್ ಚಾಲನೆ ನೀಡಿ ಕಾರ್ಯಕ್ರಮಕ್ಕೆ ಶುಭಕೋರಿದರು. ಶಿಬಿರ ಆಯೋಜಕ ಚಿತ್ರ ಕಲಾವಿದ ಸಾಧಿಕ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಲಾವಿದ ಮಾಲ್ದಾರೆಯ ಬಾಷ, ಮುಖ್ಯಶಿಕ್ಷಕಿ ವಿಶಾಲಾಕ್ಷಿ, ಸಾಹಿತಿ ರಜಿತ ಕಾರ್ಯಪ್ಪ, ಕಲಾವಿದರ ಕಲಾಚಿತ್ರಗಳನ್ನು ಇದೇ ಸಂದರ್ಭ ಪ್ರದರ್ಶಿಸಲಾಯಿತು.

ಸಹಕಾರ ಸಂಘಗಳು ರೈತರು, ಬಡವರು, ಶ್ರಮಿಕರ ಜೀವಾಳ

ಸಂತೇಮರಹಳ್ಳಿಯಲ್ಲಿ 77ನೇ ಸಹಕಾರ ಸಪ್ತಾಹ ಆಚರಣೆ

ಚಾಮರಾಜನಗರ, ನ.18– ರೈತರು, ಬಡವರು ಹಾಗೂ ಶ್ರಮಿಕರ ಅಭಿವೃದ್ಧಿಗಾಗಿ ಸಹಕಾರ ಸಂಘಗಳು ಹೆಚ್ಚಿನ ರೀತಿಯಲ್ಲಿ ಶ್ರಮಿಸುತ್ತಿದ್ದು, ಉತ್ತರ ಕರ್ನಾಟಕ ಹಾಗೂ ಕರಾವಳಿ ಪ್ರದೇಶಗಳ ಮಾದರಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಸಹಕಾರ ಚಳವಳಿ ಬಲವರ್ಧನೆಯಾಗಬೇಕಾಗಿದೆ ಎಂದು ಚಾಮುಲ್ ಮಾಜಿ ಅಧ್ಯಕ್ಷ ಹಾಗೂ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಚ್.ಎಸ್. ನಂಜುಂಡಪ್ರಸಾದ್ ತಿಳಿಸಿದರು.

ತಾಲೂಕಿನ ಸಂತೇಮರಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟ ಹಾಗೂ ಸಂತೇಮರಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮತ್ತು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ನಡೆದ 77ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

1922ರಲ್ಲಿ ಸಹಕಾರ ಚಳುವಳಿ ಪ್ರಾರಂಭವಾಗಿದ್ದು, ಈ ಚಳವಳಿಯು ರೈತರು ಎಲ್ಲಾ ವರ್ಗದ ಶ್ರಮಿಕರ ಆಶಾಕಿರಣವಾಗಿದೆ. ಪ್ರತಿಯೊಂದು ಗ್ರಾಮಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಹಾಲು ಉತ್ಪಾದಕರ ಸಹಕಾರ ಸಂಘ ಸೇರಿದಂತೆ ವಿವಿಧ ಸ್ತರದ ಸಹಕಾರ ಸಂಘಗಳು ರಚನೆಗೊಂಡು ಅಭಿವೃದ್ಧಿಯ ಪೂರಕವಾಗಿದೆ. ರೈತನ ಜೀವನದ ಆಧಾರವಾಗಿ ಪ್ರಮುಖ ಪಾತ್ರ ವಹಿಸುವ ಮೊದಲ ಸಂಘವಾಗಿ ನಿರ್ಮಾಣವಾಗಿದೆ. ದೇಶದ್ಯಂತ ಸಹಕಾರ ಸಪ್ತಾಹವನ್ನು ಆಚರಣೆ ಮಾಡಿದ್ದು, ಏಳು ದಿನಗಳು ಕಾಲ ಸಹಕಾರ ಧ್ವಜವನ್ನು ಹಾರಿಸಿ, ಸಹಕಾರಿ ಕಾಯ್ದೆ ಮತ್ತು ಯೋಜನೆಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಸಹಕಾರ ಚಳವಳಿಗೆ 119 ವರ್ಷಗಳ ಇತಿಹಾಸವಿದೆ. ಚುನಾವಣೆ ಸಂದರ್ಭದಲ್ಲಿ ಮಾತ್ರ ರಾಜಕೀಯ ಮಾಡಬೇಕೆ ವಿನಹ, ಸಂಘದ ವಿಚಾರ ಬಂದಾಗ ರಾಜಕೀಯ ಮರೆತು ಸಹಕಾರ ಸಂಘದ ಅಭಿವೃದ್ಧಿಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. 1997ರಲ್ಲಿ ಮಾಜಿ ಸಚಿವರಾದ ದಿ. ಎಚ್.ಎಸ್. ಮಹಾದೇವಪ್ರಸಾದ್ ಅವರು ಕುದೇರಿನಲ್ಲಿ 40 ಎಕರೆ ಪ್ರದೇಶದಲ್ಲಿ ಹಾಲಿನ ಡೈರಿ ಸ್ಥಾಪನೆ ಮಾಡಿ ಸಾವಿರಾರು ಬಡ ಕುಟುಂಬಗಳಿಗೆ ಆಸರೆಯಾಗಿದ್ದಾರೆ. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಸಹಕಾರ ಸಂಘಗಳಿಗೆ 930 ಕೋಟಿ ಬಿಡುಗಡೆ ಮಾಡಿ ಸಂಘಗಳ ಅಭಿವೃದ್ಧಿಗೆ ಹೆಚ್ಚಿನ ಉತ್ತೇಜನ ನೀಡಿದ್ದರು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಎಚ್.ಎಂ.ಮಹಾದೇವ ಪ್ರಭು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಚ್.ಬಸವಣ್ಣ, ಎಂ.ಎಂ. ನಾಗರಾಜ್, ಎಚ್.ಎನ್.ಸುಂದರರಾಜ್, ನಾಗಸುಂದರ್, ದ್ರಾಕ್ಷಿಯಣಿ, ಸಂತೇಮರಹಳ್ಳಿ ಡೇರಿ ಅಧ್ಯಕ್ಷೆ ಕುಮಾರಿ, ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಾದ ಜ್ಯೋತಿ ಅರಸು, ಸಹಾಯಕ ನಿಬಂಧಕ ಎಂ.ಎಸ್.ದಯಾನಂದ, ಸಂತೇಮರಹಳ್ಳಿ ಎಂಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಕುಮಾರಸ್ವಾಮಿ, ಮೇಲ್ವಿಚಾರಕ ಲಿಂಗರಾಜು ಸಹಕಾರ ಯೂನಿಯನ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯೋಗೇಂದ್ರ ನಾಯಕ್ ಪಿಎಸಿಸಿ ಬ್ಯಾಂಕ್ ನೌಕರರಾದ ಪ್ರದೀಪ್ ಎಚ್.ಜಿ, ಮಹದೇವ್ ಪ್ರಸಾದ್, ರಾಚಪ್ಪ ಸಹಕಾರ ಯೂನಿಯನ್ ಮಲ್ಲಿಕಾರ್ಜುನ್, ಮಲ್ಲೇಶ್, ಕೆಂಗಡಗಣ್ಣ ಇತರರು ಇದ್ದಾರೆ.



ಚಿರತೆ ಕೊಂದು ಅವಶೇಷ ಸಾಗಿಸುತ್ತಿದ್ದ ಇಬ್ಬರ ಬಂಧನ

ಚಿರತೆ ಅಂಗಾಂಗ, ನಾಡ ಬಂದೂಕು, ಬೈಕ್ ವಶ





ಕೊಳ್ಳೇಗಾಲ, ನ.18– ಚಿರತೆಯನ್ನು ಕೊಂದು ಅದರ ಕಾಲು ಸೇರಿದಂತೆ ಅವಶೇಷಗಳನ್ನು ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಿ, ಆರೋಪಿಗಳಿಂದ ಮೃತ ಚಿರತೆಯ ಶವ, ಕಾಲುಗಳು, ಎರಡು ಅಕ್ರಮನಾಡ ಬಂದೂಕಗಳು ಹಾಗೂ ಸಾಗಿಸಲು ಬಳಸಿದ್ದ ಬೈಕ್ ಅನ್ನು ಗ್ರಾಮಾಂತರ ಠಾಣೆಯ ಪೊಲೀಸರು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ತಾಲೂಕಿನ ದೊಡ್ಡಿಂದುವಾಡಿ ಗ್ರಾಮದ ಶಾಂತರಾಜು ಹಾಗೂ ಅರುಣ್ ಬಂಧಿತ ಆರೋಪಿಗಳು, ಈ ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೋರ್ವ ಆರೋಪಿ ನಟರಾಜು ತಲೆಮರೆಸಿಕೊಂಡಿದ್ದಾನೆ.

ಬಂಧಿತರನ್ನು ಠಾಣೆಗೆ ಕರೆತಂದು ವಿಚಾರಿಸಿದಾಗ ಟಿ.ಎನ್.ಪುರ ತಾಲೂಕಿನ ಕಾವೇರಿಪುರದ ಕಗ್ಗಳಿಪುರ ಅರಣ್ಯ ಪ್ರದೇಶದಲ್ಲಿ ಚಿರತೆಯನ್ನು ಬೇಟೆಯಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಪರಾರಿಯಾಗಿರುವ ಆರೋಪಿ ಪತ್ತೆಗೆ ಕ್ರಮ ವಹಿಸಿದ್ದಾರೆ.

ಕಾರ್ಯಾಚರಣೆಯನ್ನು ಜಿಲ್ಲಾ ಎಸ್ಪಿ ಪದ್ಮಿನಿ ಸಾಹೋ, ಅಡಿಷನಲ್ ಎಸ್ಪಿ ಟಿ.ಜೆ.ಉದೇಶ, ಡಿವೈಎಸ್ಪಿ ಸೋಮೇಗೌಡ ಮಾರ್ಗದರ್ಶನದಲ್ಲಿ ಪೊಲೀಸ್ ವೃತ್ತ ನಿರೀಕ್ಷಕ ಕೃಷ್ಣಪ್ಪ ನೇತೃತ್ವದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಗಣೇಶ್, ಕ್ರೈಂ ಪಿಎಸ್‌ಐ ಚೆಲುವರಾಜು .ಎನ್, ಎಎಸ್‌ಐ ಮಲ್ಲಿಕಾರ್ಜುನ, ತಕೀವುಲ್ಲಾ ಹಾಗೂ ಅಪರಾಧ ಪತ್ತೆ ದಳದ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕಾರ್ಯಾಚರಣೆಯಲ್ಲಿ ಭಾಗಿಯಾದವರಿಗೆ ಶ್ಲಾಘಿಸಿ, ನಗದು ಬಹುಮಾನವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಘೋಷಿಸಿದರು.

ನಿಧನ

ಶ್ರೀ ಗುರುಸೋಮರಾಧ್ಯ



ಕೊಳ್ಳೇಗಾಲ: ತಾಲೂಕು ಸರಗೂರು ಗ್ರಾಮದ ಶ್ರೀ ಗುರು ಸೋಮರಾಧ್ಯರು (ಪುಟ್ಟಣ್ಣ) ಇಂದು ನಿಧನರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು.

ಮೃತರ ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ ಸರಗೂರು ಗ್ರಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿಜಿಟಲ್ ಲೈವ್ ಪ್ರಮಾಣ ಪತ್ರ ಸಲ್ಲಿಕೆಗೆ ಅಂಚೆ ಇಲಾಖೆಯಿಂದ ಸೇವಾ ಸೌಲಭ್ಯ

ಚಾಮರಾಜನಗರ, ನ.18– ಪಿಂಚಣಿದಾರರು ವೈಯಕ್ತಿಕವಾಗಿ ಜೀವನ ಪ್ರಮಾಣ ಪತ್ರ ಸಲ್ಲಿಸುವ ಸಮಯದಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು ತಪ್ಪಿಸಲು, ಭಾರತೀಯ ಅಂಚೆ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಪಿಂಚಣಿದಾರರ ಮನೆ ಬಾಗಿಲಿಗೆ ಡಿಜಿಟಲ್ ಲೈಫ್ ಪ್ರಮಾಣ ಪತ್ರವನ್ನು ಸಲ್ಲಿಸಲು ವ್ಯವಸ್ಥೆ ಮಾಡಿದೆ.

ರಾಜ್ಯ ಸರ್ಕಾರದ ಪಿಂಚಣಿದಾರರಿಗೆ/ಕುಟುಂಬ ಪಿಂಚಣಿದಾರರಿಗೆ ಡಿಜಿಟಲ್ ಲೈಫ್ ಸರ್ಟಿಫಿಕೇಟ್ (ಡಿಎಲ್.ಸಿ) ಸೇವೆಗಳನ್ನು ಸುಲಭವಾಗಿ ಒದಗಿಸಲು, ಖಜಾನೆ ಆಯುಕ್ತರೊಂದಿಗೆ ಭಾರತೀಯ ಅಂಚೆ ಇಲಾಖೆಯಡಿಯಲ್ಲಿ ಬರುವ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಎಂಒಯುಗೆ ಸಹಿ ಹಾಕಿದೆ. ಈ ಪ್ರಕಾರ ನ.1 ರಿಂದ ನ.30 ರವರೆಗಿನ ಮಸ್ಟರಿಂಗ್ ಅವಧಿಯಲ್ಲಿ 5.4 ಲಕ್ಷಕ್ಕಿಂತ ಹೆಚ್ಚು ಕರ್ನಾಟಕ ಸರಕಾರದ ಪಿಂಚಣಿದಾರರು, ಕುಟುಂಬ ಪಿಂಚಣಿದಾರರಿಗೆ ಡಿಎಲ್‌ಸಿ ಸೇವೆಗಳನ್ನು ಒದಗಿಸುತ್ತದೆ.

ಪಿಂಚಣಿದಾರರು ತಮ್ಮ ಡಿಜಿಟಲ್ ಲೈಫ್ ಪ್ರಮಾಣ ಪತ್ರವನ್ನು ಕೆಲವೇ ನಿಮಿಷಗಳಲ್ಲಿ ಪೋಸ್ಟ್ ಸ್ಕ್ಯಾನ್ ಮೂಲಕ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ಪಿಪಿಒ ಸಂಖ್ಯೆ ಮತ್ತು ಪಿಂಚಣಿದಾರರ ಬ್ಯಾಂಕ್ ಖಾತೆಯ ವಿವರಗಳೊಂದಿಗೆ ತಮ್ಮ ಬಯೋಮೆಟ್ರಿಕ್ (ಬೆರಳಚ್ಚು) ವೆರಿಫೈ ಮಾಡಿ ಸಲ್ಲಿಸಬಹುದು.

ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (ಐಪಿಪಿಬಿ)ಅನ್ನು ಸೆ.1, 2018 ರಂದು ರಾಷ್ಟ್ರವ್ಯಾಪಿ ಪ್ರಾರಂಭಿಸಲಾಯಿತು. ಐಪಿಪಿಬಿಯ ಸೇವೆಗಳು ಈಗಾಗಲೇ ಸೇರ್ಪಡೆಗೊಂಡಿರುವ 8 ಕೋಟಿಗೂ ಹೆಚ್ಚು ಗ್ರಾಹಕರಿಗೆ ಹಾಗೂ ಇನ್ನಿತರರಿಗೆ, ದೇಶಾದ್ಯಂತ 1,36,000 ಅಂಚೆ ಕಚೇರಿಗಳ ಮೂಲಕ ಲಭ್ಯವಿದೆ. ಕರ್ನಾಟಕದಲ್ಲಿ ಐಪಿಪಿಬಿಯ 31 ಶಾಖೆಗಳನ್ನು ಹೊಂದಿದ್ದು ಅದರ ಜೊತೆಗೆ 9500ಕ್ಕೂ ಹೆಚ್ಚು ಪೋಸ್ಟ್ ಸ್ಕ್ಯಾನ್‌ಗಳು ಅವರ ದೈನಂದಿನ ಡೆಲಿವರಿ ಬೀಟ್‌ನಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ನೀಡಲು ಸ್ಮಾರ್ಟ್ ಫೋನ್ ಮತ್ತು ಬಯೋಮೆಟ್ರಿಕ್ ಸಾಧನಗಳನ್ನು ಹೊಂದಿದ್ದಾರೆ.

ಪಿಂಚಣಿದಾರರು, ಕುಟುಂಬ ಪಿಂಚಣಿದಾರರು ತಮ್ಮ ಹತ್ತಿರದ ಅಂಚೆ ಕಚೇರಿಯಲ್ಲಿ ಅಥವಾ ಪೋಸ್ಟ್ ಸ್ಕ್ಯಾನ ಮೂಲಕ ಕೇವಲ 70 ರೂ. (ಜಿಎಸ್‌ಟಿ ಸೇರಿದಂತೆ) ಶುಲ್ಕ ನೀಡಿ ಈ ಸೌಲಭ್ಯವನ್ನು ಪಡೆದು ತಮ್ಮ ಡಿಜಿಟಲ್ ಲೈಫ್ ಪ್ರಮಾಣ ಪತ್ರವನ್ನು ಸಲ್ಲಿಸಬಹುದಾಗಿದೆ. ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

ಶ್ರೀಕಾಡ ಬಸವೇಶ್ವರಸ್ವಾಮಿ ವೈಭವದ ಜಾತ್ರಾ ಮಹೋತ್ಸವ

ಬೇಗೂರು(ಗುಂಡ್ಲುಪೇಟೆ): ಸಮೀಪದ ಕೊಡಗಾಪುರ ಗ್ರಾಮದಲ್ಲಿ ಶ್ರೀಕಾಡ ಬಸವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಗ್ರಾಮದಲ್ಲಿ ಸಮಾವೇಶಗೊಂಡ ಗ್ರಾಮಸ್ಥರು ಕಾಡ ಬಸವೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ರಥದಲ್ಲಿರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಈ ಜಾತ್ರಾ ಮಹೋತ್ಸವದಲ್ಲಿ ನಿಟ್ರೆ, ಸೋಮಹಳ್ಳಿ, ಹೊಸಪುರ, ಬೇಗೂರು, ಕುಲಗಾಣ, ಕಬ್ಬಹಳ್ಳಿ ಸೇರಿದಂತೆ ಬೆಂಗಳೂರು, ತಮಿಳುನಾಡಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾದರು.



ಬೆಳೆ ವಿಮೆ, ಪರಿಹಾರ ವಿವಿಧ ಸೌಲಭ್ಯ ಪಡೆಯಲು ಎಫ್‌ಐಡಿ ಕಡ್ಡಾಯ



ಚಾಮರಾಜನಗರ ನ.18– ಬೆಳೆ ಪರಿಹಾರ, ಬೆಳೆ ವಿಮೆ, ಬೆಳೆಯ ಸಾಲ, ಬೆಂಬಲ ಬೆಲೆ ಮತ್ತು ಇತರ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ರೈತರ ಗುರುತಿನ ದಾಖಲಾತಿ (ಎಫ್‌ಐಡಿ) ಕಡ್ಡಾಯ ಎಂದು ಚಾಮರಾಜನಗರ ತಾಲೂಕು ತಹಸೀಲ್ದಾರ್ ಬಸವರಾಜು ತಿಳಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ಇಂದು ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ರೈತರು ಕಡ್ಡಾಯವಾಗಿ ಎಫ್‌ಐಡಿ ಮಾಡಿಸಿಕೊಳ್ಳಬೇಕು, ಈಗಾಗಲೇ ಆಗಿದ್ದಲ್ಲಿ ಸಂಬಂಧಿಸಿದ ಎಲ್ಲಾ ಸರ್ವೆ ನಂಬರ್‌ಗಳು ಜೋಡಣೆಯಾಗಿದೆಯೇ ಅಥವಾ ಇಲ್ಲವೋ ಎಂಬ ಬಗ್ಗೆ ಕೂಡಲೇ ಪರಿಶೀಲಿಸಿಕೊಳ್ಳಬೇಕು. ಜಂಟೀ ಖಾತೆದಾರರಾಗಿದ್ದಲ್ಲಿ ಖಾತೆದಾರರು ಕಡ್ಡಾಯವಾಗಿ ಆಧಾರ್ ಕಾರ್ಡ್, ಇತ್ತೀಚಿನ ಪಹಣಿಗಳು, ಬ್ಯಾಂಕ್ ಪಾಸ್ ಪುಸ್ತಕದ ನಕಲು ಪ್ರತಿ, ಜಾತಿ ಪ್ರಮಾಣ ಪತ್ರ, ಈ ದಾಖಲೆಗಳೊಂದಿಗೆ ಕಂದಾಯ ಇಲಾಖೆ, ತೋಟಗಾರಿಕೆ ಇಲಾಖೆ, ರೈತ ಸಂಪರ್ಕ ಕೇಂದ್ರಗಳು, ರೇಷ್ಮೆ ಇಲಾಖೆ ಹಾಗೂ ಪಶು ಸಂಗೋಪನೆ ಇಲಾಖೆಗಳನ್ನು ಸಂಪರ್ಕಿಸಿ ಎಫ್‌ಐಡಿ ನೋಂದಣಿ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಸಹಾಯಕ ಕೃಷಿ ನಿರ್ದೇಶಕರಾದ ಸಂದೀಪ್ ಕೆ.ಬಿ. ಹಾಗೂ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

ನ.21ರಂದು ಚಾಮರಾಜನಗರದಲ್ಲಿ ವಿಕಲಚೇತನರಿಗೆ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆ

ಚಾಮರಾಜನಗರ, ನ.18– ವಿಶ್ವ ವಿಕಲಚೇತನರ ದಿನಾಚರಣೆಯ ಅಂಗವಾಗಿ ನ.21ರಂದು ಜಿಲ್ಲೆಯ ವಿಕಲಚೇತನರಿಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನ.21 ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಆವರಣದಿಂದ ಜಾಥಾ ಪ್ರಾರಂಭವಾಗಲಿದೆ. ನಂತರ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವ 6 ವರ್ಷ ಮೇಲ್ಪಟ್ಟ ದೈಹಿಕ, ಶ್ರವಣ ದೋಷ, ದೃಷ್ಟಿದೋಷ ಹಾಗೂ ಬುದ್ಧಿಮಾಂದ್ಯ ವಿಶೇಷಚೇತನರು ಗುರುತಿನ ಚೀಟಿಯನ್ನು ತರಬೇಕು.

ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಸಹಾಯವಾಣಿ ದೂರವಾಣಿ ಸಂಖ್ಯೆ 08226–224688, ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಾದ ಚಾಮರಾಜನಗರ–ರಾಜೇಶ್ (ಮೊಬೈಲ್ ಸಂಖ್ಯೆ 8073716208), ಕೊಳ್ಳೇಗಾಲ–ಕವಿರತ್ನ (ಮೊಬೈಲ್ ಸಂಖ್ಯೆ 7892715408), ಗುಂಡ್ಲುಪೇಟೆ–ಮಂಜುಳ (ಮೊಬೈಲ್ ಸಂಖ್ಯೆ 9742423332), ಯಳಂದೂರು–ಮಹದೇವಮ್ಮ (ಮೊಬೈಲ್ ಸಂಖ್ಯೆ 9740164149) ಸಂಪರ್ಕಿಸುವಂತೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಎಸ್‌ಎಸ್ ಉನ್ನತ ಶಿಕ್ಷಣ, ಸಂಶೋಧನಾ ಅಕಾಡೆಮಿಯ 14ನೇ ಘಟಿಕೋತ್ಸವ ನಾಳೆ

2546 ಪದವಿ, 49 ಡಾಕ್ಟರ್ ಆಫ್ ಫಿಲಾಸಫಿ ಪದವಿ, 55 ವಿದ್ಯಾರ್ಥಿಗಳಿಗೆ 84 ಪದಕ ಪ್ರದಾನ



ಮೈಸೂರು,ನ.18(ಆರ್‌ಕೆ)–ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 14ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ವನ್ನು ಮೈಸೂರಿನ ಶಿವರಾತ್ರೀಶ್ವರನಗರದ ಅಕಾಡೆಮಿ ಆವರಣದಲ್ಲಿ ಏರ್ಪಡಿಸಲಾಗಿದೆ.

ಸೋಮವಾರ ಬೆಳಗ್ಗೆ 11 ಗಂಟೆಗೆ ಸುತ್ತೂರು ಮಠಾಧೀಶರಾದ ಸಂಸ್ಥೆಯ ಕುಲಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯುವ ಸಮಾರಂಭದಲ್ಲಿ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಅಧ್ಯಕ್ಷ ಪ್ರೊ.ಎಂ. ಜಗದೀಶ್ ಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಘಟಿಕೋತ್ಸವ ಭಾಷಣ ಮಾಡುವರು.

ಸಂಸ್ಥೆಯ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕುಲಪತಿ ಡಾ.ಸುರಿಂದರ್ ಸಿಂಗ್, ಕುಲಸಚಿವ ಡಾ.ಮಂಜುನಾಥ, ಪರೀಕ್ಷಾ ನಿಯಂತ್ರಕ ಡಾ.ಸುಧೀಂದ್ರ ಭಟ್ ಹಾಗೂ ಪ್ರಾಧ್ಯಾಪಕರು ಘಟಿಕೋತ್ಸವದ ಮಾಹಿತಿ ನೀಡಿದರು.

2546 ಅಭ್ಯರ್ಥಿಗಳಿಗೆ ವಿವಿಧ ಪದವಿ, ಡಿಪ್ಲೊಮಾ ಪ್ರಮಾಣಪತ್ರ, 49 ಮಂದಿಗೆ ಡಾಕ್ಟರ್ ಆಫ್ ಫಿಲಾಸಫಿ ಪದವಿ, 55 ಮಂದಿಗೆ 84 ಪದಕ ಹಾಗೂ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಟೈಮ್ಸ್ ಹೈಯರ್ ಎಜುಕೇಷನ್ ವಿಶ್ವ ವಿವಿ ಶ್ರೇಯಾಂಕ–2023ರಲ್ಲಿ ಜೆಎಸ್‌ಎಸ್ ಎಎಚ್‌ಇಆರ್ 351ರಿಂದ 400 ಶ್ರೇಯಾಂಕ ಪಟ್ಟಿಯಲ್ಲಿದ್ದು ದೇಶದಲ್ಲೇ 2ನೇ ಸ್ಥಾನ ಪಡೆದಿದೆ.

ಟೈಮ್ಸ್ ಹೈಯರ್ ಎಜುಕೇಷನ್ ಏಷಿಯಾ ಶ್ರೇಯಾಂಕದಲ್ಲಿ 68ನೇ ಸ್ಥಾನ, ವಿಷಯವಾರು ಶ್ರೇಯಾಂಕದಲ್ಲಿ ವಿಶ್ವದ 126–150 ಶ್ರೇಯಾಂಕ ಪಟ್ಟಿಯಲ್ಲಿದೆ. ಸಂಸ್ಥೆಯ ಫಾರ್ಮಸಿ ವಿಭಾಗಕ್ಕೆ 11ನೇ ಸ್ಥಾನ, ದಂತ ವೈದ್ಯಕೀಯ ವಿಭಾಗದಲ್ಲಿ ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯವು 11ನೇ ಸ್ಥಾನ, ದೇಶದ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪೈಕಿ 37ನೇ ಸ್ಥಾನ ಗಳಿಸಿದೆ.

ಅಖಿಲ ಭಾರತೀಯ ಶಿಕ್ಷಾ ಸಂಗಮ 2023ರಲ್ಲಿ ಭಾಗವಹಿಸಿರುವ ಸಂಸ್ಥೆಯು, ಶೈಕ್ಷಣಿಕ ಪ್ರಗತಿ ಸಾಧಿಸಿ ಸಂಶೋಧನೆ, ಪ್ರಾಜೆಕ್ಟ್‌ಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದೆ ಎಂದು ಕುಲಸಚಿವರು ತಿಳಿಸಿದರು.

ಅಕ್ಯುಪೇಷನಲ್ ಥೆರಪಿ ಡೀನ್ ಡಾ.ಅಮಿತಾಬ್ ಕಿಶೋರ್, ಡೀನ್ (ರಿಸರ್ಚ್) ಡಾ. ಪ್ರಶಾಂತ ವಿಶ್ವನಾಥ್, ಡಾ.ಕೆ.ಎ.ರವೀಶ್, ಡಾ.ಮಧು ಸೂದನ್ ಪುರೋಹಿತ್, ಡಾ. ಪ್ರಮೋದ್‌ಕುಮಾರ್, ಡಾ.ವಿಶಾಲ್‌ಕುಮಾರ್ ಗುಪ್ತಾ ಸೇರಿದಂತೆ ಹಲ ವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪತ್ರಾಗಾರ ಇಲಾಖೆಯ 1.20 ಕೋಟಿ ಪುಟ ವೆಬ್‌ಸೈಟ್‌ನಲ್ಲಿ ಅಳವಡಿಕೆ



ಮೈಸೂರು, ನ.18(ಜಿಎ)–ಪತ್ರಾಗಾರ ಇಲಾಖೆಯಲ್ಲಿ ಗಣಕೀಕರಗೊಂಡ ದಾಖಲೆಗಳನ್ನು ಇಲಾಖಾ ಅಂತರ್ಜಾಲ/ವೆಬ್‌ನಲ್ಲಿ ಅಳವಡಿಸಲಾಗಿದ್ದು, ಇದುವರೆವಿಗೂ ಒಟ್ಟು 1.20 ಕೋಟಿ ಪುಟಗಳನ್ನು ಸೇರಿಸಲಾಗಿದೆ ಎಂದು ವಿಭಾಗೀಯ ಪತ್ರಾಗಾರ ಕಛೇರಿಯ ಹಿರಿಯ ಸಹಾಯಕ ನಿರ್ದೇಶಕ ಹೆಚ್.ಎಲ್ ಮಂಜುನಾಥ್ ತಿಳಿಸಿದರು.

ನಗರದ ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ಅಧ್ಯಯನ ವಿಭಾಗದಲ್ಲಿ ವಿಭಾಗೀಯ ಪತ್ರಾಗಾರ ಕಚೇರಿ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಇತಿಹಾಸ ಸಂಶೋಧನೆಯಲ್ಲಿ ಪತ್ರಾಗಾರದ ದಾಖಲೆಗಳು' ವಿಷಯ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಇತಿಹಾಸ ಪುನರ್ ರಚಿಸಲು, ವಿಶ್ಲೇಷಿಸಲು ಲಿಖಿತ ರೂಪದ ದಾಖಲೆಗಳು ಅತ್ಯಮೂಲ್ಯ. ಅವುಗಳ ಅಧ್ಯಯನ ಅತ್ಯಂತ ಮಹತ್ವದ್ದಾಗಿದೆ. ಮಹತ್ವದ ದಾಖಲೆಗಳ ಸಂರಕ್ಷಣೆ ಕಾರ್ಯವನ್ನು ಪತ್ರಾಗಾರ ಇಲಾಖೆ ಮಾಡುತ್ತಾ ಬಂದಿದೆ. ಮೈಸೂರು ಪ್ರಾಂತ್ಯ ಕುರಿತಂತೆ ಹಲವು ಶತಮಾನಗಳ ಹಳೆಯ ಸಾವಿರ ದಾಖಲೆಗಳು ಉಲ್ಲೇಖಗಳ ಸಮೇತ ಲಭ್ಯವಿದೆ. ಆ ದಾಖಲೆಯನ್ನು ವಿದ್ಯಾರ್ಥಿಗಳು ಓದುವ ಹವ್ಯಾಸ ಬೆಳೆಸಿಕೊಂಡು ಅಧ್ಯಯನ ನಡೆಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಇಲಾಖೆಯ ಬಹುತೇಕ ಅನುಕೂಲವನ್ನು ಸದುಪಯೋಗ ಪಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಪತ್ರಾಗಾರ ಕಚೇರಿಯಲ್ಲಿರುವ ದಾಖಲೆಗಳನ್ನು ಸರ್ಕಾರಿ ಕಚೇರಿ, ಸಂಸ್ಥೆಗಳಿಗೆ ಹಾಗೂ ಸಂಶೋಧಕ ವಿದ್ವಾಂಸರುಗಳ ಅನುಕೂಲತೆ ಪರಿಗಣಿಸಿ ವರ್ಗೀಕರಿಸಲಾಗಿದೆ. ಐತಿಹಾಸಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ಅವುಗಳ ಸಂರಕ್ಷಣೆ ಬಗ್ಗೆ ಗಮನ ಹರಿಸುವುದು ಅತ್ಯಂತ ಮಹತ್ಕಾರ್ಯವಾಗಿದ್ದು, ಈ ನಿಟ್ಟಿನಲ್ಲಿ ದಾಖಲೆಗಳ ಸಂರಕ್ಷಣೆಗೆ ಅನೇಕ ಕ್ರಮ ಕೈಗೊಂಡಿದೆ ಎಂದು ತಿಳಿಸಿದರು. ಮೈಸೂರು ಅರಮನೆ ಆಡಳಿತದ ವಿವಿಧ ಇಲಾಖೆಗಳ ದಿನನಿತ್ಯದ ಆಡಳಿತದ ವ್ಯವಹಾರದಲ್ಲಿ ಸಂಬಂಧಿಸಿದಂತೆ 10,000 ಕಡತಗಳನ್ನು ಅಪ್ರಕಟಿತ ದಾಖಲೆಗಳ ಗುಂಪಿನಲ್ಲಿ ಗುರುತಿಸಲಾಗಿದೆ ಎಂದರು.

ಪ್ರಾಧ್ಯಾಪಕರಾದ ಪ್ರೊ.ಕೆ.ಸದಾಶಿವ ಮಾತನಾಡಿ, ಇತಿಹಾಸ ವನ್ನು ಶಾಶ್ವತವಾಗಿ ಉಳಿಸಿ ಸಂರಕ್ಷಿಸುವ ದಿಕ್ಕಿನಲ್ಲಿ ಪತ್ರಾಗಾರ ಇಲಾಖೆ ತೊಡಗಿದ್ದು, ಒಂದು ಮಾಹಿತಿ ಗಣಿಯಾಗಿದೆ. ಇಲ್ಲಿ ಪುಸ್ತಕಗಳಲ್ಲಿ ಸಿಗದ ಅನಿರೀಕ್ಷಿತವಾದ ನಿಖರ ಮಾಹಿತಿ ಲಭ್ಯವಾಗುತ್ತದೆ. ಇದನ್ನು ಸಮರ್ಥವಾಗಿ ಬಳಸಿಕೊಂಡು ಇತಿಹಾಸ ಮರು ಕಟ್ಟುವಲ್ಲಿ ಭಾಗಿಯಾಗೋಣ' ಎಂದರು.

ಇತಿಹಾಸ ವಿಭಾಗದ ವಿದ್ಯಾರ್ಥಿಗಳಿಗೆ ಪ್ರತಿಯೊಂದು ವಿಷಯಗಳು ದಾಖಲೆ ಸಮೇತವಾಗಿ ಅಭ್ಯಾಸ ನಡೆಸಲು ಪೂರಕವಾದ ವಾತಾವರಣ ಪತ್ರಾಗಾರ ಇಲಾಖೆ ಸೃಷ್ಟಿಸಿದೆ. ಸಂಶೋಧನೆ ಮತ್ತು ಜ್ಞಾನದ ಆಳ ಹೆಚ್ಚಿಸಲು ಸಹಕಾರಿಯಾಗಿದೆ ಎಂದ ಅವರು, ನಗರದ ದಂಗೆ, ಮೈಸೂರು ಸಂಸ್ಥಾನ, ದಸರಾ, ಮುಮ್ಮಡಿ ಕೃಷ್ಣರಾಜ ಒಡೆಯರ್ ಕುರಿತ ಹಲವು ವಿಷಯ ತಿಳಿಸಿದರು. ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷ ಮತ್ತು ಪ್ರಾಧ್ಯಾಪಕ ಪ್ರೊ.ವೈ.ಎಚ್. ನಾಯಕ ವಾಡಿ, ಪ್ರೊ.ಸಿ.ಗುರುಸಿದ್ದಯ್ಯ ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಹಣಿಯಲು ಕುಮಾರಸ್ವಾಮಿ ಶತಪ್ರಯತ್ನ

ಹತ್ತಾರು ವಿಚಾರಗಳ ಬಗ್ಗೆ ಮಾತನಾಡುತ್ತೇನೆ. ಹಾಗೆಯೇ ಅಂದು ಸಾಮಾನ್ಯ ವಾಗಿಯೇ ಮಾತನಾಡಿದ್ದೇನೆ. ಅಂದು ನಾನು ಹಣದ ವಿಚಾರ ಮಾತನಾಡಿದ್ದರೆ ಸ್ಪಷ್ಟನೆ ಕೊಡಬಹುದಿತ್ತು ಆದರೂ ಜನರಲ್ಲಿ ಅನುಮಾನ ಬರಬಾರದೆಂದು ಸ್ಪಷ್ಟೀಕರಣ ಕೊಡುತ್ತಿದ್ದೇನೆ ಎಂದರು. ನಾನು ಅಂದು ಸಿಎಸ್‌ಆರ್ ಫಂಡ್ ಬಗ್ಗೆ ಮಾತನಾಡಿ ದ್ದೇನೆ. ಲಿಸ್ಟ್ ಎಂದ ಕೂಡಲೇ ವರ್ಗಾವಣೆ ಎಂದು ಅರ್ಥೈಸಿ ಬಿಡುವುದೇ? ಎಂದು ಪ್ರಶ್ನಿಸಿದ ಡಾ.ಯತೀಂದ್ರ, ಇವರ ಇಡೀ ಕುಟುಂಬವೇ ರಾಜಕಾರಣದಲ್ಲಿದೆ. ಹಾಗೆಂದ ಮಾತ್ರಕ್ಕೆ ಅವರೆಲ್ಲಾ ವರ್ಗಾವಣೆ ದಂಧೆಯಲ್ಲಿದ್ದಾರೆ ಎಂದು ಆರೋಪ ಮಾಡಲು ಸಾಧ್ಯವೆ? ಎಂದು ಮರು ಪ್ರಶ್ನಿಸಿದರು. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ಮಾಡಿರುವ ಎಲ್ಲಾ ವರ್ಗಾವಣೆಯನ್ನೂ ಹಣ ಪಡೆದು ಮಾಡಿದ್ದಾರೆಯೇ, ಎಲ್ಲವೂ ವರ್ಗಾವಣೆ ದಂಧೆಯೇ ಎಂದು ಕೇಳಿದರು. ಆಡಳಿತಾತ್ಮಕವಾಗಿ ವರ್ಗಾವಣೆ ಮಾಡಿದರೆ ತಪ್ಪೇನು, ಎಲ್ಲಾ ವರ್ಗಾವಣೆಯನ್ನ ಹಣದ ದೃಷ್ಟಿಯಲ್ಲಿ ನೋಡಿದರೆ ಹೇಗೆ ಎಂದ ಡಾ. ಯತೀಂದ್ರ, ಕುಮಾರಸ್ವಾಮಿ ಯವರಿಗೆ ಸರಣಿ ಪ್ರಶ್ನೆಗಳನ್ನು ಹಾಕಿದರು ಆರೋಪ ಮಾಡುವಾಗ ದಾಖಲೆ ಇಟ್ಟುಕೊಂಡು ಮಾತನಾಡಬೇಕು. ದಾಖಲೆ ಇಲ್ಲದೆ ಸುಖಾಸುಮ್ಮನೆ ಆರೋಪ ಮಾಡಬೇಡಿ. ನನ್ನ ಪಾಡಿಗೆ ನಾನು ಕ್ಷೇತ್ರದ ಕೆಲಸ ಮಾಡುತ್ತಿದ್ದೇನೆ. ಎಲ್ಲಾ ವಿಚಾರಕ್ಕೆ ನನ್ನ ಹೆಸರನ್ನು ಡ್ರ್ಯಾಗ್ ಮಾಡಬೇಡಿ ಎಂದು ಡಾ.ಯತೀಂದ್ರ ಅವರು ಕುಮಾರಸ್ವಾಮಿಗೆ ಸಲಹೆ ನೀಡಿದರು. ಇಂತಹ ಆರೋಪ ಮಾಡುವುದು ನೀಚ ರಾಜಕಾರಣ ಎಂದು ಕಿಡಿಕಾರಿದ ಡಾ.ಯತೀಂದ್ರ ನಮ್ಮ ತಂದೆ ವಿಚಾರದಲ್ಲಿ ಏನೂ ಆರೋಪ ಮಾಡಲು ಆಗುತ್ತಿಲ್ಲವೆಂದು ರಾಜಕೀಯ ಕಾರಣಕ್ಕೆ ನಮ್ಮ ಕುಟುಂಬವನ್ನು ಬಳಸಿಕೊಳ್ಳುತ್ತಿದ್ದಾರೆ. ನಮ್ಮನ್ನು ಅಣಿಯುವ ಪ್ರಯತ್ನವನ್ನು ಮೊದಲಿನಿಂದಲೂ ಮಾಡುತ್ತಿದ್ದಾರೆ. ಯಾವುದಾದರೂ ಒಂದು ಪ್ರಕರಣದಲ್ಲಿ ನಮ್ಮ ಕುಟುಂಬ ಸಿಲುಕಿಸಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಭಾರತೀಯ ವಿದ್ಯಾ ಭವನದಲ್ಲಿ ತಿಂಗಳ ಸಂಗೀತ ಕಾರ್ಯಕ್ರಮ

ಉದಯೋನ್ಮುಖ ಸಂಗೀತ ವಿದ್ವಾನ್ ರಾವ್ ಆರ್.ಶರತ್ ಅವರ ಗಾಯನಕ್ಕೆ ಮಾರು ಹೋದ ಶ್ರೋತೃಗಳು



ಮೈಸೂರಿನ ಭಾರತೀಯ ವಿದ್ಯಾ ಭವನ(ಬಿವಿಬಿ)ದಲ್ಲಿ ಶನಿವಾರ ನಡೆದ 'ಸುಗಮ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ'ವನ್ನು ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷರೂ ಆದ 'ಮೈಸೂರು ಮಿತ್ರ ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಎಡದಿಂದ ಮೂರನೇಯವರು)ಅವರು ಉದ್ಘಾಟಿಸಿದರು. (ಎಡದಿಂದ) ವಿದುಷಿ ಡಾ.ತುಳಸಿ ರಾಮಚಂದ್ರ ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್ ಹಾಗೂ ವಿದ್ವಾನ್ ರಾವ್ ಆರ್. ಶರತ್ ಅವರನ್ನು ಕಾಣಬಹುದು.



ನಂತರ ರಾವ್ ಆರ್.ಶರತ್ ಅವರ ಗಾಯನ ಕಾರ್ಯಕ್ರಮ ನೆರವೇರಿತು

ಮೈಸೂರು, ನ.18(ಎಂಕೆ)– ಮೈಸೂರಿನ ಪ್ರತಿಷ್ಠಿತ ಭಾರತೀಯ ವಿದ್ಯಾ ಭವನ(ಬಿವಿಬಿ)ದ ಕಲಾ ವಿಭಾಗದ ವತಿಯಿಂದ ಆಯೋಜಿಸಿದ್ದ ತಿಂಗಳ 'ಸುಗಮ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ' ಸಂಗೀತ ಪ್ರಿಯರ ಮನತಣಿಸಿತು.

ಬಿವಿಬಿಯ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಮೈಸೂರಿನ ಖ್ಯಾತ ವಯೋಲಿನ್ ವಾದಕ ವಿದ್ವಾನ್ ಮೈಸೂರು ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ ಮಾಡುತ್ತಿರುವ ಹಾಗೂ 16ನೇ ವರ್ಷಕ್ಕೆ ವಿದ್ವತ್ ಪಡೆದು, 'ಎಂ' ಮ್ಯೂಸಿಕ್(ಮಾಸ್ಟರ್ ಮ್ಯೂಸಿಕ್) ಪದವಿಯಲ್ಲಿ ಚಿನ್ನದ ಪದಕ ಪಡೆದಿರುವ ವಿದ್ವಾನ್ ರಾವ್ ಆರ್.ಶರತ್ ಅವರ ಸುಶ್ರಾವ್ಯ ಗಾಯನ ಮುಸ್ಸಂಜೆಯ ಹಿತಾನುಭವ ನೀಡಿತು.

ಆರಂಭದಲ್ಲಿ 'ಕರ್ನಾಟಕ ಶುದ್ಧ ಸಾವೇರಿ' ರಾಗದಲ್ಲಿ 'ಏಕಾಮ್ರೇಶ ನಾಯ್ಕೆ', ವರಕವಿ ದ.ರಾ.ಬೇಂದ್ರೆ ರಚಿತ 'ಟೊಂಕದ ಮ್ಯಾಲೆ' ಹಾಡನ್ನು 'ಜೋಗ್' ರಾಗದಲ್ಲಿ ಹಾಗೂ 'ಕಾಂತಾರ' ಚಿತ್ರದ 'ವರಾಹ ರೂಪಂ' ಹಾಡನ್ನು ಸುಮಧುರವಾಗಿ ಹಾಡುವ ಮೂಲಕ ನೆರೆದಿದ್ದವರ ಗಮನ ಸೆಳೆದರು. ಹಾಗೆಯೇ 'ವಿಜಯ ನಾಗವಿ' ರಾಗದಲ್ಲಿ 'ವಿಜಯ ನಾಂಬಿಕೆ', 'ತಿಲ್ಲಾನ' ಮತ್ತು 'ಕದನ ಕುತೂಹಲ' ರಾಗಗಳಲ್ಲಿ ಹಾಡುವ ಮೂಲಕ ಸಂಗೀತ ಸುಧೆ ಹರಿಸಿದರು.

ಇವರಿಗೆ ವಿದ್ವಾನ್ ಪ್ರದೇಶಚಾರ್ ಪಿಟಿಲು, ನಿಕ್ಷಿತ್ ಪುತ್ತೂರು ಮೃದಂಗ ಹಾಗೂ ವಿದ್ವಾನ್ ಬಿ.ಎಸ್.ರಘು ನಂದನ್ ಘಟಂ ಪಕ್ಕವಾದ್ಯದಲ್ಲಿ ಸಾಥ್ ನೀಡಿದರು. ಭಾರತೀಯ ವಿದ್ಯಾ ಭವನದ ಕಲಾ ಭಾರತಿ ಕರ್ನಾಟಕ ಸಂಗೀತ ವಿಭಾಗದ ವಿದ್ಯಾರ್ಥಿಗಳು ಪ್ರಾರ್ಥನೆ ಮೂಲಕ ಕಾರ್ಯಕ್ರಮಕ್ಕೆ ಸಂಭ್ರಮದ ಆರಂಭ ನೀಡಿದರು.

ಇದಕ್ಕೂ ಮುನ್ನ ಸುಗಮ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಭಾರತೀಯ ವಿದ್ಯಾ ಭವನ ಮೈಸೂರು ಕೇಂದ್ರದ ಅಧ್ಯಕ್ಷರೂ ಆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ರಾದ ಡಾ.ಕೆ.ಬಿ.ಗಣಪತಿಯವರು ಉದ್ಘಾಟಿಸಿದರು. ಅವರೊಂದಿಗೆ ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಕಾರ್ಯಕ್ರಮದ ಸಂಚಾಲಕರಾದ ವಿದುಷಿ ಡಾ.ತುಳಸಿ ರಾಮಚಂದ್ರಹಾಗೂ ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್ ಉಪಸ್ಥಿತರಿದ್ದರು.

ತಹಶೀಲ್ದಾರ್‌ಗಳ ವರ್ಗಾವರ್ಗಿ

ಬೆಂಗಳೂರು, ನ.18– ಇನ್ಸ್‌ಪೆಕ್ಟರ್‌ಗಳ ವರ್ಗಾವಣೆ ಬೆನ್ನಲ್ಲೇ 13 ತಹಶೀಲ್ದಾರ್‌ಗಳ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಶನಿವಾರ ಆದೇಶಿಸಿದೆ.

ಮೈಸೂರು ಜಿಲ್ಲೆ ಹುಣಸೂರು ತಹಶೀಲ್ದಾರ್ ಎಸ್.ಯು.ಅಶೋಕ್ ಅವರನ್ನು ಖಾಲಿ ಇದ್ದ ಚಾಮರಾಜನಗರ ಜಿಲ್ಲಾಧಿಕಾರಿಗಳ ಕಚೇರಿ ಚುನಾವಣಾ ತಹಶೀಲ್ದಾರ್ ಸ್ಥಾನಕ್ಕೆ ವರ್ಗಾವಣೆ ಮಾಡಲಾಗಿದೆ. ಅವರ ಸ್ಥಾನಕ್ಕೆ ತಹಶೀಲ್ದಾರ್ ಗ್ರೇಡ್–2 ಜೆ.ಮಂಜುನಾಥ ಅವರನ್ನು ನಿಯೋಜಿಸಲಾಗಿದೆ.

ತಹಶೀಲ್ದಾರ್ ಗ್ರೇಡ್–2 ಹುದ್ದೆಯಲ್ಲಿದ್ದ ಕೆ.ಎಸ್.ಸೋಮಶೇಖರ್ ಮದ್ದೂರು ತಾಲೂಕು, ಎಸ್.ನವೀನ್ ಕುಮಾರ್ ಹಾಸನ ತಾಲೂಕು, ಜೆ.ಜಿ.ದತ್ತಾತ್ರೇಯ ಶಿರಾ ತಾಲೂಕು, ನರಸಪ್ಪ ಕಾರ್ಕಳ ತಾಲೂಕು, ಜಿ.ಎನ್.ಸುಧೀಂದ್ರ ಶ್ರೀನಿವಾಸಪುರ ತಾಲೂಕು, ಫಿರೋಜ್‌ಷಾ ಸೋಮನಕಟ್ಟಿ ಬ್ಯಾಡಗಿ ತಾಲೂಕು, ಕೆ.ಎಂ.ಗುರುಬಸವರಾಜು ಹರಿಹರ ತಾಲೂಕು, ಗ್ರೇಡ್–1 ಹುದ್ದೆಯಲ್ಲಿದ್ದ ಎಸ್.ಬಿ.ಕೂಡಲಗಿ ಇಳಕಲ್ ತಾಲೂಕು, ಪೃಥ್ವಿ ಸಾನಿಕಂ ಬೆಳ್ತಂಗಡಿ ತಾಲೂಕು, ಅನಂತ ಶಂಕರ ಅಂಕೋಲಾ ತಾಲೂಕು ತಹ ಶೀಲ್ದಾರ್ ಸ್ಥಾನಕ್ಕೆ ವರ್ಗಾವಣೆಗೊಂಡಿದ್ದಾರೆ.

ಬರೀ ಮೌಢ್ಯ, ಕಂದಾಚಾರಕ್ಕೆ ಜೋತುಬಿದ್ದರೆ ಶಿಕ್ಷಣಕ್ಕೆ ಬೆಲೆ ಇರುವುದಿಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ



ಮೈಸೂರಿನ ಬೆಳವಾಡಿಯಲ್ಲಿರುವ ಎಸ್‌ವಿಇಐ ಶಿಕ್ಷಣ ಸಂಸ್ಥೆ ರಜತ ಮಹೋತ್ಸವ ಹಾಗೂ ನೂತನ ಕಟ್ಟಡ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಿದರು. ಸುತ್ತೂರು ಶ್ರೀಗಳು, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಕೆ.ಹರೀಶ್ ಗೌಡ, ಸಂಸ್ಥೆ ಅಧ್ಯಕ್ಷ ಎಂ.ಕೆ.ಪೋತರಾಜ್ ಮತ್ತಿತರರಿದ್ದರು.

ಮೈಸೂರು, ನ.18(ಎಸ್‌ಬಿಡಿ)– ವೈಚಾರಿಕತೆ ಬೆಳೆಸಿಕೊಂಡರೆ ಮಾತ್ರ ಶಿಕ್ಷಣಕ್ಕೆ ಬೆಲೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಿಸಿದರು.

ಮೈಸೂರಿನ ಬೆಳವಾಡಿಯಲ್ಲಿರುವ ಸ್ವಾಮಿ ವಿವೇಕಾನಂದ ಎಜುಕೇಷನಲ್ ಇನ್ಸ್‌ಟಿಟ್ಯೂಟ್ (ಎಸ್‌ವಿಇಐ)ನ ರಜತ ಮಹೋತ್ಸವ ಹಾಗೂ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮೌಢ್ಯಗಳನ್ನು ಬಿಟ್ಟು ವೈಚಾರಿಕತೆ ಬೆಳೆಸಿಕೊಳ್ಳಬೇಕು ಎಂದು 850 ವರ್ಷಗಳ ಹಿಂದೆಯೇ ಬಸವಾದಿ ಶರಣರು ಜಾಗೃತಿ ಮೂಡಿಸಿದ್ದಾರೆ. ಶಿಕ್ಷಿತರಾದ ಮೇಲೆ ವೈಜ್ಞಾನಿಕ ಜ್ಞಾನ ಬೆಳೆಸಿಕೊಳ್ಳುವುದು ಅತ್ಯಂತ ಅವಶ್ಯ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಬಿ.ಎಸ್ಸಿ, ಎಂ.ಎಸ್ಸಿ, ಎಂಬಿಬಿಎಸ್ ಇನ್ನಿತರ ಪದವಿ ಪಡೆದು ಮತ್ತೆ ಮೌಢ್ಯ ಹಾಗೂ ಕಂದಾಚಾರಗಳಿಗೆ ಜೋತುಬಿದ್ದರೆ ತಮ್ಮ ಶಿಕ್ಷಣಕ್ಕೆ ಬೆಲೆ ಇರುವುದಿಲ್ಲ. ಅನ್ನ ಬೆಳೆಯುವ ರೈತ, ದೇಶ ರಕ್ಷಿಸುವ ಸೈನಿಕ ಹಾಗೂ ಮಕ್ಕಳ ಭವಿಷ್ಯ ರೂಪಿಸುವ ಶಿಕ್ಷಕರನ್ನು ಸಮಾಜದಲ್ಲಿ ತುಂಬಾ ಗೌರವಿಸಲಾಗುತ್ತದೆ. ಹಾಗಾಗಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ವೈಚಾರಿಕತೆ ಬೆಳೆಸುವ ಜವಾಬ್ದಾರಿ ಶಿಕ್ಷಕರದ್ದಾಗಿದೆ. ಮೊದಲು ಶಿಕ್ಷಕರು ವೈಚಾರಿಕತೆ ರೂಢಿಸಿಕೊಂಡರೆ ಮಾತ್ರ ಮಕ್ಕಳೂ ಅದನ್ನು ಅನುಸರಿಸುತ್ತಾರೆ. ಈ ನಿಟ್ಟಿನಲ್ಲಿ ಪೋಷಕರ ಜವಾಬ್ದಾರಿಯೂ ಪ್ರಮುಖವಾಗಿದೆ ಎಂದರು.

ಸಮಾಜಕ್ಕೆ ಸ್ಪಂದಿಸಬೇಕು: ಓದು–ಬರಹ ಕಲಿಯಲು, ಉದ್ಯೋಗ ಗಿಟ್ಟಿಸುವ ಉದ್ದೇಶದಿಂದ ಮಾತ್ರ ಶಿಕ್ಷಣ ಪಡೆಯಬಾರದು. ಶಿಕ್ಷಣ ಪಡೆದ ಮೇಲೆ ಸಮಾಜದೊಂದಿಗೆ ಸ್ಪಂದಿಸುವ ಜ್ಞಾನವಂತರಾಗಬೇಕು. ಸಾಮಾಜಿಕ ಜವಾಬ್ದಾರಿ ಅರಿತು ಸಾರ್ವಜನಿಕ ಸಮಸ್ಯೆಗಳನ್ನು ಪರಿಹರಿಸುವ ಶಕ್ತಿಯನ್ನು ಪ್ರತಿಯೊಬ್ಬ ವಿದ್ಯಾರ್ಥಿ ಬೆಳೆಸಿಕೊಳ್ಳಬೇಕು. ಇದು ಪಠ್ಯದಿಂದ ಸಾಧ್ಯವಾಗದಿದ್ದರೂ ಪಠ್ಯೇತರ ಚಟುವಟಿಕೆಗಳ ಮೂಲಕವಾದರೂ ಸಾಧಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಎಲ್ಲರೂ ಶಿಕ್ಷಿತರಾಗಬೇಕು: 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಶಿಕ್ಷಣ ಕಡ್ಡಾಯ. ಅದು ಮೂಲಭೂತ ಹಕ್ಕು ಆದರೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಎಲ್ಲರಿಗೂ ಶಿಕ್ಷಣ ನೀಡಲು ಸಾಧ್ಯವಾಗಿಲ್ಲ. ದೇಶದಲ್ಲಿ ಶಿಕ್ಷಿತರ ಪ್ರಮಾಣ ಶೇ.76ರಷ್ಟಿದ್ದು, ಇನ್ನೂ ಶೇ.24ರಷ್ಟು ಅವಿದ್ಯಾವಂತರಿದ್ದಾರೆ. ಎಲ್ಲರಿಗೂ ಶಿಕ್ಷಣ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರಗಳ ಪ್ರಯತ್ನ ಮುಂದುವರೆದಿದೆ. ಈ ನಿಟ್ಟಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳೂ ಸಹಕಾರಿಯಾಗಿವೆ. ಆದರೂ ಖಾಸಗಿ ಶಿಕ್ಷಣ ಸಂಸ್ಥೆಗಳು ಬಡ ಜನರ ಕೈಗೆಟುಕುವಂತೆ ಶಿಕ್ಷಣ ಕಲ್ಪಿಸಬೇಕು. ಇಂಗ್ಲಿಷ್ ಕಲಿಯಬೇಡಿ ಎಂದು ಹೇಳುವುದಿಲ್ಲ. ಆದರೆ ಕನ್ನಡ ಮಾಧ್ಯಮದಲ್ಲಿ ಕಲಿತರೆ ಹೆಚ್ಚು ಉಪಯೋಗ ಎಂದು ಹಲವು ತಜ್ಞರು ಅಭಿಪ್ರಾಯಿಸಿದ್ದಾರೆ ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಡಾ. ಹೆಚ್.ಸಿ.ಮಹದೇವಪ್ಪ, ಶಾಸಕ ಕೆ.ಹರೀಶ್ ಗೌಡ, ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ್, ಎಸ್‌ವಿಇಐ ಅಧ್ಯಕ್ಷ ಎಂ.ಕೆ.ಪೋತರಾಜ್, ಉಪಾಧ್ಯಕ್ಷ ಕೆ.ಎಂ.ರಾಜಶೇಖರ್, ಗೌರವ ಕಾರ್ಯದರ್ಶಿ ಬಿ.ಶಿವಲಿಂಗಪ್ಪ, ಖಜಾಂಚಿ ಟಿ.ಪ್ರಭಾಕರ ಶೆಟ್ಟಿ, ಕೋಮಲ ಪೋತರಾಜ್ ಮತ್ತಿತರರು ಉಪಸ್ಥಿತರಿದ್ದರು.

ಕೃಷಿಕ್ ಸರ್ವೋದಯ ಫೌಂಡೇಶನ್ ಅಧ್ಯಯನ ಕೊಠಡಿ ಉದ್ಘಾಟನೆ



ಮೈಸೂರು, ನ.18(ಎಸ್‌ಬಿಡಿ)– ಕೃಷಿಕ್ ಸರ್ವೋದಯ ಫೌಂಡೇಶನ್ ಮೈಸೂರು ಶಾಖೆಯ ಅಧ್ಯಯನ ಕೊಠಡಿ(ಸ್ಟಡಿ ಕ್ಯೂಬಿಕಲ್ಸ್ ರೂಮ್) ಉದ್ಘಾಟನೆ ಇಂದು ನೆರವೇರಿತು.

ಸಂಸ್ಥೆಯ ಸಂಸ್ಥಾಪಕ, ನಿವೃತ್ತ ಐಎಎಸ್ ಅಧಿಕಾರಿ ಡಾ.ವೈ.ಕೆ.ಪುಟ್ಟಸೋಮೇಗೌಡ ಕೊಠಡಿ ಉದ್ಘಾಟಿಸಿದರು. ಈ ವೇಳೆ ನಿವೃತ್ತ ಐಎಎಸ್ ಅಧಿಕಾರಿಗಳಾದ ಟಿ.ತಿಮ್ಮೇಗೌಡ, ಎಂ.ಕೆ.ಶಂಕರ ಲಿಂಗೇಗೌಡ, ನಿವೃತ್ತ ಕೆಎಎಸ್ ಅಧಿಕಾರಿ ಕೆ.ಎಂ. ಚಂದ್ರೇಗೌಡ, ಸಹ ಅಧ್ಯಕ್ಷರಾದ ಡಾ.ಎಸ್.ಟಿ. ರಾಮಚಂದ್ರ, ಎನ್.ನಂಜೇಗೌಡ, ಕಾರ್ಯ ದರ್ಶಿ ಬಿ.ಕೆ.ಶಿವಣ್ಣ, ಖಜಾಂಚಿ ಎಸ್.ವಿ.ಗೌಡಪ್ಪ, ಜಂಟಿ ಕಾರ್ಯದರ್ಶಿ ವೈ.ಕೆ.ಕೆಂಚೇಗೌಡ, ಶೈಕ್ಷಣಿಕ ಸಂಯೋಜಕ ಡಾ.ಜಿ.ಗೋವಿಂದ ರಾಜು ಹಾಗೂ ಕಾರ್ಯಕಾರಿಣಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಇದೇ ವೇಳೆ ಕೃಷಿಕ್ ಭವನದ ಆವರಣದಲ್ಲಿ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಅರಿವು ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಉನ್ನತಿಗೆ ಸಹಕಾರ ನೀಡುವ ಸಲುವಾಗಿ 30 ವರ್ಷಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ. ಪ್ರಯೋಜನ ಪಡೆದ ವಿದ್ಯಾರ್ಥಿ ಗಳು ಹಲವು ಕ್ಷೇತ್ರಗಳ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿನ ಸೌಕರ್ಯಗಳನ್ನು ಸದ್ಬಳಕೆ ಮಾಡಿಕೊಂಡು ಜೀವನದಲ್ಲಿ ಸಾಧಿಸಬೇಕು. ಈ ನಿಟ್ಟಿನಲ್ಲಿ ನಿರಂತರ ಅಧ್ಯಯನ ದೊಂದಿಗೆ ಹೆಚ್ಚು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಬೇಕು ಎಂದು ಸಲಹೆ ನೀಡಲಾಯಿತು. ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ಸ್ಪರ್ಧಾತ್ಮಕ ಪರೀಕ್ಷೆ ಗಳ ಕುರಿತು ಸಂಕ್ಷಿಪ್ತ ಮಾರ್ಗದರ್ಶನ ನೀಡಿದರು.

ಜ್ಞಾನವಾಪಿ ಮಸೀದಿ ಸಮೀಕ್ಷಾ ವರದಿ ಸಲ್ಲಿಸಲು ಎಎಸ್‌ಐಗೆ ಇನ್ನೂ 10 ದಿನ ಕಾಲಾವಕಾಶ ನೀಡಿದ ಕೋರ್ಟ್



ವಾರಣಾಸಿ: ಜ್ಞಾನವಾಪಿ ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆಯನ್ನು ಪೂರ್ಣಗೊಳಿಸಿ ವರದಿ ಸಲ್ಲಿಸಲು ವಾರಣಾಸಿ ನ್ಯಾಯಾಲಯ ಶನಿವಾರ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಇನ್ನೂ 10 ದಿನಗಳ ಕಾಲಾವಕಾಶ ನೀಡಿದೆ. ವರದಿ ಸಲ್ಲಿಸಲು ಎಎಸ್‌ಐಗೆ ನವೆಂಬರ್ 17 ರವರೆಗೆ ಸಮಯ ನೀಡಲಾಗಿತ್ತು. ಆದರೆ ಶುಕ್ರವಾರ ಎಎಸ್‌ಐ ವಕೀಲರು ನ್ಯಾಯಾಲಯದಿಂದ 15 ದಿನಗಳ ಕಾಲಾವಕಾಶ ಕೋರಿದ್ದರು.

ಹಿಂದೂ ಪರ ಮದನ್ ಮೋಹನ್ ಯಾದವ್ ಪರ ವಕೀಲರ ಪ್ರಕಾರ, ತಾಂತ್ರಿಕ ವರದಿ ಲಭ್ಯವಿಲ್ಲದ ಕಾರಣ ಎಎಸ್‌ಐ ಹೆಚ್ಚಿನ ಕಾಲಾವಕಾಶ ಕೋರಿದೆ. ಇಂದು ವಿಚಾರಣೆ ನಡೆಸಿದ ಜಿಲ್ಲಾ ನ್ಯಾಯಾಧೀಶ ಎ.ಕೆ. ವಿಶ್ವೇಶ್ ಅವರು, ನವೆಂಬರ್ 28 ರೊಳಗೆ ವರದಿ ಸಲ್ಲಿಸುವಂತೆ ಎಎಸ್‌ಐಗೆ ಸೂಚಿಸಿದ್ದಾರೆ. ASI ಇಲ್ಲಿಯ ಕಾಶಿ ವಿಶ್ವನಾಥ ದೇವಸ್ಥಾನದ ಪಕ್ಕದಲ್ಲಿರುವ ಜ್ಞಾನವಾಪಿ ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆ ನಡೆಸುತ್ತಿದೆ.

ಶ್ರೀಕೃಷ್ಣ ಕುರಿತು ಅಧ್ಯಯನ ನಡೆಸಿದರೆ ಸ್ವಾವಲಂಭಿ ಬದುಕಿಗೆ ಮಾರ್ಗ ಸಿಗುತ್ತದೆ

ವಿದ್ವಾನ್ ಡಾ.ಕಬ್ಬಿನಾಲೆ ಭಾರದ್ವಜ್ ಅಭಿಮತ



ಮೈಸೂರು,ನ.18(ಎಸ್‌ಪಿಎನ್)– ಮಹಾಭಾರತದಲ್ಲಿ ಶ್ರೀಕೃಷ್ಣನ ಕುರಿತು ಇಂದಿನ ಯುವಕರು ಅಧ್ಯಯನ ಮಾಡಿದರೆ, ಸ್ವಾವಲಂಭಿ ಬದುಕಿಗೆ ಬೇಕಾದ ಅಂಶಗಳು ದೊರಕುತ್ತವೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವಿದ್ವಾನ್ ಡಾ.ಕಬ್ಬಿನಾಲೆ ವಸಂತ ಭಾರದ್ವಜ್ ಅಭಿಪ್ರಾಯಪಟ್ಟರು.

ಮೈಸೂರು ವಿಜಯವಿಠಲ ಶಾಲಾ ಆವರಣದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ವಾಲ್ಮೀಕಿ ಜಯಂತಿ ಹಾಗೂ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶ್ರೀಕೃಷ್ಣನ ಕುರಿತು ವಿಶೇಷ ಉಪನ್ಯಾಸ ನೀಡಿದರು. ಯಕ್ಷಗಾನ, ದೊಡ್ಡಾಟ, ಪೌರಾಣಿಕ ನಾಟಕಗಳು ಸೇರಿ ದಂತೆ ಕಲೆ, ಸಾಹಿತ್ಯದ ಮೂಲಕ ಶ್ರೀಕೃಷ್ಣನ ವರ್ಣನೆಗಳು ಕಾಣಬಹುದಾಗಿದೆ ಎಂದು ಹೇಳಿದರು.


ಅನಾದಿ ಕಾಲದಿಂದಲೂ ಶ್ರೀಕೃಷ್ಣನ ಕುರಿತು ಸಾಕಷ್ಟು ಸುಂದರ ಕಾವ್ಯಗಳು ರಚಿತವಾಗಿವೆ. ಧಾರ್ಮಿಕ ಕ್ಷೇತ್ರದಲ್ಲಿ ಕೃಷ್ಣನ ಕುರಿತು ರಚಿತವಾಗಿರುವ ಕಾವ್ಯಗಳು ಬೇರೆ ಯಾವ ದೇವರ ಮೇಲೂ ರಚಿತವಾಗಿಲ್ಲ ಎಂದು ಅಭಿಪ್ರಾಯಪಟ್ಟರು.

ದಾಸವರಣ್ಯರು ಸೇರಿದಂತೆ ಅನೇಕ ವಿದ್ವಾಂಸರು ಶ್ರೀಕೃಷ್ಣನ ಕುರಿತು ಅನೇಕ ಕಾವ್ಯಗಳನ್ನು ಬರೆದಿದ್ದಾರೆ. ಆ ವರ್ಣನೆ ಮೂಲಕವೇ ಕೃಷ್ಣನ ಸುಂದರ ಮೂರ್ತಿ ಕೆತ್ತಬಹುದು. ಹಾಗಾಗಿ ಉತ್ತರ ಭಾರತದಲ್ಲಿ ಶ್ರೀಕೃಷ್ಣನ ಕುರಿತು ಅನೇಕ ದಂತ ಕಥೆಗಳು, ಜನಪದ ಹಾಡುಗಳಿವೆ. ಇಂದಿಗೂ ಮಹಾಭಾರತ ಕಥೆಯಲ್ಲಿ ಶ್ರೀಕೃಷ್ಣನ ಕುರಿತಾದ ಪೌರಾಣಿಕ ನಾಟಕಗಳು ಹಳ್ಳಿಗಾಡಿನಲ್ಲಿ ಪ್ರದರ್ಶನವಾಗುವುದನ್ನು ಕಾಣಬಹುದು ಎಂದು ತಿಳಿಸಿದರು.

ಈ ವೇಳೆ ರಾಜ್ಯೋತ್ಸವ ಪುರಸ್ಕೃತ ವಿದ್ವಾನ್ ಡಾ.ಕಬ್ಬಿನಾಲೆ ವಸಂತ ಭಾರದ್ವಜ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ದಿವಾಕರ ಹೆಗಡೆ, ಅಭಾಸಾಪ ಉಪಾಧ್ಯಕ್ಷ ಬಿ.ಕೆ.ಜಗದೀಶ್ ವಿಜಯವಿಠಲ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎಚ್.ಸತ್ಯ ಪ್ರಸಾದ್, ಅಭಾಸಾಪ ಶ್ರೀಗಂಧ ವಲಯ ಪ್ರಮುಖ್ ಡಾ.ವಿ.ರಂಗನಾಥ್, ಪ್ರೊ.ಜಿ. ರಾಮರತನ್ ಸೇರಿದಂತೆ ಇತರರಿದ್ದರು.

ಪತ್ರಿಕಾ ವಿತರಕರು ಪತ್ರಿಕೋದ್ಯಮದ ಫಿಲ್ಲರ್‌ಗಳು

ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಮತ



ಮೈಸೂರು, ನ.18(ಜಿಎ)–ಪತ್ರಿಕಾ ವಿತರಕರು ಪತ್ರಿಕೋದ್ಯಮದ ಪಿಲ್ಲರ್‌ಗಳು ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಮತ್ತು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಗರದ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಅಭಿಮಾನದ ಅಭಿನಂದನಾ ಸಮಾರಂಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಿಕಾ ವಿತರಕ ಜವರಪ್ಪ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಎಲ್ಲಾ ಮನೆ ಮತ್ತು ಮನಸ್ಸು ತಲುಪಲು ಪತ್ರಿಕಾ ವಿತರಿಕರಿಗೆ ಮಾತ್ರ ಸಾಧ್ಯ. ಕೋವಿಡ್ ವೇಳೆ ಪತ್ರಿಕಾ ವಿತರಕರ ಶ್ರಮ ಮತ್ತು ಕಾಳಜಿ ದಾಖಲಾರ್ಹ. ಕೋವಿಡ್ ವೇಳೆ ಪತ್ರಿಕೆ ಮುಟ್ಟಿದರೆ ಕೊರೊನ ಬರುತ್ತದೆ ಎಂದು ವ್ಯಾಪಕವಾಗಿ ವಂದತಿ ಹರಡಿದ್ದಾಗಲೂ ತಮ್ಮ ವೃತ್ತಿಪರತೆಯನ್ನು ಬಿಟ್ಟು ಕೊಡಲಿಲ್ಲ. ಎಂದಿನಂತೆ ಪತ್ರಿಕೆ ವಿತರಿಸಿ ಎದೆಗಾರಿಕೆ ಮೆರೆದರು ಎಂದು ಆ ಸಂದರ್ಭದ ಸಂಕಷ್ಟಗಳನ್ನು ಸ್ಮರಿಸಿದರು.

ನಾನು ವೃತ್ತಿ ಜೀವನವನ್ನು ಪತ್ರಿಕ ವಿತರಕನಾಗಿ ಆರಂಭಿಸಿದ್ದು, ಕೋಲಾರದಲ್ಲಿ ಮನೆಗಳಿಗೆ ಪತ್ರಿ ಹಾಕುತ್ತಿದೆ. ಅದಕ್ಕೆ 90 ರೂ. ಸಂಭಾವನೆ ದೊರೆಯುತ್ತಿತು. ತದನಂತರ ವಿಜಯಕರ್ನಾಟಕ ಪತ್ರಿಕೆಯಲ್ಲಿ ಪತ್ರಕರ್ತನಾಗಿ ಸೇವೆ ಸಲ್ಲಿಸಲು ಆರಂಭಿಸಿದೆಎಂದು ನೆನಪು ಮೆಲುಕು ಹಾಕಿದರು.

ಪತ್ರಿಕಾ ವಿತರಕರ ಯೋಗಕ್ಷೇಮಕ್ಕಾಗಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಜತೆ ಚರ್ಚೆ ನಡೆಸುತ್ತೇನೆ. ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘಕ್ಕೆ 2 ಕೋಟಿ ರೂಪಾಯಿ ಕೊಡಿಸಲು ಮುಖ್ಯಮಂತ್ರಿಗಳ ಜತೆ ಚರ್ಚಿಸಿ ಕಾರ್ಯರೂಪಕ್ಕೆ ತರಲು ಈಗಾಗಲೇ ಪ್ರಯತ್ನ ಆರಂಭಿಸಲಾಗಿದೆ. ವಿತರಕರ ಸಂಘಕ್ಕೆ ಮತ್ತು ವಿತರಕರಿಗೆ ನಿವೇಶನ ಕೊಡಿಸಬೇಕು ಎನ್ನುವ ಬೇಡಿಕೆ ಕುರಿತಾಗಿಯೂ ಸರ್ಕಾರದ ಬಳಿ ಮನವಿ ಮಾಡುತ್ತೇನೆ ಎಂದು ಅವರು ತಿಳಿಸಿದರು.

ನಂತರ ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಅತೀ ಹೆಚ್ಚು ಪತ್ರಿಕಾ ವಿತರಕರನ್ನು ಹೊಂದಿರುವುದು ನನ್ನ ಕ್ಷೇತ್ರ ಆದರೆ, ಅವರಿಗೆ ಸೂಕ್ತ ಸೂರಿಲ್ಲ. ಮುಡಾ ಸದಸ್ಯನಾಗಿರುವುದರಿಂದ ಸಂಘದ ಪದಾಧಿಕಾರಿಗಳು ಸ್ಥಳವನ್ನು ಗುರುತಿಸಿ ತಿಳಿಸಿದರೆ, ಮುಂದಿನ ಸಭೆಯಲ್ಲಿ ಸಿಎ ನಿವೇಶನದ ಬಗ್ಗೆ ಚರ್ಚಿಸುತ್ತೇನೆ ಎಂದು ಭರವಸೆ ನೀಡಿದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ರಾಜ್ಯ ಪತ್ರಿಕಾ ವಿತರಕರ ಸಂಘದ ರಾಜ್ಯಾಧ್ಯಕ್ಷ ಕೆ.ಶಂಬುಲಿಂಗ, ಪ್ರಜಾಪ್ರಗತಿ ಪತ್ರಿಕೆ ಸಂಪಾದಕರಾದ ನಾಗಣ್ಣ, ರಾಜ್ಯ ಅಸಂಘಟಿತ ಕಾರ್ಮಿಕರ ಸಂಸ್ಥೆ ಅಧ್ಯಕ್ಷ ರಾಜಪ್ಪ, ಪತ್ರಿಕೋದ್ಯಮಿ ರವಿ ಕೋಟಿ ಮತ್ತಿತರರು ಉಪಸ್ಥಿತರಿದ್ದರು.

ಸಂತೋಷ್‌ಕುಮಾರ್ ಮೊ.7892300897

ವಿಶ್ವಕಪ್ ಕ್ರಿಕೆಟ್ ಮತ್ತೊಂದು ಮಹಾಸಮರ

ಬಹುಮಾನದ ಮೊತ್ತ

ಪ್ರಸಕ್ತ ವಿಶ್ವಕಪ್ ಚಾಂಪಿಯನ್ ತಂಡಕ್ಕೆ 4 ಮಿಲಿಯನ್ ಡಾಲರ್ (33 ಕೋಟಿ) ಹಾಗೂ ಟ್ರೋಫಿ ಸಿಗಲಿದ್ದು, ರನ್ನರ್ ಅಪ್ ತಂಡಕ್ಕೆ 2 ಮಿಲಿಯನ್ ಡಾಲರ್(16ಕೋಟಿ) ಸಿಗಲಿದೆ. ಇನ್ನು ಸೆಮಿಫೈನಲ್‌ನಲ್ಲಿ ಸೋಲುವ 2 ತಂಡಗಳಿಗೆ ತಲಾ 6 ಕೋಟಿ, ನಾಕೌಟ್ ಹಂತ ಪ್ರವೇಶಿಸಲು ವಿಫಲವಾಗುವ ಇತರ ಆರು ತಂಡಗಳು ತಲಾ 82 ಲಕ್ಷ ರೂ., ಲೀಗ್ ಹಂತದಲ್ಲಿ ಅಗ್ರಸ್ಥಾನ ಪಡೆಯುವ ತಂಡಗಳು ತಲಾ 33 ಲಕ್ಷ ಪ್ರೋತ್ಸಾಹ ಧನ ಪಡೆಯಲಿವೆ.

ಇಲ್ಲಿವರೆಗಿನ ಚಾಂಪಿಯನ್, ರನ್ನರ್ ಅಪ್ ವಿವರ

ವರ್ಷ	ಚಾಂಪಿಯನ್	ರನ್ನರ್ ಅಪ್
1975	ವೆಸ್ಟ್ ಇಂಡೀಸ್	ಆಸ್ಟ್ರೇಲಿಯಾ
1979	ವೆಸ್ಟ್ ಇಂಡೀಸ್	ಇಂಗ್ಲೆಂಡ್
1983	ಭಾರತ	ವೆಸ್ಟ್ ಇಂಡೀಸ್
1987	ಆಸ್ಟ್ರೇಲಿಯಾ	ಇಂಗ್ಲೆಂಡ್
1992	ಪಾಕಿಸ್ತಾನ	ಇಂಗ್ಲೆಂಡ್
1996	ಶ್ರೀಲಂಕಾ	ಆಸ್ಟ್ರೇಲಿಯಾ
1999	ಆಸ್ಟ್ರೇಲಿಯಾ	ಪಾಕಿಸ್ತಾನ
2003	ಆಸ್ಟ್ರೇಲಿಯಾ	ಭಾರತ
2007	ಆಸ್ಟ್ರೇಲಿಯಾ	ಶ್ರೀಲಂಕಾ
2011	ಭಾರತ	ಶ್ರೀಲಂಕಾ
2015	ಆಸ್ಟ್ರೇಲಿಯಾ	ನ್ಯೂಜಿಲೆಂಡ್
2019	ಇಂಗ್ಲೆಂಡ್	ನ್ಯೂಜಿಲೆಂಡ್
2023	?	?



ವಿಶ್ವದ ಕ್ರಿಕೆಟ್ ಅಭಿಮಾನಿಗಳು ಕಾತುರದಿಂದ ಎದುರು ನೋಡುತ್ತಿರುವ ವಿಶ್ವಕಪ್ ಫೈನಲ್ ಮಹಾಸಮರಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಭಾರತ ವಿಶ್ವ ಸಾಮ್ರಾಟನಾಗಿ ಮೆರೆದಾಡುವುದನ್ನು ಕಣ್ತುಂಬಿಕೊಳ್ಳಲು 140 ಕೋಟಿ ಭಾರತೀಯರು ಕಾದು ಕುಳಿತಿದ್ದಾರೆ.

ಕಳೆದ ಅ.5 ರಂದು ಆರಂಭವಾದ 13ನೇ ಆವೃತ್ತಿಯ ಏಕದಿನ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಅಫ್ಘಾನಿಸ್ತಾನ, ನೆದರ್‌ಲ್ಯಾಂಡ್ ಸೇರಿದಂತೆ 10 ತಂಡಗಳು ಭಾಗವಹಿಸಿದ್ದು, ನಂತರ ಲೀಗ್ ಹಂತದ ಪಂದ್ಯಗಳು ರೌಂಡ್ ರಾಬಿನ್ ಮಾದರಿಯಲ್ಲಿ ನಡೆದು ಅಗ್ರ 4 ತಂಡಗಳು (ಭಾರತ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್) ಸೆಮಿಫೈನಲ್ ಪ್ರವೇಶಿಸಿದ್ದವು. ಈ ಪೈಕಿ ಭಾರತ– ಆಸ್ಟ್ರೇಲಿಯಾ ಫೈನಲ್ ತಲುಪಿವೆ. ಈ ಪಂದ್ಯಕ್ಕೆ ಅಹಮದಾಬಾದ್‌ನ ನರೇಂದ್ರಮೋದಿ ಅಂತಾರಾಷ್ಟ್ರೀಯ ಮೈದಾನದಲ್ಲಿ ವೇದಿಕೆ ಸಿದ್ಧವಾಗಿದ್ದು, ಪಂದ್ಯ ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿದೆ.

ಲೀಗ್ ಹಂತದ 9 ಹಾಗೂ ಸೆಮಿಫೈನಲ್ ಪಂದ್ಯದಲ್ಲೂ ಗೆಲ್ಲುವ ಮೂಲಕ ಭಾರತ ಟೂರ್ನಿಯಲ್ಲಿ ಸೋಲಿಲ್ಲದ ಸರದಾರನಂತೆ ಮುನ್ನುಗ್ಗುತ್ತಿದ್ದು, ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆಲ್ಲುವ ಮೂಲಕ 3ನೇ ಬಾರಿಗೆ ಚಾಂಪಿಯನ್ ಆಗುವ ತವಕದಲ್ಲಿದೆ. ಮತ್ತೊಂದೆಡೆ ಈಗಾಗಲೇ ಐದು ಬಾರಿ ವಿಶ್ವಕಪ್ ಎತ್ತಿ ಹಿಡಿದಿರುವ ಆಸ್ಟ್ರೇಲಿಯಾ 6ನೇ ಬಾರಿಗೆ ವಿಶ್ವಕಪ್ ಗೆಲ್ಲುವ ಕನಸು ಕಾಣುತ್ತಿದೆ.

ವಿಶ್ವಕಪ್ ಇತಿಹಾಸ

ಐಸಿಸಿ ನಡೆಸಿಕೊಡುವ ವಿಶ್ವಕಪ್ ಪಂದ್ಯಾವಳಿ ಪ್ರತಿ 4 ವರ್ಷಗಳಿಗೊಮ್ಮೆ ನಡೆಯುತ್ತದೆ. ಪಂದ್ಯಾವಳಿಯಲ್ಲಿ ಎಲ್ಲಾ ಟೆಸ್ಟ್ ಹಾಗೂ ಏಕದಿನ, ಅಂತರರಾಷ್ಟ್ರೀಯ ಕ್ರಿಕೆಟ್ ಆಡುವ ರಾಷ್ಟ್ರೀಯ ತಂಡಗಳು, ಜೊತೆಗೆ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಾವಳಿಗಳಲ್ಲಿ ಅರ್ಹತೆ ಪಡೆದಿರುವ ರಾಷ್ಟ್ರೀಯ ತಂಡಗಳೂ ಸಹ ಸ್ಪರ್ಧಿಸುತ್ತವೆ. ಈಗಾಗಲೇ ಆಸ್ಟ್ರೇಲಿಯಾ 5 ಬಾರಿ, ವೆಸ್ಟ್ ಇಂಡೀಸ್ ಹಾಗೂ ಭಾರತ ತಲಾ ಎರಡು ಬಾರಿ, ಪಾಕಿಸ್ತಾನ ಮತ್ತು ಶ್ರೀಲಂಕಾ ತಲಾ ಒಂದು ಬಾರಿ ವಿಶ್ವಕಪ್ ಗೆದ್ದಿವೆ.

ಪ್ರುಡೆಂಷಿಯಲ್ ಕಪ್ ಟ್ರೋಫಿ

ಚೊಚ್ಚಲ ವಿಶ್ವಕಪ್ ಪಂದ್ಯಾವಳಿಯನ್ನು 1975ರಲ್ಲಿ ಇಂಗ್ಲೆಂಡ್‌ನಲ್ಲಿ ಆಯೋಜಿಸಲಾಯಿತು. ಆ ಕಾಲದಲ್ಲಿ ವಿಶ್ವಕಪ್ ಆತಿಥ್ಯ ವಹಿಸಲು ಇಂಗ್ಲೆಂಡ್‌ಗೆ ಮಾತ್ರ ಸಾಮರ್ಥ್ಯವಿದ್ದರಿಂದ 1979, 1983ರಲ್ಲಿ ನಡೆದ ವಿಶ್ವಕಪ್ ಅನ್ನು ಇಂಗ್ಲೆಂಡ್‌ನಲ್ಲೇ ಆಯೋಜಿಸಲಾಗಿತ್ತು. ಇಂಗ್ಲೆಂಡ್ ಮೂಲದ ಪ್ರುಡೆಂಷಿಯಲ್ ಪಿಎಲ್‌ಸಿ ಉದ್ದಿಮೆ ಪಂದ್ಯಾವಳಿ ಆಯೋಜಿಸಿದ ಕಾರಣ ಪಂದ್ಯಾವಳಿಯನ್ನು ಅಧಿಕೃತವಾಗಿ ಪ್ರುಡೆಂಷಿಯಲ್ ಕಪ್ ಪಂದ್ಯಾವಳಿ ಎನ್ನಲಾಯಿತು. ಪ್ರತಿಯೊಂದು ಪಂದ್ಯದಲ್ಲಿ ಪ್ರತಿ ತಂಡ 60 ಓವರ್ ಆಡಬೇಕಿತ್ತು. ಹಗಲಿನ ಹೊತ್ತು, ಸಾಂಪ್ರದಾಯಿಕ ಕ್ರಿಕೆಟ್‌ನ ಶ್ವೇತ ಸಮವಸ್ತ್ರ ಧರಿಸಿ, ಕೆಂಪು ಕ್ರಿಕೆಟ್ ಚೆಂಡು ಬಳಸಿ ಆಡಲಾಗುತ್ತಿತ್ತು.

ಮೊದಲ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್, ಪಾಕಿಸ್ತಾನ, ಭಾರತ, ವೆಸ್ಟ್ ಇಂಡೀಸ್, ಶ್ರೀಲಂಕಾ ಹಾಗೂ ಈಸ್ಟ್ ಆಫ್ರಿಕಾ ಎಂಬ ಸಂಯುಕ್ತ ತಂಡವೂ ಸ್ಪರ್ಧಿಸಿದವು. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿ ನಡೆಯುತ್ತಿದ್ದ ಕಾರಣ, ಆ ರಾಷ್ಟ್ರವನ್ನು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಕೈ ಬಿಡಲಾಗಿತ್ತು. ವೆಸ್ಟ್ ಇಂಡೀಸ್ ಲಂಡನ್‌ನ ಪ್ರತಿಷ್ಠಿತ ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು 17 ರನ್‌ಗಳಿಂದ ಸೋಲಿಸಿ ಚೊಚ್ಚಲ ವಿಶ್ವಕಪ್ ತನ್ನದಾಗಿಸಿಕೊಂಡಿತ್ತು.

1979ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ವಿಶ್ವಕಪ್ ಪಂದ್ಯಾವಳಿಯನ್ನು ವೆಸ್ಟ್ ಇಂಡಿಸ್ ಗೆದ್ದುಕೊಂಡಿತು. ಲಾರ್ಡ್ಸ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ತಂಡವನ್ನು 92 ರನ್‌ಗಳ ಭಾರೀ ಅಂತರದಿಂದ ಸೋಲಿಸಿತು. ಬಳಿಕ 1983ರಲ್ಲಿ ನಡೆದ 3ನೇ ವಿಶ್ವಕಪ್ ಪಂದ್ಯಾವಳಿಯ ಆತಿಥ್ಯವನ್ನು ಇಂಗ್ಲೆಂಡ್ ವಹಿಸಿಕೊಂಡಿತ್ತು. ಈ ವೇಳೆಗೆ, ಶ್ರೀಲಂಕಾ ಟೆಸ್ಟ್ ಪಂದ್ಯವಾಡುವ ಅರ್ಹತೆ ಸಂಪಾದಿಸಿತ್ತು. ಐಸಿಸಿ ಟ್ರೋಫಿ ಅರ್ಹತಾ ಪಂದ್ಯಾವಳಿಯಲ್ಲಿ ಜಯಗಳಿಸಿದ ಜಿಂಬಾಬ್ವೆ ಐಸಿಸಿ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಯಲ್ಲಿ ಸ್ಪರ್ಧಿಸಲು ಅರ್ಹವಾಯಿತು. ಈ ಪಂದ್ಯಾವಳಿಯಲ್ಲಿ ಕಪಿಲ್‌ದೇವ್ ನಾಯಕತ್ವದ ಭಾರತ ಎಲ್ಲರ ನಿರೀಕ್ಷೆ ಮೀರಿ ಬಲಿಷ್ಠ ವೆಸ್ಟ್ ಇಂಡೀಸ್ ತಂಡವನ್ನು 43 ರನ್‌ಗಳ ಅಂತರಲ್ಲಿ ಸೋಲಿಸಿ ನೂತನ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಬಳಿಕ ಭಾರತ ಮತ್ತು ಪಾಕಿಸ್ತಾನದ ಜಂಟಿ ಆತಿಥ್ಯದಲ್ಲಿ ನಡೆದ 1987ರ ವಿಶ್ವಕಪ್ ಅನ್ನು ಭಾರತದ ರಿಲಾಯನ್ಸ್ ಇಂಡಸ್ಟ್ರೀಸ್ ಪ್ರಾಯೋಜಿಸಿದ ಕಾರಣ ರಿಲಾಯನ್ಸ್ ವಿಶ್ವಕಪ್ ಎಂದು ಮರುನಾಮಕರಣವಾಯಿತು. ಈ ಪಂದ್ಯಾವಳಿಯಲ್ಲಿ 60 ಓವರ್‌ಗಳ ಪ್ರತಿ ಇನ್ನಿಂಗ್ಸ್ ಅವಧಿಯನ್ನು 50 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಇಂದಿಗೂ ಸಹ ಪ್ರತಿ ಇನ್ನಿಂಗ್ಸ್‌ಗೆ 50 ಓವರ್ ನಿಗದಿಪಡಿಸಲಾಗಿದೆ. ಭಾರತದ ಕೋಲ್ಕತ್ತಾದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಇಂಗ್ಲೆಂಡ್ ತಂಡವನ್ನು 7 ರನ್‌ಗಳಿಂದ ಸೋಲಿಸಿ ಚೊಚ್ಚಲ ಟ್ರೋಫಿ ತನ್ನದಾಗಿಸಿಕೊಂಡಿತು. 1992ರಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಜಂಟಿ ಆತಿಥ್ಯದಲ್ಲಿ ನಡೆದ ಪಂದ್ಯಾವಳಿಯಲ್ಲಿ ಬಣ್ಣ ಬಣ್ಣದ ಸಮವಸ್ತ್ರ ಪರಿಚಯಿಸಲಾಯಿತು. ಹಗಲು/ರಾತ್ರಿ (ಹೊನಲು–ಬೆಳಕಿನ) ಪಂದ್ಯಗಳು ಹಾಗೂ ಫೀಲ್ಡಿಂಗ್ ನಿರ್ಬಂಧನೆಗಳ ನಿಯಮಗಳಲ್ಲಿ ಬದಲಾವಣೆ ತರಲಾಯಿತು. ಪಂದ್ಯಾವಳಿಯಲ್ಲಿ ಪಾಕಿಸ್ತಾನ ಇಂಗ್ಲೆಂಡ್ ತಂಡವನ್ನು 22 ರನ್‌ಗಳಿಂದ ಮಣಿಸಿ ವಿಶ್ವಕಪ್ ಗೆದ್ದುಕೊಂಡಿತು.

ಭಾರತ, ಪಾಕಿಸ್ತಾನ, ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ 1996ರ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾವನ್ನು 7 ವಿಕೆಟ್‌ಗಳಿಂದ ಮಣಿಸಿದ ಶ್ರೀಲಂಕಾ ವಿಶ್ವಕಪ್ ಗೆಲುವು ಸಾಧಿಸಿತು. ನಂತರ 1999, 2003, 2007ರಲ್ಲಿ ನಡೆದ ವಿಶ್ವಕಪ್ ಪಂದ್ಯಾವಳಿಯಲ್ಲಿ ಆಸ್ಟ್ರೇಲಿಯಾ ಪ್ರಾಬಲ್ಯ ಮೆರೆಯಿತು. 1999ರಲ್ಲಿ ಇಂಗ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡ್, ವೇಲ್ಸ್ ಮತ್ತು ನೆದರ್ಲೆಂಡ್ಸ್ ಆತಿಥ್ಯದಲ್ಲಿ ನಡೆದ ಪಂದ್ಯಾವಳಿಯಲ್ಲಿ ಆಸ್ಟ್ರೇಲಿಯಾ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಕೇವಲ 132 ರನ್‌ಗಳಿಗೆ ಆಲೌಟ್ ಮಾಡಿ 20 ಓವರ್‌ಗಳು ಸಂಪೂರ್ಣಗೊಳ್ಳುವ ಮುಂಚೆಯೇ 133ರ ಗುರಿ ತಲುಪಿ, ಎಂಟು ವಿಕೆಟ್‌ಗಳ ಅಂತರದಿಂದ ಭಾರೀ ಜಯ ಸಂಪಾದಿಸಿತು. ಇನ್ನು ದಕ್ಷಿಣ ಆಫ್ರಿಕಾ, ಕೀನ್ಯಾ, ಜಿಂಬಾಬ್ವೆ ಆತಿಥ್ಯದಲ್ಲಿ ನಡೆದ 2003 ವಿಶ್ವಕಪ್ ಪಂದ್ಯಾವಳಿಯ ಫೈನಲ್‌ನಲ್ಲಿ ಆಸ್ಟ್ರೇಲಿಯಾ 2 ವಿಕೆಟ್ ನಷ್ಟಕ್ಕೆ 359ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಇದಕ್ಕೆ ಪ್ರತಿಯಾಗಿ ಭಾರತ ತಂಡವು 234 ರನ್‌ಗಳಿಗೆ ಎಲ್ಲಾ ವಿಕೆಟ್ ಕಳೆದುಕೊಂಡಿತು. ಆಸ್ಟ್ರೇಲಿಯಾ 125 ರನ್‌ಗಳ ಭರ್ಜರಿ ಜಯ ಸಾಧಿಸಿ ವಿಶ್ವಕಪ್ ತನ್ನಲ್ಲಿಯೇ ಉಳಿಸಿಕೊಂಡಿತು.

ನಂತರ ವೆಸ್ಟ್‌ಇಂಡೀಸ್‌ನಲ್ಲಿ ನಡೆದ 2007ರ ವಿಶ್ವಕಪ್‌ನಲ್ಲೂ ಆಸ್ಟ್ರೇಲಿಯಾ ಶ್ರೀಲಂಕಾ ತಂಡವನ್ನು 53 ರನ್‌ಗಳ ಅಂತರದಿಂದ ಸೋಲಿಸಿ ಮತ್ತೊಮ್ಮೆ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಬಳಿಕ ಭಾರತ, ಶ್ರೀಲಂಕಾ, ಬಾಂಗ್ಲಾದೇಶದ ಆತಿಥ್ಯದಲ್ಲಿ ನಡೆದ 2011ರ ವಿಶ್ವಕಪ್‌ನಲ್ಲಿ ಅದ್ಭುತ ಆಟವಾಡಿದ ಧೋನಿ ನೇತೃತ್ವದ ಟೀಂ ಇಂಡಿಯಾ 28 ವರ್ಷಗಳ ಬಳಿಕ ತವರಿನಲ್ಲೇ ಶ್ರೀಲಂಕಾ ಮಣಿಸಿ 2ನೇ ಬಾರಿಗೆ ವಿಶ್ವಕಪ್‌ಗೆ ಮುತ್ತಿಟ್ಟಿತು. ನಂತರ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಆತಿಥ್ಯದಲ್ಲಿ ನಡೆದ 2015ರ ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ಮಣಿಸಿದ ಆಸ್ಟ್ರೇಲಿಯಾ ಮತ್ತೊಮ್ಮೆ ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಿತು.

ಇನ್ನು 2019ರಲ್ಲಿ ಇಂಗ್ಲೆಂಡ್ ಆತಿಥ್ಯದಲ್ಲಿ ನಡೆದ ಪಂದ್ಯಾವಳಿಯಲ್ಲಿ ಆತಿಥೇಯ ಇಂಗ್ಲೆಂಡ್ ನ್ಯೂಜಿಲೆಂಡ್ ಮಣಿಸಿ ವಿಶ್ವಕಪ್ ತನ್ನದಾಗಿಸಿಕೊಂಡಿತು. ಭಾರತ ದೇಶದ ಕೋಟ್ಯಾಂತರ ಅಭಿಮಾನಿಗಳ ನಿರೀಕ್ಷೆ ಯೊಂದಿಗೆ ಫೈನಲ್ ಪ್ರವೇಶಿಸಿದ್ದು, ಟ್ರೋಫಿ ಗೆಲ್ಲುವ ನೆಚ್ಚಿನ ತಂಡವಾಗಿದೆ.

ಪ್ರಶಸ್ತಿ, ಪಾರಿತೋಷಕ



ಫೈನಲ್ಸ್‌ನಲ್ಲಿ ವಿಜೇತ ತಂಡಕ್ಕೆ ಐಸಿಸಿ ಕ್ರಿಕೆಟ್ ವಿಶ್ವಕಪ್ ಟ್ರೋಫಿ ಪ್ರದಾನ ಮಾಡಲಾಗುವುದು. ಸದ್ಯದ ಟ್ರೋಫಿಯನ್ನು 1999 ಪಂದ್ಯಾವಳಿಗಾಗಿ ವಿನ್ಯಾಸ ಮಾಡಲಾಗಿತ್ತು. ಪಂದ್ಯಾವಳಿ ಇತಿಹಾಸದಲ್ಲಿ ಇದು ಮೊದಲ ಖಾಯಂ ಪ್ರಶಸ್ತಿ ಯಾಯಿತು. ಇದಕ್ಕೆ ಮುಂಚೆ, ಪ್ರತಿ ವಿಶ್ವಕಪ್ ಪಂದ್ಯಾವಳಿಗೂ ವಿಭಿನ್ನ ಟ್ರೋಫಿಗಳನ್ನು ವಿನ್ಯಾಸಗೊಳಿಸಲಾಗಿದೆ. ಗರಾರ್ಡ್ ಅಂಡ್ ಕಂಪೆನಿಯ ಕುಶಲಕರ್ಮಿಗಳ ತಂಡ ಲಂಡನ್‌ನಲ್ಲಿ 2 ತಿಂಗಳ ಕಾಲ ವಿಶ್ವಕಪ್ ಟ್ರೋಫಿಯ ವಿನ್ಯಾಸಗೊಳಿಸುವ ಕಾರ್ಯ ನಡೆಸಿತು. ಸದ್ಯದ ಟ್ರೋಫಿಯನ್ನು ಬೆಳ್ಳಿ ಮತ್ತು ಚಿನ್ನದ ಮಿಶ್ರಣದಿಂದ ತಯಾರಿಸಲಾಗಿದ್ದು, ಇದರಲ್ಲಿ ಚಿನ್ನದ ಭೂಗೋಳವನ್ನು ಹೊತ್ತ ಮೂರು ರಜತ ಸ್ತಂಭಗಳ ನಿರೂಪಣೆಯಿದೆ. ಸ್ಟಂಪ್‌ಗಳು ಮತ್ತು ಬೇಯ್ಲ್‌ಗಳ ಆಕಾರ ಹೊಂದಿರುವ ಈ ಸ್ತಂಭಗಳು ಕ್ರಿಕೆಟ್‌ನ ಮೂರು ಮೂಲಭೂತ ಅಂಶಗಳಾದ ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್‌ಗಳನ್ನು ಪ್ರತಿನಿಧಿಸುತ್ತವೆ. ಭೂಗೋಳಾಕಾರವು ಕ್ರಿಕೆಟ್ ಚೆಂಡನ್ನು ಪ್ರತಿನಿಧಿಸುತ್ತದೆ. ಎಲ್ಲಾ ಮುಖಗಳೂ ಸರ್ವಸಮನಾಗಿ ರುವಂತೆ ಈ ಟ್ರೋಫಿಯನ್ನು ವಿನ್ಯಾಸಗೊಳಿಸಲಾಗಿದೆ. ಇದರಿಂದಾಗಿ, ಈ ಟ್ರೋಫಿಯನ್ನು ಯಾವುದೇ ಕೋನದಿಂದಲೂ ಸಹ ಗುರುತಿಸಬಹುದಾಗಿದೆ. ಇದು 60 ಸೆಂಟಿಮೀಟರ್ ಎತ್ತರವಿದ್ದು, ಸುಮಾರು 11 ಕಿಲೋಗ್ರಾಮ್‌ಗಳಷ್ಟು ತೂಗುತ್ತದೆ. ಟ್ರೋಫಿಯ ಪಾದದಲ್ಲಿ ಹಿಂದಿನ ವಿಜೇತ ತಂಡದ ಸದಸ್ಯರ ಹೆಸರುಗಳನ್ನು ಕೆತ್ತಲಾಗಿದ್ದು, ಒಟ್ಟು ಇಪ್ಪತ್ತು ಹೆಸರುಗಳ ಕೆತ್ತನೆಗಳಿಗೆ ಸ್ಥಳಾವಕಾಶವಿದೆ. ಮೂಲ ಟ್ರೋಫಿ ಐಸಿಸಿಯಲ್ಲೇ ಇರುವುದು. ಕೇವಲ ಆಟಗಾರರ ಹೆಸರುಗಳ ಕೆತ್ತನೆಗಳ ಮೂಲಕ ಭಿನ್ನವಾಗಿರುವ ತದ್ರೂಪಿ ಟ್ರೋಫಿಯನ್ನು ವಿಜೇತ ತಂಡವು ಕಾಯಂ ಆಗಿ ಇಟ್ಟುಕೊಳ್ಳುತ್ತದೆ.



ಡುಂಡಿರಾಜರ ವಿಶೇಷ ಕವನ

"ಶುಭಾರುಂಭಕ್ಕೆ ಶುಭಮನ್ ನಂಬಿಕೆಯ ಬ್ಯಾಟರು
ಯಾರಿಗಿದೆ ಕೊಹ್ಲಿಯನ್ನು ಕೆಣಕುವ ಮೀಟರು
ನಂತರ ಅಯ್ಯರ್, ರಾಹುಲ್ ಪಾಳಿ
ಎದುರಾಳಿಗಳ ಮೇಲೆ ಭರ್ಜರಿ ದಾಳಿ
ಸೂರ್ಯನಿಗೆ ಇನ್ನೂ ಸಿಕ್ಕಿಲ್ಲ ಅವಕಾಶ
ಸಿಕ್ಕವರ ಚೆಂಡಿಗೆ ತೋರಿಸುವ ಆಕಾಶ!
ಬೌಲಿಂಗಿನಲ್ಲಿ ಬಿಡಿ ಸಮನಾರು ನಮಗೆ?
ಬುಮ್ರಾ, ಸಿರಾಜ್, ಮಹಮ್ಮದ್ ಶಮಿಗೆ?
ಸವ್ಯಸಾಚಿ ಜಡೇಜ, ಕುಲದೀಪ ಯಾದವ
ಚೆಂಡೆಸೆವ ರೀತಿ ಊಹಿಸಲು ಸಾಧ್ಯವಾ?
ಚೆನ್ನಾಗಿದೆ ಕೀಪಿಂಗ್, ಫೀಲ್ಡಿಂಗ್ ಕೂಡಾ
ತಂಡದ ಬೆನ್ನೆಲುಬು ರಾಹುಲ್ ದ್ರಾವಿಡ
ನಾಯಕನ ಆಟ ಆಡುವನು ರೋಹಿತ
ಈ ಬಾರಿ ಖಂಡಿತ ಗೆಲ್ಲುವುದು ಭಾರತ

ದಾಖಲೆಗಳು

ಅತಿ ಹೆಚ್ಚು ರನ್: ಸಚಿನ್ ತೆಂಡೂಲ್ಕರ್ (ಭಾರತ)– 2,278 (1992–2011)

ಪಂದ್ಯವೊಂದರಲ್ಲಿ ಅತಿ ಹೆಚ್ಚು ರನ್: ಮಾರ್ಟಿನ್ ಗಪ್ಟಿಲ್ (ನ್ಯೂಜಿಲ್ಯಾಂಡ್)– 237 ಅಜೇಯ (2015)

ಅತಿದೊಡ್ಡ ಜೊತೆಯಾಟ: ಕ್ರಿಸ್‌ಗೇಲ್– ಸ್ಯಾಮುಯಲ್ಸ್ (ವೆಸ್ಟ್‌ಇಂಡೀಸ್)– 2ನೇ ವಿಕೇಟಿಗೆ 372 (2015)

ವಿಶ್ವಕಪ್ ಟೂರ್ನಿಯೊಂದರ ರನ್ ಸರದಾರ: ಸಚಿನ್ ತೆಂಡೂಲ್ಕರ್ (ಭಾರತ)– 673 (2003)

ಹೆಚ್ಚು ಶತಕ ಗಳಿಸಿದವರು: ಸಚಿನ್ ತೆಂಡೂಲ್ಕರ್, ರೋಹಿತ್ ಶರ್ಮಾ (ಭಾರತ)– 6

ಟೂರ್ನಿಯೊಂದರಲ್ಲಿ ಹೆಚ್ಚು ಶತಕಗಳಿಸಿದವರು: ರೋಹಿತ್ ಶರ್ಮಾ (ಭಾರತ)– 5 (2019)

ಅತಿ ಹೆಚ್ಚು ವಿಕೆಟ್: ಗ್ಲೇನ್ ಮೆಗ್ರಾಥ್ (ಆಸ್ಟ್ರೇಲಿಯಾ)– 71 (1996–2007)

ಪಂದ್ಯವೊಂದರಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದವರು: ಗ್ಲೇನ್ ಮೆಗ್ರಾಥ್ (ಆಸ್ಟ್ರೇಲಿಯಾ)– 7/15 (2003)

ಟೂರ್ನಿಯೊಂದರಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದವರು: ಮಿಚೆಲ್ ಸ್ಟಾರ್ಕ್ (ಆಸ್ಟ್ರೇಲಿಯಾ)– 27 (2019)

ಅತಿ ಹೆಚ್ಚು ಕೀಪರ್ ಕ್ಯಾಚ್: ಕುಮಾರ ಸಂಗಕ್ಕಾರ (ಶ್ರೀಲಂಕಾ)– 54 (2003–2015)

ಅತಿ ಹೆಚ್ಚು ಕ್ಯಾಚ್ ಹಿಡಿದ ಫೀಲ್ಡರ್: ರಿಕಿ ಪಾಂಟಿಂಗ್ (ಆಸ್ಟ್ರೇಲಿಯಾ)– (1996–2011)

ಅತಿಹೆಚ್ಚು ಸರಾಸರಿ (ಕನಿಷ್ಠ 20 ಇನ್ನಿಂಗ್ಸ್‌ಗಳು) ವಿವಿಯನ್ ರಿಚರ್ಡ್ಸ್ 63.31 (1975–1987)

ಅತಿದೊಡ್ಡ ರನ್: ಆಸ್ಟ್ರೇಲಿಯಾ– 417/6 (ಅಫ್ಘಾನಿಸ್ಥಾನದ ವಿರುದ್ಧ) (2015)

ಅತಿಕಡಿಮೆ ರನ್: ಕೆನಡಾ– 36 (ಶ್ರೀಲಂಕಾ ವಿರುದ್ಧ) (2003)

ಭಾರತ–ಆಸ್ಟ್ರೇಲಿಯಾ ಜಿದ್ದಾಜಿದ್ದಿ ದಾಖಲೆ



ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ನಡೆಯುವ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಬಲಿಷ್ಠ ತಂಡಗಳಾದ ಭಾರತ ಹಾಗೂ ಆಸ್ಟ್ರೇಲಿಯಾ ಸೆಣಸಲಿವೆ. ಭಾರತ 4ನೇ ಬಾರಿ ಫೈನಲ್ ಆಡುತ್ತಿದ್ದರೆ, ಆಸ್ಟ್ರೇಲಿಯಾ ತಂಡ 8ನೇ ಬಾರಿ ಆಡಲು ಸಜ್ಜಾಗುತ್ತಿದೆ.

3 ಏಕದಿನ ವಿಶ್ವಕಪ್ ಫೈನಲ್ ಪಂದ್ಯಗಳಲ್ಲಿ ಭಾರತ 2 ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಆದರೆ, ಒಂದು ಬಾರಿ ರನ್ನರ್ ಅಪ್ ಆಗಿತ್ತು. 1983ರಲ್ಲಿ ಕಪಿಲ್ ದೇವ್ ನಾಯಕತ್ವದಲ್ಲಿ ಭಾರತ ಚೊಚ್ಚಲ ವಿಶ್ವಕಪ್ ಮುಡಿಗೇರಿಸಿಕೊಂಡಿತ್ತು. ನಂತರ 2003ರ ವಿಶ್ವಕಪ್ ಫೈನಲ್‌ನಲ್ಲಿ ಭಾರತ ಸೋತು ರನ್ನರ್ ಅಪ್‌ಗೆ ತೃಪ್ತಿಪಟ್ಟುಕೊಂಡಿತ್ತು. 2011ರಲ್ಲಿ ಎಂಎಸ್ ಧೋನಿ ನಾಯಕತ್ವದಲ್ಲಿ ಭಾರತ ಎರಡನೇ ಬಾರಿ ವಿಶ್ವಕಪ್ ಗೆದ್ದುಕೊಂಡಿತ್ತು. ಆದರೆ, ಆಸ್ಟ್ರೇಲಿಯಾ 7 ಬಾರಿ ಫೈನಲ್ ಆಡಿದ್ದು, 5 ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಇನ್ನುಳಿದ 2 ಬಾರಿ ರನ್ನರ್ ಅಪ್ ಆಗಿತ್ತು. ಇದೀಗ ಕಾಂಗರೂ ಪಡೆ 6ನೇ ಬಾರಿ ವಿಶ್ವಕಪ್ ಗೆಲ್ಲಲು ಎದುರು ನೋಡುತ್ತಿದೆ. ಅಂದ ಹಾಗೆ ವಿಶ್ವಕಪ್ ಟೂರ್ನಿಯ ಫೈನಲ್ ಇತಿಹಾಸದಲ್ಲಿ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳು 2003ರಲ್ಲಿ ಒಂದು ಸಲ ಮುಖಾಮುಖಿಯಾಗಿದ್ದವು. ಸೌರವ್ ಗಂಗೂಲಿ ನಾಯಕತ್ವದ ಭಾರತ ತಂಡ ಸೋಲು ಅನುಭವಿಸಿತ್ತು.

13 ಬಾರಿ ಮುಖಾಮುಖಿ: ಏಕದಿನ ವಿಶ್ವಕಪ್ ಇತಿಹಾಸದಲ್ಲಿ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳು ಒಟ್ಟು 13 ಬಾರಿ ಮುಖಾಮುಖಿಯಾಗಿವೆ. ಇದರಲ್ಲಿ ಆಸ್ಟ್ರೇಲಿಯಾ 8 ಪಂದ್ಯಗಳಲ್ಲಿ ಗೆಲುವು ಪಡೆದಿದ್ದರೆ, ಭಾರತ ತಂಡ ಇನ್ನುಳಿದ 5 ಪಂದ್ಯಗಳಲ್ಲಿ ಗೆಲುವು ಪಡೆದುಕೊಂಡಿದೆ.

1983: ಭಾರತ ಹಾಗೂ ಆಸ್ಟ್ರೇಲಿಯಾ ಗುಂಪು ಹಂತದಲ್ಲಿ 2 ಬಾರಿ ಮುಖಾಮುಖಿಯಾಗಿದ್ದವು. ಮೊದಲ ಪಂದ್ಯದಲ್ಲಿ ಭಾರತ ವಿರುದ್ಧ ಆಸೀಸ್ 162 ರನ್‌ಗಳಿಂದ ಗೆದ್ದಿತ್ತು. 2ನೇ ಪಂದ್ಯದಲ್ಲಿ ಭಾರತ 118 ರನ್‌ಗಳಿಂದ ಆಸ್ಟ್ರೇಲಿಯಾವನ್ನು ಮಣಿಸಿತ್ತು

1987: ಈ ವಿಶ್ವಕಪ್‌ನಲ್ಲೂ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳು ಗುಂಪು ಹಂತದಲ್ಲಿ 2 ಬಾರಿ ಸೆಣಸಿದ್ದವು. ಮೊದಲ ಪಂದ್ಯದಲ್ಲಿ ಭಾರತವನ್ನು 1 ರನ್‌ನಿಂದ ಸೋಲಿಸಿದ್ದ ಆಸ್ಟ್ರೇಲಿಯಾ, ನಂತರ ಎರಡನೇ ಪಂದ್ಯದಲ್ಲಿ 56 ರನ್‌ಗಳಿಂದ ಸೋತಿತ್ತು.

1992: ಭಾರತದ ವಿರುದ್ಧ ಆಸ್ಟ್ರೇಲಿಯಾ ಒಂದು ರನ್‌ನಿಂದ ಗೆಲುವು ಸಾಧಿಸಿತ್ತು.

1996: 16 ರನ್‌ಗಳಿಂದ ಭಾರತ ತಂಡವನ್ನು ಆಸ್ಟ್ರೇಲಿಯಾ ಮಣಿಸಿತ್ತು

1999: ಆಸ್ಟ್ರೇಲಿಯಾ ತಂಡ 77 ರನ್‌ಗಳಿಂದ ಭಾರತ ತಂಡವನ್ನು ಮಣಿಸಿತ್ತು.

2003: ಫೈನಲ್ ಪಂದ್ಯದಲ್ಲಿ ಭಾರತ ತಂಡದ ವಿರುದ್ಧ ಆಸ್ಟ್ರೇಲಿಯಾ 125 ರನ್‌ಗಳಿಂದ ಗೆದ್ದು ನಾಲ್ಕನೇ ವಿಶ್ವಕಪ್ ಗೆದ್ದಿತ್ತು.

2011: ಈ ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡ 5 ವಿಕೆಟ್‌ಗಳಿಂದ ಆಸ್ಟ್ರೇಲಿಯಾವನ್ನು ಮಣಿಸಿತ್ತು

2015: ಸೆಮಿಫೈನಲ್‌ನಲ್ಲಿ ಭಾರತದ ವಿರುದ್ಧ ಆಸ್ಟ್ರೇಲಿಯಾ 95 ರನ್‌ಗಳಿಂದ ಗೆದ್ದಿತ್ತು.

2019: ಭಾರತ ತಂಡ 36 ರನ್‌ಗಳಿಂದ ಆಸ್ಟ್ರೇಲಿಯಾವನ್ನು ಮಣಿಸಿತ್ತು.

2023: ಪ್ರಸಕ್ತ ವಿಶ್ವಕಪ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಭಾರತ ತಂಡ 6 ವಿಕೆಟ್‌ಗಳಿಂದ ಆಸ್ಟ್ರೇಲಿಯಾವನ್ನು ಸೋಲಿಸಿತ್ತು



ವಾರಭವಿಷ್ಯ

19.11.2023 ರಿಂದ 25.11.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಶ್ಚಿಕ, ಚಂದ್ರ–ಮಕರ, ಕುಂಭ, ಮೀನ, ಮೇಷ, ಕುಜ–ವೃಶ್ಚಿಕ, ಬುಧ–ವೃಶ್ಚಿಕ, ಗುರು–ಮೇಷ, ಶುಕ್ರ–ಕನ್ಯಾ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಖರ್ಚುಗಳ ಮೇಲೆ ಹಿಡಿತವಿಲ್ಲದ ಕಾರಣ ಆದಾಯ ಸಾಕಾಗುವುದಿಲ್ಲ. ವ್ಯಾಪಾರ ವಿಸ್ತರಣೆಯ ಪ್ರಯತ್ನಗಳನ್ನು ಸ್ವಲ್ಪ ಸಮಯ ಮುಂದೂಡುವುದು ಉಚಿತ. ಸರ್ಕಾರಿ ಉದ್ಯೋಗಿಗಳಿಗೆ ಹಿರಿಯ ಅಧಿಕಾರಿಗಳ ವಕ್ರದೃಷ್ಟಿ ಬೀಳುವುದು. ವಾರ ಮಧ್ಯಾನಂತರ ನಿಮ್ಮ ಆತ್ಮವಿಶ್ವಾಸ ವೃದ್ಧಿಯಾಗಲಿದೆ. ಸಿಮೆಂಟ್, ಕಬ್ಬಿಣ ವ್ಯಾಪಾರದಿಂದ ಅಧಿಕ ಧನಲಾಭ. ಸಣ್ಣಪುಟ್ಟ ಅನಾರೋಗ್ಯ ಕಾಡಬಹುದು.

ಶ್ರೀ ಗಣಪತಿಗೆ ಅರ್ಕಪುಷ್ಪ ಸಮರ್ಪಣೆ. ಶುಭ ಸಂಖ್ಯೆ–5



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಅಂದುಕೊಂಡಿದ್ದೆಲ್ಲಾ ಆಗುವುದಿಲ್ಲ. ಹೊಂದಿಕೊಂಡು ಹೋಗುವುದೇ ಜಾಣತನ. ಇದರ ಮಧ್ಯೆ ಔದ್ಯೋಗಿಕ ಕ್ಷೇತ್ರದಲ್ಲಿ ಸರ್ಕಾರಿ ಅಧಿಕಾರಿಗಳೊಡನೆ ಉತ್ತಮ ಸಂಬಂಧ ಹೊಂದುವಿರಿ. ಸಾಮಾಜಿಕವಾಗಿ ನಿಮ್ಮ ಪ್ರತಿಭೆ, ಪಾಂಡಿತ್ಯಗಳಿಗೆ ಮನ್ನಣೆ ದೊರಕುವುದು. ನೆರೆಹೊರೆಯಲ್ಲಿ ವಾದ–ವಿವಾದಗಳ ಸುಳಿಗೆ ಸಿಲುಕಬೇಡಿ. ಲಾಟರಿ ಜೂಜು ವರ್ಜಿಸುವುದು ಉತ್ತಮ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–3



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ರೋಗಿ ಬಯಸಿದ್ದು ಹಾಲು ಅನ್ನ ಎಂಬಂತೆ ನೀವು ಇಷ್ಟಪಟ್ಟಿದ್ದು ನೆರವೇರುವುದು. ಕೌಟುಂಬಿಕ ಹಾಗೂ ಸಾಮಾಜಿಕ ಕೆಲಸಗಳು ಸುಖಾಂತ್ಯವಾಗಲು ಗುರು ಕೃಪೆ ಇದೆ. ಐಹಿಕ ಸುಖ ಭೋಗಗಳು ನಿಮ್ಮನ್ನು ಅರಸಿಕೊಂಡು ಬರುವುದು. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ್ದ ಅವಕಾಶಗಳು ದೊರಕುತ್ತವೆ. ಹಳೆ ಕಾಯಿಲೆಯಿಂದ ಬಿಡುಗಡೆ ಹೊಂದುವಿರಿ.

ಶ್ರೀ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ–1.



ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ. ಸಕಾಲಕ್ಕೆ ಆತ್ಮೀಯರ ಸಹಾಯವೂ ದೊರೆಯುತ್ತದೆ. ಸಮಾಜದಲ್ಲಿ ನಿಮ್ಮ ಮೌಲ್ಯ, ಗೌರವಗಳು ಹೆಚ್ಚುವುದು. ಸ್ಥಿರಾಸ್ತಿ ಕೊಳ್ಳುವಾಗ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿಕೊಳ್ಳಿ. ವಾರದ ಕೊನೆಯಲ್ಲಿ ಖರ್ಚುಗಳು ಹೆಚ್ಚಾಗುವುದು. ಪ್ರಯಾಣ ಸಮಯದಲ್ಲಿ ಅಪರಿಚಿತರಿಂದ ತೊಂದರೆಗೆ ಗುರಿಯಾಗುವಿರಿ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–4.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಈ ವಾರ ನಿಮ್ಮ ಗುಣಾದರ್ಶಗಳಿಗೆ ಜನಮನ್ನಣೆ ದೊರೆಯುವುದು. ಆದಾಯ ಹೆಚ್ಚಾದಂತೆ ಖರ್ಚುಗಳೂ ಹೆಚ್ಚಾಗುವುದು. ನೂತನ ವ್ಯಾಪಾರ, ವ್ಯವಹಾರ ಆರಂಭಿಸಲು ಗುರುಬಲ ಚೆನ್ನಾಗಿದೆ. ರೈತಾಪಿ ಜನರಿಗೆ ಉತ್ತಮ ಬೆಳೆ ಹಾಗೂ ಬೆಲೆ ದೊರೆಯಲಿದೆ. ಆಸ್ತಿ ಹಂಚಿಕೆಯಲ್ಲಿ ರಕ್ತ ಸಂಬಂಧಿಕರಲ್ಲಿ ಮನಸ್ತಾಪಗಳು ಉಂಟಾಗುವುದು. ವಿದ್ಯುತ್ ವಸ್ತುಗಳಿಂದ ಅವಘಡ ಸಂಭವಿಸಬಹುದು.

ಶ್ರೀ ರವಿಸ್ತುತಿ. ಶುಭ ಸಂಖ್ಯೆ–8.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದ ಆರಂಭಕ್ಕೆ ಹಲವು ಗ್ರಹಗಳು ನಿಮ್ಮ ಅನುಕೂಲಕ್ಕೆ ಇಲ್ಲ. ಬರೀ ಕಷ್ಟ ಪಡುವುದರಿಂದಲೇ ಸುಖವನ್ನು ಸಾಧಿಸಲು ಆಗುವುದಿಲ್ಲ. ದೈವ ಸಹಾಯವೂ ಬೇಕಾಗುವುದು. ಮನೆಯಲ್ಲಿ ಪ್ರೀತಿ ವಾತ್ಸಲ್ಯದಿಂದ ಇರಲು ಪ್ರಯತ್ನಿಸಿ. ಕ್ಷೀರೋತ್ಪನ್ನ ಹಾಗೂ ಹೋಟೆಲ್ ಉದ್ಯಮಗಳು ಹೆಚ್ಚಿನ ಲಾಭವನ್ನು ನೀಡುವುದು. ವಾರದ ಕಡೆಗೆ ಭಾವೋದ್ವೇಗಕ್ಕೆ ಒಳಗಾಗದೆ ಶಾಂತವಾಗಿರಲು ಪ್ರಯತ್ನಿಸಿ.

ಶ್ರೀಮನ್ನಾರಾಯಣನಾಮ ಜಪಿಸಿ. ಶುಭ ಸಂಖ್ಯೆ–1.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಆದಿಗೆ ವ್ಯಾಪಾರ, ವ್ಯವಹಾರಗಳು ಹೆಚ್ಚಿನ ಲಾಭವನ್ನು ತರುವುದು. ಪುಸ್ತಕ ವ್ಯಾಪಾರಿಗಳಿಗೆ ಪ್ರಕಾಶಕರಿಗೆ ಉತ್ತಮ ಧನಲಾಭವಾಗುವುದು. ಐಟಿಬಿಟಿಯವರಿಗೆ ವಿದೇಶ ಪ್ರಯಾಣ ಯೋಗವಿದೆ. ವಿದೇಶ ಉದ್ಯೋಗ ದೊರೆಯುವ ನಿರೀಕ್ಷೆ ಇದೆ. ಷೇರು ಮಾರಾಟದಿಂದ ಹೆಚ್ಚಿನ ಆದಾಯವಾಗಲಿದೆ. ಮನೆಯಲ್ಲಿ ಮಂಗಳ ಕಾರ್ಯ ನಡೆಯುವ ಸಂಭವವಿದೆ.

ಶ್ರೀ ವೆಂಕಟೇಶ್ವರ, ಪದ್ಮಾವತಿ ದರ್ಶನ. ಶುಭ ಸಂಖ್ಯೆ–7.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ನಿಮ್ಮ ಭಾಗ್ಯವಿದ್ದಂತೆ ಫಲ, ವಿದ್ಯೆ, ಪೌರುಷ ಯಾವುದೂ ಪ್ರಯೋಜನಕ್ಕೆ ಬರದು. ಅನುಭವಿಗಳ ಮಾತನ್ನು ನಿರ್ಲಕ್ಷಿಸದಿರಿ. ಹಿರಿಯರ ಮಾರ್ಗದರ್ಶನ ನಿಮಗೆ ತೀರಾ ಅಗತ್ಯವಿದೆ. ದಾಯಾದಿ ಮನಸ್ತಾಪಗಳು ಮುಂದುವರೆಯಲಿದೆ. ನಿಮ್ಮವರೇ ಮುಖ ತಿರುಗಿಸುವರು. ವಾರಾಂತ್ಯಕ್ಕೆ ನೀವು ನೆಚ್ಚಿಕೊಂಡ ವ್ಯಕ್ತಿಯವರ ಸಹಾಯಹಸ್ತ ದೊರೆತು ಸಂಕಷ್ಟದಿಂದ ಪಾರಾಗುವಿರಿ.

ಶ್ರೀನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–1.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಫ.ಬೆ)

ನಿಮ್ಮ ರಾಶ್ಯಾಧಿಪತಿ ವಿದ್ಯಾನಿಧಿ ಶ್ರೀ ಗುರು ಶುಭ ಸ್ಥಾನ ವಾಸಿಯಾಗಿದ್ದಾರೆ. ಸೂತ್ರ ಚೆನ್ನಾಗಿದ್ದರೆ ಎಲ್ಲವೂ ಸುಸೂತ್ರ ಎಂಬಂತೆ ಈ ವಾರ ಸಾಗುವುದು. ನಿಮ್ಮ ಜಾಣತನದಿಂದ ಜಟಿಲ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳುವಿರಿ. ರೈತಾಪಿ ಜನರಿಗೆ ಉತ್ತಮ ಇಳುವರಿಯಾಗಿ ಧನ ಲಾಭವಾಗುವುದು. ನಿಮ್ಮ ಮಾತೃಶ್ರೀಯವರ ಆರೋಗ್ಯದ ಬಗ್ಗೆ ಗಮನ ನೀಡಿ.

ಶ್ರೀ ಶ್ರೀಕಂಠೇಶ್ವರ ದರ್ಶನ. ಶುಭ ಸಂಖ್ಯೆ–8.



ಮಕರ (ಭೋ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಬೃಹಸ್ಪತಿ ಹಾಗೂ ಶನಿದೇವರ ಕೃಪಾಭಾವ ನಡೆದಿದೆ. ವಿಧಿಯಂತೆ ನಿರ್ವಹಿಸಿ, ಭಗವಂತನನ್ನು ಸ್ಮರಿಸಿ, ಭವಿಷ್ಯದ ಕೆಲಸಗಳಿಗೆ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಅಡ್ಡಿ ಇಲ್ಲ. ವಾರ ಮಧ್ಯಾನಂತರ ಚಂದ್ರಬಲದಿಂದ ನಿಮ್ಮ ಕ್ರಿಯಾಶಕ್ತಿ ಉತ್ತಮವಿದ್ದು, ಬರಬೇಕಾದ ಧನ ಕೈ ಸೇರುವುದು. ಗೆಳೆಯರ ಧನಾತ್ಮಕ ಸಲಹೆಯಿಂದ ಮುಖ್ಯ ಕೆಲಸ ಕಾರ್ಯಗಳು ದಡ ಮುಟ್ಟುವುದು.

ಶ್ರೀ ಶನೇಶ್ವರ ಮೂಲಮಂತ್ರ ಜಪಿಸಿ. ಶುಭ ಸಂಖ್ಯೆ–6.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಇದು ಸಾಡೇಸಾತಿ ಸಮಯವಾಗಿದ್ದು 'ನಂಬಿ ಕೆಟ್ಟವರಿಲ್ಲವೋ ಹರಿಯ, ನಂಬದವರು ಕೆಟ್ಟರೆ ಕೆಡಲಿ ಬಿಡು' ಎಂಬ ದಾಸರ ಪದದಂತೆ ಮುಂದೆ ಸಾಗಿ. ಯೋಚಿಸಬೇಡಿ ನಿರ್ದಿಷ್ಟ ಸಮಯಕ್ಕೆ ಹಣ ಒದಗಿ ಬರುತ್ತದೆ. ಮನೆಗೆ ಬರುವ ಅತಿಥಿಗಳೊಂದಿಗೆ ಮೃಷ್ಟಾನ್ನ ಭೋಜನ, ಮನೋರಂಜನಾ ಕಾರ್ಯಕ್ರಮಗಳು ಜರುಗುವುದು. ವಾರಾಂತ್ಯಕ್ಕೆ ದೇಹಾಯಾಸ ವೈದ್ಯರ ಸಂದರ್ಶನ.

ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ–5.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಈ ವಾರದಲ್ಲಿ ಹಿಡಿದ ಕೆಲಸಗಳು ಸಫಲತೆಯನ್ನು ಹೊಂದುವುದು. ಧನ, ಧಾನ್ಯ, ವೃದ್ಧಿ, ಸುಭೋಜನ, ಶಯನ ಸುಖಗಳೂ ಉಂಟು. ವಿದ್ವಾಂಸರ ಭೇಟಿಯಿಂದ ಜ್ಞಾನ ವೃದ್ಧಿ. ಸಾರ್ವಜನಿಕ ಕ್ಷೇತ್ರದಲ್ಲಿ ಗೌರವ ಪ್ರಾಪ್ತಿ. ಪಿತ್ರಾರ್ಜಿತ ಆಸ್ತಿ ವಿಷಯದಲ್ಲಿ ಅಸಮಾಧಾನ ಉಂಟಾಗುವುದು. ರಾಹು–ಕೇತು ಶುಭರಿಲ್ಲ. ಜಾಗ್ರತೆ ತಪ್ಪಿದರೆ ಜಾರುತ್ತೀರಾ.

ಶ್ರೀ ರಾಹು–ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4.

ಮೈಸೂರು ಮಿತ್ರ ಭಾನುವಾರ 19 ನವೆಂಬರ್ 2023

ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕುರಿತು

ಸಚಿವ ಮಹದೇವಪ್ಪ, ಸುನಿಲ್ ಬೋಸ್ ಜೊತೆ ಸಿಎಂ ಚರ್ಚೆ

ತಿ.ನರಸೀಪುರ, ನ.18– ಮುಂಬರುವ ಲೋಕಸಭಾ ಚುನಾವಣೆಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಭ್ಯರ್ಥಿಗಳ ಆಯ್ಕೆಯ ತಯಾರಿ ನಡೆಸಿದ್ದು, ತಮ್ಮ ತವರು ಜಿಲ್ಲೆಯಾದ ಮೈಸೂರು ಮತ್ತು ಚಾಮರಾಜನಗರ ಲೋಕಸಭಾ ಕ್ಷೇತ್ರದ ಆಕಾಂಕ್ಷಿಗಳ ಜೊತೆ ಸಭೆ ನಡೆಸಿದ್ದಾರೆ.

ಅದರಲ್ಲೂ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಮತ್ತು ಟಿಕೆಟ್ ಆಕಾಂಕ್ಷಿಯಾದ ಮಹದೇವಪ್ಪ ಅವರ ಪುತ್ರ ಸುನಿಲ್ ಬೋಸ್‌ರೊಂದಿಗೆ ಮುಕ್ತವಾಗಿ ಚರ್ಚಿಸಿದ್ದು, ಪಕ್ಷದ ಹೈಕಮಾಂಡ್ ಜೊತೆ ಚರ್ಚಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ ಎಂದು ತಿಳಿದು ಬಂದಿದೆ.



ವಿವಿಧ ಕಾರ್ಯಗಳ ನಿಮಿತ್ತ ಶುಕ್ರವಾರ ಮತ್ತು ಶನಿವಾರ ಮೈಸೂರು ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಮೈಸೂರಿನ ವಿಜಯನಗರದಲ್ಲಿರುವ ಸುನಿಲ್ ಬೋಸ್ ಅವರ ನಿವಾಸಕ್ಕೆ ಔತಣಕ್ಕೆ ತೆರಳಿದ್ದ ವೇಳೆ ಈ ಕುರಿತು ಚರ್ಚಿಸಿದ್ದಾರೆ.

ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ನವರೊಂದಿಗಿನ ಚರ್ಚೆ ವೇಳೆ ಸುನಿಲ್ ಬೋಸ್, ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ತಮಗೆ ಟಿಕೆಟ್ ನೀಡಿದರೆ ಖಂಡಿತವಾಗಿ ಗೆದ್ದು ಬರುವುದಾಗಿ ಸ್ಪಷ್ಟಪಡಿಸಿ ದರು ಎನ್ನಲಾಗಿದೆ. ಈ ವೇಳೆ ಸುನೀಲ್ ಬೋಸ್ ಅವರ ಪತ್ನಿ ಶ್ರೀಮತಿ ಸವಿತಾ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸಚಿವ ಮಹದೇವಪ್ಪನವರು ಕೂಡ ತಮ್ಮ ಪುತ್ರನಿಗೆ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಮನವಿ ಮಾಡಿದರೆನ್ನಲಾಗಿದೆ.

ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಮಾಜಿ ಸಂಸದ ದಿವಂಗತ ಧ್ರುವನಾರಾಯಣ್ ನಂತರ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಪಕ್ಷದ ಹಲವಾರು ಮುಖಂಡರು ಕಸರತ್ತು ನಡೆಸುತ್ತಿದ್ದಾರೆ. ಆಕಾಂಕ್ಷಿಗಳು ತಮ್ಮದೇ ಆದ ಗಾಡ್‌ಫಾದರ್‌ಗಳ ಮೂಲಕ ಟಿಕೆಟ್‌ಗಾಗಿ ಪ್ರಯತ್ನಿಸುತ್ತಿರುವುದಲ್ಲದೆ, ಕ್ಷೇತ್ರದ ಕಾರ್ಯಕರ್ತರನ್ನು ಭೇಟಿಯಾಗುತ್ತಿದ್ದಾರೆ. ಬಿಜೆಪಿಯಲ್ಲೂ ಸಹ ಹಾಲಿ ಸಂಸದರಾದ ಶ್ರೀನಿವಾಸ್ ಪ್ರಸಾದ್ ನಂತರ ಪಕ್ಷದ ಟಿಕೆಟ್‌ಗಾಗಿ ಹಲವರು ತೀವ್ರವಾಗಿ ಪೈಪೋಟಿಗಿಳಿದಿದ್ದಾರೆ.

ಗ್ರಾಮೀಣ ಪ್ರತಿಭೆ ಗುರುತಿಸಿ, ಪ್ರೋತ್ಸಾಹಿಸಿ



ಕೆ.ಆರ್.ನಗರ, ನ.18– ಗ್ರಾಮೀಣ ಭಾಗದ ಮಕ್ಕಳಲ್ಲಿ ಹೆಚ್ಚಾಗಿ ಪ್ರತಿಭೆಗಳಿದ್ದು, ಅಂತಹ ಮಕ್ಕಳನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸವನ್ನು ಶಿಕ್ಷಕರು ಮಾಡಬೇಕು. ಆಗ ವಿದ್ಯಾರ್ಥಿಗಳು ಎಲ್ಲಾ ರಂಗದಲ್ಲೂ ಸಾಧನೆ ಮಾಡಲಿದ್ದಾರೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ತಾಲೂಕಿನ ಕಾಳೇನಹಳ್ಳಿ ಗ್ರಾಮದಲ್ಲಿರುವ ಆದರ್ಶ ವಿದ್ಯಾಲಯದಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ, ಕಲೋತ್ಸವ ಸ್ಪರ್ಧೆಗಳ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ಶಿಕ್ಷಕ ವೃಂದ ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಕ್ಕಳಂತೆ ಕಂಡು ಅವರುಗಳ ಬೆಳವಣಿಗೆಗೆ ಕಾರಣಕರ್ತರಾಗಬೇಕು ಎಂದರು.

ಬಾಲ್ಯದಲ್ಲಿರುವ ಪ್ರತಿಭೆಯನ್ನು ಗುರುತಿಸುವ ಸಲುವಾಗಿ ಸರ್ಕಾರ ಪ್ರತಿಭಾ ಕಾರಂಜಿಯಂತಹ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ವಿದ್ಯಾರ್ಥಿಗಳು ಇದರ ಸದ್ಬಳಕೆ ಮಾಡಿಕೊಂಡು ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಿ ತಾಲೂಕು ಮಟ್ಟದಿಂದ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲೂ ಗುರುತಿಸಿಕೊಳ್ಳುವಂತೆ ಸಲಹೆ ನೀಡಿದರು.

ತಹಶೀಲ್ದಾರ್ ಸಿ.ಎಸ್.ಪೂರ್ಣಿಮ, ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ ರೇವಣ್ಣ, ಸದಸ್ಯರಾದ ಸುನೀತಾ, ಚೌಕಳ್ಳಿ ಶೇಖರ್, ಶ್ವೇತಾರವಿ, ಕೆ.ಪಿ.ಜಗದೀಶ್, ಉಮೇಶ್, ಬಿಇಒ ಆರ್. ಕೃಷ್ಣಪ್ಪ ಬಿಆರ್‌ಸಿ ವೆಂಕಟೇಶ್, ಶಿಕ್ಷಣ ಸಂಯೋಜಕ ದಾಸಪ್ಪ, ಕಿರಣ್‌ಕುಮಾರ್, ಮುಖ್ಯಾಧಿಕಾರಿ ಡಾ.ಜಯಣ್ಣ, ಶಿಕ್ಷಕರ ಸಂಘದ ಅಧ್ಯಕ್ಷ ನಾಗರಾಜು, ಮುಖ್ಯ ಶಿಕ್ಷಕಿ ರುಕ್ಮಿಣಿ, ಎಸ್‌ಡಿಎಂಸಿ ಅಧ್ಯಕ್ಷ ಧರ್ಮ ರಾಜ್, ಸದಸ್ಯ ದೊಡ್ಡಕೊಪ್ಪಲು ರವಿ, ಸಿಆರ್‌ಪಿ ವಸಂತ್‌ಕುಮಾರ್, ಶಿಕ್ಷಕರಾದ ನಾರಾಯಣ ಪ್ರಸಾದ್, ಮಧುಕುಮಾರ್, ಲಕ್ಷ್ಮಿಕಾಂತ್, ರಶ್ಮಿಮಂಜುನಾಥ್, ಸಿ.ಎನ್.ಸ್ವಾಮಿ, ಕೆ.ಪಿ.ಭಾರತಿ ಮತ್ತಿತರರು ಹಾಜರಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಂಜನಗೂಡು ಎಂಜಿಎಸ್ ರಸ್ತೆಯಲ್ಲಿರುವ ಶ್ರೀಕನಕದಾಸ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಆವರಣದಲ್ಲಿ ದಿ.ರಾಮಮ್ಮ, ಎನ್.ರಾಚಯ್ಯನವರ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಅಧ್ಯಯನ ಕಟ್ಟಡದ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಸಚಿವ ಎಚ್.ಸಿ.ಮಹದೇವಪ್ಪ, ಶಾಸಕರಾದ ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಕನಕದಾಸ ಸಾರ್ವಜನಿಕ ಟ್ರಸ್ಟ್ ಅಧ್ಯಕ್ಷ ಬಿ.ಎಂ.ರಾಮು, ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ಕಾಳೇಗೌಡ, ನೀಲಿಸಿದ್ದು, ಶಿವಮಲ್ಲು, ಸೇರಿದಂತೆ ನಿರ್ದೇಶಕರು ಮುಖಂಡರು ಇದ್ದರು.

ಮೈಸೂರು- ಕೊಡಗು ಲೋಕಸಭಾ ಕ್ಷೇತ್ರ

ದೇವರಾಜ ಅರಸು ಮೊಮ್ಮಗ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ

ಹುಣಸೂರು, ನ.18– ಮುಂಬರುವ ಮೈಸೂರು ಮತ್ತು ಕೊಡಗು ಲೋಕಸಭಾ ಕ್ಷೇತ್ರದಿಂದ ನಾನು ಕೂಡ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಎಂದು ದಿವಂಗತ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ್ ಅರಸು ಅವರ ಮೊಮ್ಮಗ, ರಾಷ್ಟ್ರೀಯ ಕಾಂಗ್ರೆಸ್ ಉಪಾಧ್ಯಕ್ಷ ಸೂರಜ್ ಹೆಗಡೆ ತಿಳಿಸಿದ್ದಾರೆ.

ದಿ. ದೇವರಾಜ ಅರಸು ಅವರ ಹುಟ್ಟೂರು ಅರಸು ಕಲ್ಲಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಅರಸು ಸಮಾಧಿಗೆ ಪೂಜೆ ಸಲ್ಲಿಸಿ ನಂತರ ಪತ್ರಕರ್ತರ ಜೊತೆ ಮಾತನಾಡಿ, ಮೂರು ದಶಕಗಳಿಂದ ಕಾಂಗ್ರೆಸ್ ಪಕ್ಷಕ್ಕೆ ನನ್ನದೇ ಆದ ಕೊಡುಗೆ ನೀಡಿದ್ದೇನೆ, ದಿವಂಗತ ನಮ್ಮ ತಾತ ದೇವರಾಜ ಅರಸ್ ಅವರು ರಾಜ್ಯಕ್ಕೆ ಅನೇಕ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ನಾನು ಕೂಡ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಮೈಸೂರು ಗ್ರಾಮಾಂತರ ಉಸ್ತುವಾರಿ ಜವಾಬ್ದಾರಿ ಹೊತ್ತು ಪಕ್ಷದಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ ಎಂದರು.



ಟಿಕೆಟ್ ಕೇಳಿದರೆ ತಪ್ಪೇನಿಲ್ಲ : ಮೈಸೂರು ಜಿಲ್ಲೆಗೆ ಹಲವರು ಆಕಾಂಕ್ಷಿಗಳಿದ್ದಾರೆ. ಆದರೆ ನಾನು ಕೂಡ ಪ್ರಬಲ ಆಕಾಂಕ್ಷಿಯಾಗಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಟಿಕೆಟ್ ಕೇಳಿದರೆ ತಪ್ಪೇನಿಲ್ಲ. ಕೊಡುವುದು, ಬಿಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ನಾನು ಮುಂದಿನ ದಿನಗಳಲ್ಲಿ ಮೈಸೂರು–ಕೊಡಗು ಕ್ಷೇತ್ರದಲ್ಲಿ ಓಡಾಡಿ ಪಕ್ಷ ಸಂಘಟನೆ ಮಾಡುವೆ ಎಂದರು.

ಸೂರಜ್‌ಗೆ ಟಿಕೆಟ್ ನೀಡುವ ವಿಶ್ವಾಸ: ಈ ಬಾರಿ ದೇವರಾಜ ಅರಸು ಅವರ ಕುಟುಂಬಕ್ಕೆ ಟಿಕೆಟ್ ನೀಡುವ ವಿಶ್ವಾಸವಿದ್ದು, ಟಿಕೆಟ್ ಕೊಡುವ ತೀರ್ಮಾನ ಹೈಕಮಾಂಡ್‌ಗೆ ಬಿಟ್ಟಿದ್ದೇವೆ. ದೇವರಾಜ ಅರಸು ಅವರ ಕುಟುಂಬದವರಿಗೆ ಈ ಬಾರಿ ಟಿಕೆಟ್ ನೀಡಿದರೆ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವಿಗೆ ಸಹಕಾರಿಯಾಗಲಿದೆ ಎಂದು ಇದೇ ವೇಳೆ ಸೂರಜ್ ಹೆಗಡೆ ಜೊತೆ ಉಪಸ್ಥಿತರಿದ್ದ ರಾಜ್ಯ ಕಾಂಗ್ರೆಸ್ ಕಾರ್ಯದರ್ಶಿ ಶಿವಬಸಪ್ಪ ತಿಳಿಸಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಎಸ್. ಶಿವನಾಗಪ್ಪ, ಕೆಪಿಸಿಸಿ ಸದಸ್ಯ ಭಾಸ್ಕರ್, ಕೊಡಗು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಅರವಿಂದ ಕುಟ್ಟಪ್ಪ, ಮಹಿಳಾ ಘಟಕದ ಸದಸ್ಯರಾದ ಶಾಂತ, ರೇಣುಕಾ, ಎನ್‌ಎಸ್‌ಯುಐ ಕಾರ್ಯಾಧ್ಯಕ್ಷ ನಾಗೇಶ್ ಕರಿಯಪ್ಪ, ತ್ರಿಭುವನ್ ಕಾರ್ಮಿಕ ವಿಭಾಗದ ರಾಜ್ಯಾಧ್ಯಕ್ಷ ಶಾಹಿರಾ ಬಾನು ಹಾಗೂ ಪದ್ಮನಾಭ ಸೇರಿದಂತೆ ಸ್ವರೂಪ, ರಘುರಾಜ್ ಅರಸ್, ಶಿವಕುಮಾರ್, ಶ್ರೀನಿವಾಸ ಮೂರ್ತಿ, ಎಪಿ ಸ್ವಾಮಿ, ತ್ರಿಭುವನ್, ಕಾರ್ಮಿಕರ ರಾಜ್ಯ ಕಾರ್ಯದರ್ಶಿ, ಸೂರಜ್ ಹೆಗಡೆ ಅವರ ಪತ್ನಿ ಶಿಲ್ಪ ಸೂರಜ್, ಪದ್ಮನಾಭ ಸೇರಿದಂತೆ ಪಕ್ಷದ ಕಾರ್ಯಕರ್ತರು ಇದ್ದರು.

ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ

ಕೆ.ಆರ್.ನಗರ: ತಾಲೂಕಿನ ಚೀರ್ನಹಳ್ಳಿ ಗ್ರಾಮದ ಶ್ರೀ ಕಾಲಭೈರವೇಶ್ವರ ಟ್ರಸ್ಟ್ ವತಿಯಿಂದ ನಿರ್ಮಿಸಲಾಗಿರುವ ಕಾಲಭೈರವೇಶ್ವರ ಸ್ವಾಮಿ ದೇವಾಲಯದ 12ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವನ್ನು ಭಾನುವಾರ(ನ.19) ಏರ್ಪಡಿಸಲಾಗಿದೆ. ವಾರ್ಷಿಕೋತ್ಸವದ ಅಂಗವಾಗಿ ದೇವರಿಗೆ ವಿಶೇಷ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿದೆ, ಸಂಜೆ ಬೆಂಗಳೂರು ಮಿತ್ರ ಮಂಡಳಿ ಮತ್ತು ತಂಡದವರಿಂದ ನೃತ್ಯ ಹಾಗೂ ಮಿಮಿಕ್ರಿ ಸೇರಿದಂತೆ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದ್ದು ದೇವಾಲಯಕ್ಕೆ ಸೇರಿದ ಬಂಧುಗಳು ಹೆಚ್ಚಿನ ಸಂಖ್ಯೆ ಯಲ್ಲಿ ಆಗಮಿಸಬೇಕು ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಚೀರ್ನಹಳ್ಳಿ ಶಿವಣ್ಣ ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9972728486 ಸಂಪರ್ಕಿಸಬಹುದು.

ಕಾರ್ಮಿಕ ಇಲಾಖೆಯಲ್ಲಿ ದಲ್ಲಾಳಿಗಳ ಹಾವಳಿ



ಸರಗೂರು, ನ.18– ಪಟ್ಟಣದ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಕಾರ್ಮಿಕ ಇಲಾಖೆ ವತಿಯಿಂದ ಯಾವುದೇ ಸೌಲಭ್ಯ ಸಿಗುತ್ತಿಲ್ಲ, ಅಧಿಕಾರಿಗಳು ಕಾರ್ಮಿಕರನ್ನು ಕಚೇರಿಗೆ ಅಲೆದಾಡಿಸುತ್ತಿದ್ದು, ಕಚೇರಿಯಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ. ಇದರ ಬಗ್ಗೆ ಸೂಕ್ತ ಕ್ರಮ ವಹಿಸಬೇಕು ಎಂದು ಕಟ್ಟಡ ಕಾರ್ಮಿಕ ಸಂಘದ ಪ್ರಭಾರ ಅಧ್ಯಕ್ಷ ಪುಟ್ಟಹನುಮಯ್ಯ ಆಗ್ರಹಿಸಿದ್ದಾರೆ.

ತಾಲೂಕಿನ ಪಟ್ಟಣದ ಕಟ್ಟಡ ಕಾರ್ಮಿಕ ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸಂಘದ ಎಲ್ಲಾ ಪದಾಧಿಕಾರಿಗಳೊಂದಿಗೆ ಕಾರ್ಮಿಕ ಇಲಾಖೆಗೆ ತೆರಳಿ ಕಾರ್ಮಿಕ ನಿರೀಕ್ಷಕ ಜಯಶೀಲ ಅವರಿಗೆ ಮನವಿ ಸಲ್ಲಿಸಿದರು.

ನಿಕಟಪೂರ್ವ ಅಧ್ಯಕ್ಷ ಶಿವರಾಜು ಹಾಗೂ ಕಾರ್ಯದರ್ಶಿ ಬಸವರಾಜು ಮಾತನಾಡಿ, ಕಟ್ಟಡ ಕಾರ್ಮಿಕ ಸಂಘದ ಸದಸ್ಯರಿಗೂ ಕಾರ್ಮಿಕ ಇಲಾಖೆ ವತಿಯಿಂದ ಯಾವುದೇ ಸೌಲಭ್ಯ ಸಿಕ್ಕುತ್ತಿಲ್ಲ, ನಮ್ಮ ಕಟ್ಟಡ ಕಾರ್ಮಿಕ ಸಂಘದಲ್ಲಿ 230 ಸದಸ್ಯರು ಇದ್ದಾರೆ. ನಾವುಗಳು ಕಡುಬಡವರಾಗಿದ್ದು, ಕೂಲಿ ಮಾಡಿಕೊಂಡು ಜೀವನ ನಡೆಸುತ್ತಿದ್ದೇವೆ. ನಮಗೆ ಸರ್ಕಾರದಿಂದ ಸವಲತ್ತು ಇಲ್ಲಿವರೆಗೂ ಸಿಕ್ಕಿಲ್ಲ. ಇಲಾಖೆಯಿಂದ ಕೂಲಿ ಕಾರ್ಮಿಕರ ಕುಟುಂಬಗಳ ವಿದ್ಯಾರ್ಥಿಗಳಿಗೆ ಅನುದಾನ ಬರುತ್ತಿಲ್ಲ. ಕಟ್ಟಡ ಕಾರ್ಮಿಕರನ್ನು ಕಡೆಗಣಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಈ ಸಮಸ್ಯೆಗಳನ್ನು ಸರಿಪಡಿಸದಿದ್ದರೆ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಕಾರ್ಮಿಕ ಇಲಾಖೆ ನಿರೀಕ್ಷಕ ಜಯಶೀಲ ಮನವಿ ಸ್ವೀಕರಿಸಿ ಮಾತನಾಡಿ, ಲ್ಯಾಪ್‌ಟಾಪ್ ವಿತರಣೆ ಬಗ್ಗೆ ಸರ್ವೆ ನಡೆಸಲಾಗುತ್ತಿದೆ. ಎಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ 14000 ಮಂದಿ ಕಾರ್ಮಿಕರ ಕಾರ್ಡ್ ಹೊಂದಿದ್ದಾರೆ. ಇದರಿಂದ ಯಾರು ನಿಜವಾದ ಗಾರೆ ಕೆಲಸ ಮಾಡಿದ್ದಾರೆ. ಅಂತವರನ್ನು ನೋಡಿ ಸೌಲಭ್ಯವನ್ನು ನೀಡಲಾಗುತ್ತದೆ. ಕಾರ್ಡ್‌ಗಳ ಸರ್ವೆ ಒಂದು ವಾರದಿಂದ ತಾಲೂಕಿನ ಎಲ್ಲಾ ಗ್ರಾಮಗಳಿಗೆ ತೆರಳಿ ನಡೆಸಲಾಗುತ್ತಿದೆ.

ಗೌರವಾಧ್ಯಕ್ಷ ರಾಚಯ್ಯ, ಖಜಾಂಚಿ ಆದಿಶೇಷ, ರಮೇಶ್, ಬೋಗಯ್ಯ, ಕಾರ್ಯನಿರ್ವಾಹಕ ಸಿದ್ದಪ್ಪ, ನಿರ್ದೇಶಕರಾದ ನಂಜುಂಡಶೆಟ್ಟಿ, ಸತೀಶ್ ಕುಮಾರ್, ತಂಗವೇಲು, ಜಬ್ಬಾರ್, ಎಸ್ ಕೆ ರಾಜಣ್ಣ, ನಾಗರಾಜು, ಮಹಾದೇವ ಇನ್ನಿತರರಿದ್ದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ



ಹಿರೀಕ್ಯಾತನಹಳ್ಳಿ, ನ.18– ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಬಿ.ಸಿ. ಟ್ರಸ್ಟ್‌ನ ಜ್ಞಾನವಿಕಾಸ ಕೇಂದ್ರದ ವತಿಯಿಂದ ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಮಕ್ಕಳಿಗೆ ಮೂರು ತಿಂಗಳ ವಿಶೇಷ ಬೋಧನಾ ತರಗತಿಗಳಿಗೆ ಸಂಸ್ಥೆಯ ತಾಲೂಕು ಯೋಜನಾಧಿಕಾರಿ ನಾರಾಯಣಶೆಟ್ಟಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು ತಾಲೂಕಿನಲ್ಲಿ ಒಟ್ಟು 8 ಸರ್ಕಾರಿ ಪ್ರೌಢ ಶಾಲೆಗಳ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ವಿಶೇಷ ಬೋಧನೆ ಮಾಡುವ ಶಿಕ್ಷಕರಿಗೆ ಸಂಸ್ಥೆ ಗೌರವ ಧನ ಸಹಾಯ ಮಾಡುತ್ತಿದೆ. ಇದರ ಉದ್ದೇಶ ಗ್ರಾಮೀಣ ಪ್ರದೇಶದ ಮಕ್ಕಳು ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಂಡು ಮುಂದಿನ ವಿದ್ಯಾಭ್ಯಾಸಕ್ಕೆ ಮತ್ತಷ್ಟು ಅನುಕೂಲವಾಗುವುದರ ಜೊತೆಗೆ ವಿದ್ಯಾರ್ಜನೆಗೆ ಭವಿಷ್ಯದ ತಯಾರಿಕೆಗೆ ಸಹಕಾರಿಯಾಗಲಿದೆ ಎಂದರು.

ಶಾಲೆಯ ಮುಖ್ಯ ಶಿಕ್ಷಕಿ ಸರಳ ಮಾತನಾಡಿದರು. ಶಾಲಾ ಅಭಿವೃದ್ಧಿ ಸಮಿತಿಯ ನಿಕಟಪೂರ್ವ ಅಧ್ಯಕ್ಷ ಹರೀಶ್, ಮಾಜಿ ಅಧ್ಯಕ್ಷ ರವಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸ್ವಾಮಿಗೌಡ, ತಾಲೂಕು ಜ್ಞಾನ ವಿಕಾಸ ಕೇಂದ್ರದ ಸಮನ್ವಯಾಧಿಕಾರಿ ರೂಪ, ವಲಯ ಮೇಲ್ವಿಚಾರಕಿ ಸವಿತಾ, ಸಂಸ್ಥೆಯ ಕೃಷಿ ಮೇಲ್ವಿಚಾರಕ ಅಣ್ಣಪ್ಪ, ಸೇವಾ ಪ್ರತಿನಿಧಿ ಭಾರತಿ ಸುರೇಶ್ ಹಾಗೂ ಶಾಲೆಯ ಸಹ ಶಿಕ್ಷಕರು ವಿದ್ಯಾರ್ಥಿಗಳು ಹಾಜರಿದ್ದರು.

600 ಕೋಟಿ ರೂ. ಕಾಮಗಾರಿಗಳ ವಿವರ ಕೊಡಿ

ಮುಖ್ಯಮಂತ್ರಿಗಳಿಗೆ ಮಾಜಿ ಶಾಸಕ ಹರ್ಷವರ್ಧನ್ ಆಗ್ರಹ

ನಂಜನಗೂಡು, ನ.18– ಮುಖ್ಯಮಂತ್ರಿ ಸಿದ್ಧರಾಮಯ್ಯನವರು 2017ರಲ್ಲಿ ನಡೆದ ನಂಜನಗೂಡು ಉಪ ಚುನಾವಣೆಯಲ್ಲಿ 600 ಕೋಟಿ ರೂಗಳನ್ನು ನಂಜನಗೂಡು ಕ್ಷೇತ್ರಕ್ಕೆ ಬಿಡುಗಡೆ ಮಾಡಿರುವುದಾಗಿ ಹೇಳಿದ್ದಾರೆ. ಈ ಅವಧಿಯಲ್ಲಿನ ಕಾಮಗಾರಿಗಳ ವಿವರವನ್ನು ಮತದಾರರಿಗೆ ನೀಡಲಿ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಆಗ್ರಹಿಸಿದ್ದಾರೆ.

ಶನಿವಾರ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ನಂಜನಗೂಡಿಗೆ ಆಗಮಿಸಿ ಕೈಬೀಸಿ ಹೋದರು. ಇದರಿಂದ ಜನರಿಗೇನು ಲಾಭ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಕಳಲೆ ಗ್ರಾಮದಲ್ಲಿ ನಡೆದ ಸಮಾರಂಭದಲ್ಲಿ ಪ್ರಶ್ನಿಸಿದ್ದಾರೆ. ಆದರೆ ದೇಶದ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಬಗ್ಗೆ ಎಲ್ಲರಿಗೂ ಹೆಮ್ಮೆ ಇದೆ. ಮತ್ತೊಮ್ಮೆ ನರೇಂದ್ರ ಮೋದಿ ನೇತೃತ್ವದ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದರು.

ಇನ್ನು ರಾಜ್ಯ ಸರಕಾರದ ಐದು ಗ್ಯಾರಂಟಿಗಳ ಜಾರಿಯೇ ಇನ್ನೂ ಅನಿಶ್ಚಿತತೆಯಲ್ಲಿದ್ದು, ಗೃಹಲಕ್ಷ್ಮಿ ಯೋಜನೆಯಲ್ಲಿ ಒಂದನೇ ಕಂತಿನ ಹಣ ಶೇ.60 ಮಂದಿಗೆ ಬಿಡುಗಡೆಯಾಗಿದ್ದು, ಮುಂದಿನ ದಿನಗಳಲ್ಲಿ ತಮಗೆ ಹಣ ಬಿಡುಗಡೆಯಾಗುವುದೇ ಎಂದು ಜನ ಪ್ರಶ್ನಿಸುತ್ತಿದ್ದಾರೆ. ಇನ್ನು ನಿರುದ್ಯೋಗಿಗಳಿಗೆ ಭತ್ಯೆ ನೀಡುವುದಾಗಿ ಚುನಾವಣಾಪೂರ್ವದಲ್ಲಿ ಕಾಂಗ್ರೆಸ್‌ನವರು ಹೇಳಿದ್ದರಾದರೂ ಪ್ರಸಕ್ತ ಬಜೆಟ್‌ನಲ್ಲಿ ಅನುದಾನವನ್ನೇ ಮೀಸಲಿರಿಸಿಲ್ಲ. ಹೀಗಾಗಿ ಯುವ ನಿಧಿ ಯೋಜನೆ ಜಾರಿಯಾಗುವುದು ಯಾವಾಗ ಎಂಬುದನ್ನು ಸರಕಾರ ಸ್ಪಷ್ಟಪಡಿಸಬೇಕಿದೆ ಎಂದರು.



ಅಧಿಕಾರಕ್ಕೆ ಬಂದ ತಕ್ಷಣ ವಿದ್ಯುತ್ ದರವನ್ನು ದುಪ್ಪಟ್ಟು ಏರಿಕೆ ಮಾಡಿದ್ದಲ್ಲದೆ ಆಸ್ತಿ ಖರೀದಿಸುವ ಜನರಿಗೆ ನೋಂದಣಿ ಶುಲ್ಕವನ್ನು ಹೆಚ್ಚಳ ಮಾಡಲಾಗಿದೆ. ಜತೆಗೆ ಮದ್ಯದ ದರದಲ್ಲೂ ಭಾರಿ ಏರಿಕೆ ಮಾಡಲಾಗಿದ್ದು ಕಾಂಗ್ರೆಸ್ ಸರ್ಕಾರದ ಅಧಿಕಾರಾವಧಿಯಲ್ಲಿ ದರ ಏರಿಕೆಯ ಬಿಸಿಯಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇನ್ನು ರಾಜ್ಯ ಸರಕಾರ ಆರನೇ ಗ್ಯಾರಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಂದಿನ ಐದು ವರ್ಷ ನಾನೇ ಸಿಎಂ ಎಂದು ಹೇಳಿದ್ದಾರೆ. ಇದು ಖಚಿತವೇ ಎಂದು ಅವರೇ ಸ್ಪಷ್ಟಪಡಿಸಬೇಕು ಎಂದು ಹೇಳಿದರು.

ಇನ್ನು ಕಳಲೆ ಗ್ರಾಮದ ಅಭಿವೃದ್ಧಿಗೆ ನನ್ನ ಅವಧಿಯಲ್ಲಿ 10 ಕೋಟಿ ರೂ.ಗಳ ಅನುದಾನವನ್ನು ಮಂಜೂರು ಮಾಡಿದ್ದೇನೆ. ಇನ್ನು ನಾನು 5 ವರ್ಷ ಕ್ಷೇತ್ರದ ಶಾಸಕನಾಗಿ ಉತ್ತಮ ಸೇವೆ ಸಲ್ಲಿಸಿರುವ ತೃಪ್ತಿಯಿದ್ದು ಜನರೂ ನನ್ನ ಅವಧಿಯಲ್ಲಾಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸ್ಮರಿಸುತ್ತಿದ್ದಾರೆ ಎಂದರು.

ಬಿ.ವೈ.ವಿಜಯೇಂದ್ರ ಸಮರ್ಥರಿದ್ದಾರೆ;– ರಾಜ್ಯ ಬಿಜೆಪಿಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬಿ.ವೈ.ವಿಜಯೇಂದ್ರ ಅತ್ಯುತ್ತಮ ಸಂಘಟಕರಾಗಿದ್ದು, ಅವರು ಬಿಜೆಪಿಯನ್ನು ಬಲಯುತಗೊಳಿಸಲು ನೆರವಾಗಲಿದ್ದಾರೆ. ಪ್ರತಿಪಕ್ಷದ ನಾಯಕನಾಗಿ ಆರ್. ಅಶೋಕ್ ಅವರೂ ನೇಮಕಗೊಂಡಿದ್ದು ಅಧಿವೇಶನದಲ್ಲಿ ಸರ್ಕಾರದ ವೈಫಲ್ಯವನ್ನು ಅವರು ಪ್ರಶ್ನಿಸಲಿದ್ದಾರೆ. ಮುಂಬರುವ ದಿನಗಳಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರನ್ನು ನಂಜನಗೂಡಿಗೆ ಕರೆತಂದು ಕಾರ್ಯಕರ್ತರ ಸಮ್ಮುಖದಲ್ಲಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮಾಂತರ ಮಂಡಲ ಅಧ್ಯಕ್ಷ ಪಿ.ಮಹೇಶ್, ನಗರಅಧ್ಯಕ್ಷ ಶ್ರೀನಿವಾಸರೆಡ್ಡಿ, ಬಾಲಚಂದ್ರು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಬಿ.ಎಸ್.ರಾಮು, ಹುಲ್ಲಹಳ್ಳಿಶಿವಣ್ಣ, ಹೆಮ್ಮರಗಾಲ ಶಿವಣ್ಣ, ಮಹದೇವಪ್ರಸಾದ್, ಗಾಯತ್ರಿ ಸಿದ್ದರಾಜು, ಧನರಾಜ್ ಬೂಲ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಂಗಳ ವರುಂ(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಪಾನ್ (ಇ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಸಂಗಂ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	4 ಪ್ರದರ್ಶನಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಂಗಳ ವರುಂ (ಕ)	4 ಪ್ರದರ್ಶನಗಳು
ಪ್ರಭಾ	
ನೇತ್ರಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಟೈಗರ್ 3(ಹಿಂ):** ಬೆ.10.20ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಟಗರುಪಲ್ಯ (ಕ):** ಮ.1.20ಕ್ಕೆ.
ಸ್ಕ್ರೀನ್ 2	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, **ರಾಜಯೋಗ (ಕ):** ಮ.1.15ಕ್ಕೆ, **ನೇತ್ರಂ (ಕ):** ಸಂ.4.30ಕ್ಕೆ, **ಗರಡಿ (ಕ):** ರಾ.7.10ಕ್ಕೆ, **ಸ್ಪಾರ್ಕ್ ಲೈಫ್ (ತೆ):** ರಾ.10ಕ್ಕೆ.
ಸ್ಕ್ರೀನ್ 3	**ಟ್ರೋಲ್ಸ್ ಬ್ಯಾಂಡ್ ಟುಗೆದರ್ (3ಡಿ)(ಇಂ):** ಬೆ.11ಕ್ಕೆ, ಮ.3.35ಕ್ಕೆ, ಸಂ.5.30ಕ್ಕೆ, **ಬೆಂಬಿಡದ ನಾವಿಕ (ಕ):** ಮ.1ಕ್ಕೆ, **ಶೇಶಮ್ ಮೈಕ್ ಇಲ್ ಫಾತಿಮಾ (ಮ):** ರಾ.7.30ಕ್ಕೆ, **ದಿ ಹಂಗರ್ ಗೇಮ್ಸ್ (ಇಂ):** ರಾ.10.10ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9ಕ್ಕೆ, ಮ.12.10ಕ್ಕೆ, ಸಂ.3.20ಕ್ಕೆ, ಸಂ.6.30ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	**ಟೈಗರ್ 3 (ಹಿಂ):** ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	**ಮಂಗಳವಾರಂ (ತೆ):** ಬೆ.9.10ಕ್ಕೆ, ಮ.12.25ಕ್ಕೆ, ಸಂ.6.45ಕ್ಕೆ, **ಗರಡಿ (ಕ):** ಮ.3.40ಕ್ಕೆ, **ಟೈಗರ್ 3 (ಹಿಂ):** ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, ಸಂ.4.10ಕ್ಕೆ, **ರಾಜಯೋಗ (ಕ):** ಮ.1.05ಕ್ಕೆ, ಸಂ.6.15ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, **ಟೈಗರ್ 3 (ಹಿಂ):** ಸಂ.4.20ಕ್ಕೆ.
ಸ್ಕ್ರೀನ್ 3	**ಟೈಗರ್ 3(ಹಿಂ):** ಬೆ.11ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ಟಗರುಪಲ್ಯ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, **ಟೈಗರ್ 3 (ಹಿಂ):** ಮ.1.05ಕ್ಕೆ, ರಾ.9.30ಕ್ಕೆ.


ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮುಂಬರುವ ಚುನಾವಣೆಗಳಲ್ಲಿ ಕ್ಷೇತ್ರದಲ್ಲಿ ಜೆಡಿಎಸ್ ಬಲವರ್ಧನೆ

ಮಾಜಿ ಶಾಸಕ ಅಶ್ವಿನ್ ಕುಮಾರ್ ವಿಶ್ವಾಸ




ತಿ.ನರಸೀಪುರ, ನ.18– ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಕಾರ್ಯಕರ್ತರು, ಹಿರಿಯ ಮುಖಂಡರ ಮಾರ್ಗದರ್ಶನದೊಂದಿಗೆ ಕ್ಷೇತ್ರದಲ್ಲಿ ಪಕ್ಷದ ಶಕ್ತಿ ಅನಾವರಣಗೊಳ್ಳಲಿದ್ದು, ಉತ್ತಮ ಫಲಿತಾಂಶ ಬರಲಿದೆ ಎಂದು ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಕಳೆದ ಬಾರಿಯ ಚುನಾವಣೆಯಲ್ಲಿ ಕೆಲವೊಂದು ಕಾರಣಗಳಿಂದ ನಮಗೆ ಹಿನ್ನಡೆ ಉಂಟಾಗಿರಬಹುದು, ಆದರೆ ಈ ಬೆಳವಣಿಗೆಯಿಂದ ಯಾರೂ ವಿಚಲಿತರಾಗಿಲ್ಲ, ಧೈರ್ಯ ಕಳೆದುಕೊಂಡಿಲ್ಲ. ಕಾರ್ಯಕರ್ತರು ಹಾಗೂ ಪಕ್ಷದ ಮುಖಂಡರು ಹುಮ್ಮಸ್ಸಿನಿಂದಲೇ ಕ್ಷೇತ್ರದಲ್ಲಿ ಎಂದಿನಂತೆ ಪಕ್ಷದ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ, ಚುನಾವಣೆಯಲ್ಲಿ ಬಂದ ಫಲಿತಾಂಶ ಸ್ವೀಕರಿಸಿ ಆಗಿರುವ ಲೋಪದೋಷಗಳನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಉತ್ತಮ ಫಲಿತಾಂಶ ಬರಲು ಕಾರ್ಯಕ್ರಮ ಹಮ್ಮಿಕೊಳ್ಳುವ ಕೆಲಸ ಮಾಡುತ್ತೇವೆ ಎಂದು ಅವರು ನುಡಿದರು.

ಕಾರ್ಯಕರ್ತರು, ಮುಖಂಡರಿಗೆ ಒಳ್ಳೇ ಕಾಲ ಬರಲಿದೆ!: ಜೆಡಿಎಸ್ ಪಕ್ಷದ ಕಾರ್ಯಕರ್ತರು ಕ್ಷೇತ್ರದಲ್ಲಿ ಪಕ್ಷದ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಪಕ್ಷವನ್ನು ಬಲಪಡಿಸುವ ಕೆಲಸ ಮಾಡಬೇಕಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡ ಹಾಗೂ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಮುಂದಿನ ದಿನಗಳಲ್ಲಿ ಕಾರ್ಯಕರ್ತರು ಹಾಗೂ ಮುಖಂಡರಿಗೆ ಒಳ್ಳೆಯ ದಿನಗಳು ಬರಲಿವೆ ಎಂದು ಅಶ್ವಿನ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಜೆಡಿಎಸ್ ಕ್ಷೇತ್ರಾಧ್ಯಕ್ಷ ಸಿ.ಬಿ. ಹುಂಡಿ ಚಿನ್ನಸ್ವಾಮಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಶಂಭುದೇವನಪುರ ರಮೇಶ್, ವೀರೇಶ್, ಜಿಪಂ ಮಾಜಿ ಸದಸ್ಯರಾದ ಎಸ್ .ಎನ್. ಸಿದ್ದಾರ್ಥ್, ಜೈಪಾಲ್ ಭರಣಿ, ಕೆ.ಎನ್. ಪ್ರಭುಸ್ವಾಮಿ. ವೈ. ಎಸ್. ರಾಮಸ್ವಾಮಿ, ಮೂಗೂರು ಶಿವಮೂರ್ತಿ, ಶಿವು, ಸೋಸಲೆ ರಾಜೇಶ್, ತಿರುಮಕೂಡಲು ಜಯರಾಮ, ಗುರುಪ್ರಸಾದ್, ಶೇಖರಪ್ಪ, ಉಮಾಪತಿ, ಕನ್ನಳ್ಳಿ ಶಿವಕುಮಾರ್, ಅಡುಗೆ ಕಂಟ್ರಾಕ್ಟರ್ ರಾಜಪ್ಪ , ಚೇತನ್ ಶೆಟ್ಟಿ, ನಿಲಸೋಗೆ ಮಹೇಶ್, ಮತ್ತಿತರು ಹಾಜರಿದ್ದರು.


ಭಾರತೀಯ ಜನತಾ ಪಾರ್ಟಿಯ
ನೂತನ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡ
ನಂತರ ಪ್ರಥಮ ಬಾರಿಗೆ
ಸಾಂಸ್ಕೃತಿಕ ನಗರಿ ಮೈಸೂರಿಗೆ
ಆಗಮಿಸುತ್ತಿರುವ ಸನ್ಮಾನ್ಯ
ಶ್ರೀ ಬಿ.ವೈ. ವಿಜೇಂದ್ರ
ರವರಿಗೆ
ಹೃದಯಪೂರ್ವಕ ಸುಸ್ವಾಗತ ಹಾಗೂ
ಕರ್ನಾಟಕ ರಾಜ್ಯ ವಿಧಾನ ಸಭೆಯ
ವಿರೋಧ ಪಕ್ಷದ ನಾಯಕರಾಗಿ
ಆಯ್ಕೆಯಾಗಿರುವ
ಹಿರಿಯ ನಾಯಕರಾದ ಸನ್ಮಾನ್ಯ
ಶ್ರೀ ಆರ್. ಅಶೋಕ್
ರವರಿಗೆ
ಅಭಿನಂದನೆಗಳು
ಎಲ್ ನಾಗೇಂದ್ರ
ಮಾಜಿ ಶಾಸಕರು ಚಾಮರಾಜ ಕ್ಷೇತ್ರ ಮೈಸೂರು